Janab J. MOHAMED IMAM.—Only five minutes more, Sir. Sometime back the Food Minister, speaking about the collection of land revenue, said that he is going to collect land revenue in kind, instead of cash. All these are important policies and measures on which this House should be consulted. On the other hand the Chief Minister is making these announcements as if he is in the good old days. I think he is undemocratic. I request him, that hereafter whenever he takes any decision or passes any Government order on such matters he must consult the Members of this House and seek their opinion.

Sir, a certain thing happened recently. Simply because an Hon'ble Member of this House expressed his opinion, without consulting the Members of this House, the Chief Minister issued an order the same day and terminated the hoisting of the State Flag and the singing of 'Kayou Sri Gowri'. Even though the House was in session, he ignored its existence. I do not know whether it is legal or illegal; but unceremoniously and in a dictatorial

(JANAB J. MOHAMED IMAM).

way he passed a Government order. It is not in keeping with the democratic system. After all, the administration is not carried on by the Ministers alone, but by the Ministry and the Members of this House. It is a joint responsibility. We are as much responsible for the administration as you are. If anything adverse happens to the State, if any bad name comes to the State, we are also responsible and it is your duty therefore to consult us on all important matters.

Sir, I thank you very much and thank the Members of this House for their kind indulgence. I have not said anything to wound anybody's feelings. Whatever I have said I have said it as a sportsman and I have expressed whatever I have felt like saying. It is left to you to judge whether it is right or wrong.

ಶ್ರೀ ಎಂ. ಶಂಕರಲಿಂಗೇಗೌಡರು.—ಕಾಂಗ್ರೆಸ್ಸಿನವರೇ ಮಾತನಾಡುತ್ತಾರೆ! ಇನ್ನು ಯಾರೂ ಇಲ್ಲ.

Mr. SPEAKER.—It is not so. The Hon'ble Member must not pass such rash remarks.

ಶ್ರೀ ಎ. ವಿ. ನರಸಿಂಹರೆಡ್ಡಿಯವರು (ಬೆಂಗಳೂರು–ದಕ್ಷಿಣ ತಾಲ್ಲೂಕು).—ಮಾನ್ಯ ಅಧ್ಯಕ್ಷರೇ, ನಾನು ಈ ಆಯವ್ಯಯ ಪಟ್ಟಿಯನ್ನು ಸ್ವಾಗತಿಸುತ್ತೇನೆ. ಇದರ ವಿಚಾರವಾಗಿ ಮಾತನಾಡುವುದಕ್ಕೆ ಮೊದಲು, ಈ ಆಯವ್ಯಯ ಪಟ್ಟಿಯ ಮೇಲೆ ಮಾತನಾಡುತ್ತಾ, ನಮ್ಮ ವಿರೋಧಪಕ್ಷದ ನಾಯಕರು ಹೇಳಿರತಕ್ಕ ವಿಚಾರಗಳಿಗೆ ಉತ್ತರ ರೂಪವಾಗಿ ಕೆಲವು ವಿಷಯಗಳನ್ನು ಹೇಳ ಬಯಸುತ್ತೇನೆ. ಜನಾಬ್ ಇಮಾಂರವರು, ಸರ್ಕಾರದ ಬೇರೆಬೇರೆ ಇರಾಖೆಗಳಿಗೆ ಸಂಬಂಧಪಟ್ಟ ಫಂಡುಗಳಿಂದ ಹಣ ತೆಗೆದು ತಮ್ಮ ಸಾಧಾರಣ ಖರ್ಚು ವೆಚ್ಚಗಳಿಗೆ ಒದಗಿಸಬಾರದಾಗಿತ್ತು ಎಂದು, ಒಂದು ಆಕ್ಷೇಪಣಿಯನ್ನು ಸೂಚಿಸಿದ್ದಾರೆ. ಅವರು ಒಂದಂಶವನ್ನು ಮನಗಾಣಬೇಕು. ನಾವು ವರ್ಷೇವರ್ಷೇ ಪ್ರಗತಿದಾರಿಯಲ್ಲಿ ಹೋಗಬೇಕೆಂದಿರತಕ್ಕ ಕಾಲ ಇದು. ನಮಗೆ ಜೀವನದ ಸಮಸ್ಯೆಗಳು ವಿಪುಲವಾಗಿ ದಿನೇದಿನೇ ಬೆಳೆಯುತ್ತಿವೆ. ನಮ್ಮ ಆದಾಯ ಒಂದು ಕಡೆ ಕಡಮೆ ಬೀಳುತ್ತಿದೆ. ಇಂಥ ಸನ್ನಿವೇಶದಲ್ಲಿ ದೇಶದ ಮುಂದಿರತಕ್ಕ ಸಮಸ್ಯೆಗಳನ್ನು ಬಗೆಹರಿಸಲು ಯಾವುದೇ ಭಾಗದ ಹಣವನ್ನು ತೆಗೆದು ನಮ್ಮ ಆಡಳಿತವನ್ನು ಮತ್ತು ನಮ್ಮ ಯೋಜನೆಗಳನ್ನು ನಡೆಸಿಕೊಂಡು ಹೋಗತಕ್ಕ ದಾರಿಯಲ್ಲಿ ಖರ್ಚುಮಾಡುವುದು ತಪ್ಪಾಗರಾರದೆಂದು ನನ್ನ ಸ್ಪಷ್ಟ ಅಭಿಪ್ರಾಯವಾಗಿದೆ. ನಮ್ಮ ಭಾರತದ ಕಾಂಗ್ರೆಸ್ಸಿನ ಧ್ಯೇಯವಾದರೂ ಕೂಡ ಜಾತ್ಯಾತೀತ ಸಹಕಾರ ಸಾಮ್ರಾಜ್ಯ ಸ್ಥಾಪನೆ ಮಾಡುವುದು. ಅಂಥ ಸಾಮ್ರಾಜ್ಯವನ್ನು ಸ್ಥಾಪನೆ ಮಾಡುವುದಕ್ಕೆ 5 ವರ್ಷಗಳ ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ. ಅದನ್ನೇ ನಾವೂ ನಮ್ಮ ಮೈಸೂರು ದೇಶಕ್ಕೆ ಸರಿ ಹೋಗುವಂತೆ ಆಳವಡಿಸಿಕೊಂಡು ಅದನ್ನು ಕಾರ್ಯಗತ ಮಾಡುವ ರೀತಿಯಲ್ಲಿ ನಮ್ಮ ಬಡ್ಜೆಟ್ಟನ್ನು ಪ್ರತಿವರ್ಷವೂ ರೂಪಿಸುತ್ತಿದ್ದೇವೆ. ಕಳೆದ ವರ್ಷ ಈ ಐದು ವರ್ಷಗಳ ಯೋಜನೆ ನಮ್ಮ ಸಂಸ್ಥಾನದಲ್ಲಿ ಪ್ರಾರಂಭಿಸಲ್ಪಟ್ಟಿತು. ನಾವು ಈಗಿನ ಆಯವ್ಯಯಪಟ್ಟಿಯನ್ನು ಆ ಐದು ವರ್ಷಗಳ ಯೋಜನೆಯ ಎರಡನೆಯ ವರ್ಷದ ಹಂತದಲ್ಲಿ ಸಿದ್ಧಪಡಿಸಿದವರಾಗಿದ್ದೇವೆ. ಆದ್ದರಿಂದ ನಾವು ಮುಖ್ಯವಾಗಿ ಈ ಆಯವ್ಯಯ ಪಟ್ಟಿಯು ಸರಿಯಾಗಿದೆಯೇ ಇಲ್ಲವೇ ಎಂಬುದನ್ನು ತೀರ್ಮಾನಿಸಬೇಕಾದರೆ, ಇದು ಈ ಎರಡನೆಯ ವರ್ಷದ ಪಂಚವಾರ್ಷಿಕ ಯೋಜನೆಯ ಅನೇಕ ಕೆಲಸಕಾರ್ಯಗಳನ್ನು ಯಾವ ರೀತಿ ತೂಗಿಸಿಕೊಂಡುಹೋಗುತ್ತದೆ, ಆ ಕಾರ್ಯಕ್ರಮಗಳಿಗೆ ಹಣವನ್ನು ಒದಗಿಸತಕ್ಕ ದಾರಿಯಲ್ಲಿದೆಯೇ, ಅದಕ್ಕೆ ಸಾಧಕವಾಗಿದೆಯೇ ಎಂಬುದನ್ನು ಪರಿಶೀಲಿಸಬೇಕಾದದ್ದು ಮುಖ್ಯ. ಈ ರೀತಿಯಾಗಿ ನೋಡುವುದಾದರೆ, ವಿದ್ಯಾಭ್ಯಾಸ, ವ್ಯವಸಾಯ, ವೈದ್ಯ ಮುಂತಾಗಿ ಅನೇಕ ಇರಾಖೆಗಳಿಗೆ ಸಾಕಾದಷ್ಟು ಹಣವನ್ನು ಈ ಪಂಚವಾರ್ಷಿಕ ಯೋಜನೆಯು ಎರಡನೆಯ ಹಂತದ ಕಾರ್ಯಕ್ರಮಗಳನ್ನು ಪೂರೈಸುವುದಕ್ಕೆ ನಮ್ಮ ಸರ್ಕಾರದವರು ಒದಗಿಸಿದ್ದಾರೆ. ತಮಗೆಲ್ಲರಿಗೂ ಗೊತ್ತಿರುವಂತೆ ನಾವು ಯಾವುದೇ ಕೆಲಸವನ್ನು ಮಾಡಬೇಕಾಗಿದ್ದರೂ ಒಂದು ಯೋಜನೆಯ ದಾರಿಯಲ್ಲಿ ಹೋಗಬೇಕು. ಆದ್ದರಿಂದ ದೇಶದಲ್ಲಿನ ಆರ್ಥಿಕ ಸ್ಥಿತಿ ಕೆಲವು ದೃಷ್ಟಿಗಳಿಂದ ಕಡಮೆ ಬೀಳುವುದಾದರೂ, ಈ ಒಂದು ಯೋಜನೆಗೆ ಹಣವನ್ನು ಒದಗಿಸಿದ್ದೇ ಆದರೆ, ಮತ್ತು ಜನತೆಯ ಆವಶ್ಯಕತೆಗಳನ್ನು ಪೂರೈಸುವಂತಾದರೆ, ಈ ಫಂಡುಗಳ ಹಣವನ್ನು ತೆಗೆದು ಖರ್ಚುಮಾಡುವುದರಲ್ಲಿ ಹಿಂದು ಮುಂದು ಯೋಚನೆ ಮಾಡಬೇಕಾದುದಿಲ್ಲವೆಂದು ಹೇಳುತ್ತೇನೆ. ಆ ದೃಷ್ಟಿಯಿಂದ ಈ ಆಯವ್ಯಯ ಪಟ್ಟಿಯನ್ನು ನಾವು ನೋಡುವುದಾದರೆ ನಮಗೆ ಇಲ್ಲ ಸಾಕಾದಷ್ಟು ತೃಪ್ತಿಸಮಾಧಾನಗಳು ಕಾಣಬರುತ್ತವೆಂದು ಹೇಳ ಬಯಸುತ್ತೇನೆ.

ಇನ್ನು ವಿದ್ಯಾಭ್ಯಾಸಕ್ಕೆ ಈಗಿನ ಸರ್ಕಾರದವರು ಆಯವ್ಯಯದ ಪಟ್ಟಿಯಲ್ಲಿ ಕಳೆದ ವರ್ಷಕ್ಕಿಂತಲೂ ಹೆಚ್ಚಿನ ಹಣವನ್ನೊದಗಿಸಿದ್ದಾರೆ. ಐದು ವರ್ಷದ ಯೋಜನೆಯ ಎರಡನೆಯ ವರ್ಷದ ಪಟ್ಟಿಯಲ್ಲಿ ತೋರಿಸಿರುವಷ್ಟು ಹಣವನ್ನೊದಗಿಸದಿದ್ದರೂ ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನೂ ಒದಗಿಸಿದ್ದಾರೆಂದು ನನ್ನ ಭಾವನೆ. ಈ ಸಂದರ್ಭದಲ್ಲಿ ಒಂದು ಮಾತು ಹೇಳಬೇಕಾಗಿದೆ. ಜಾತ್ಯಾತೀತರಾಷ್ಟ್ರವನ್ನು ಕಟ್ಟತಕ್ಕದ್ದು ಕಾಂಗ್ರೆಸ್ಸಿನ ಧ್ಯೇಯವೆಂದು ಏನು ಹೇಳರಾಗಿದೆಯೋ ಅದು ಇದರಲ್ಲಡಗಿದೆ. ವಿದ್ಯಾಭ್ಯಾಸದ ಇರಾಖೆಯಲ್ಲಿ, ಮುಖ್ಯವಾಗಿ ಮಾಧ್ಯಮಿಕ ಮತ್ತು ಪ್ರೈಮರಿ ಶಾಲೆಗಳಿಗೆ ಹೆಚ್ಚಿನ ಹಣವನ್ನೊದಗಿಸಿದ್ದಾರೆ. ಈ ಸೌಲಭ್ಯ ಸಾಮಾನ್ಯವಾಗಿ ಎಲ್ಲ ಗಂಡು ಮತ್ತು ಹೆಣ್ಣುಮಕ್ಕಳಿಗೂ ಒದಗಿಸಿದೆ. ಮುಸಲ್ಮಾನರಿಗೆ ಉರ್ದು ವಿದ್ಯಾಭ್ಯಾಸಕ್ಕೆ ಗಂಡು ಮತ್ತು ಹೆಣ್ಣುಮಕ್ಕಳ ಪಾಠಶಾಲೆಗಳಿಗಾಗಿ ಹಣವನ್ನೊದಗಿಸಿದ್ದಾರೆ. ಇನ್ನೊಂದು ಕಡೆ ಹರಿಜನ ವಿದ್ಯಾರ್ಥಿಗಳಿಗೆ ಸೌಲಭ್ಯಗಳನ್ನೊದಗಿಸಲು ಹಣವನ್ನೊದಗಿಸಿರುವುದು ಕಾಣುತ್ತದೆ. ಈ ರೀತಿ ಒದಗಿಸಿರುವ ಹಣವನ್ನು ಲೆಕ್ಕ ಹಾಕಿದರೆ ಸುಮಾರು 20 ಲಕ್ಷಕ್ಕೂ ಮೀರಿದೆ. ಯಾವ ಆದರ್ಶ ನಮ್ಮ ಮುಂದಿದೆಯೋ ಅದನ್ನು ಸಾಧಿಸಬೇಕಾದರೆ, ನಮ್ಮ ನಿತ್ಯ ಜೀವನದಲ್ಲಯೂ ಅದನ್ನು ನಮ್ಮ ದೃಷ್ಟಿಯ ಮುಂದಿಟ್ಟುಕ್ಕೊಂಡು ಕೆಲಸ ಮಾಡುವುದು ಆವಶ್ಯಕವೆಂದು ನನ್ನ ಭಾವನೆ. ಈ ದೃಷ್ಟಿಯಿಂದ ನೋಡಿದರೆ, ಒಂದು ಕೋಮಿನ ಅಥವಾ

ಕೋಮುಗಳ ಹಿತದೃಷ್ಟಿಯಿಂದ ಮಾತ್ರ ಕೆಲವು ಪಾಠ ಶಾಲೆಗಳಿವೆ. ಜಾತ್ಯಾತೀತರಾಷ್ಟ್ರದ ಧ್ಯೇಯವಿರುವ ಪಕ್ಷ ಸರ್ಕಾರದಲ್ಲರುವಾಗ ಇಂತಹ ಸಂಸ್ಥೆಗಳಿಗೆ ಹಣವನ್ನೊದಗಿಸುವುದು ಅಷ್ಟು ಉಚಿತವಾಗಲಾರದು. ಇದು ಸರಿಯಲ್ಲ ಎಂದು ನನ್ನ ಭಾವನೆ.

ವಿಶ್ವವಿದ್ಯಾನಿಲಯದ ವಿಚಾರವನ್ನು ಕೂಡ ನಾನು ಹೇಳಿದವನಾಗಿದ್ದೇನೆ. ವಿಶ್ವವಿದ್ಯಾನಿಲಯದಲ್ಲಿ, ಈಗ ಅನೇಕ ಮಿತ್ರರಿಗೆ ಗೊತ್ತಿರುವ ಹಾಗೆ, ರೆಕ್ಟರುಗಳಿಗೆ ಸಾಮಾನ್ಯವಾಗಿ ನೂರು ರೂಪಾಯಿಗಳಿಂದ ವೇತನವನ್ನು ಪ್ರಾರಂಭಮಾಡುತ್ತಾರೆ. ನಿಜವಾಗಿ ಅವರು ಉತ್ತಮ ಶಿಕ್ಷಣವನ್ನು ಕೊಡಬೇಕಾದರೆ ಉತ್ತಮ ದರ್ಜೆಯಲ್ಲಿ ವ್ಯಾಸಂಗಮಾಡಿ ಜೀವನವನ್ನು ಸಮಾಜದ ದೃಷ್ಟಿಯಲ್ಲಿ ಗೌರವಯುತವಾದ ರೀತಿಯಲ್ಲಿ ನಡೆಸಬೇಕಾದರೆ, ಹೀಗೆ ಅವರ ವೇತನವನ್ನು ನೂರು ರೂಪಾಯಿಗಳಿಂದ ಪ್ರಾರಂಭವಾಡಿದರೆ ಸಾಲದು. ಕೊನೆಯ ಪಕ್ಷ 150 ರೂಪಾಯಿಗಳಿಗೆ ಇದನ್ನು ಏರಿಸಬೇಕೆಂದು ಸಲಹೆಮಾಡುತ್ತೇನೆ.

ಇನ್ನು ನಮ್ಮ ಹಳ್ಳಿಗಾಡುಗಳಿಗೆ ವಿದ್ಯುಚ್ಛಕ್ತಿಯನ್ನೊದಗಿಸುವ ಕಾರ್ಯಕ್ರಮವನ್ನು ಸರ್ಕಾರದವರು ಕೈಕೊಂಡಿರುವುದು ನಮ್ಮ ಗಮನಕ್ಕೆ ಬರುತ್ತದೆ. ಈ ದಿವಸ ನಮ್ಮ ದೇಶದ ಅನ್ನ ಸಮಸ್ಯೆಯ ದೃಷ್ಟಿಯಿಂದ ನೋಡಿದರೆ ಅದಷ್ಟು ಹೆಚ್ಚು ವಿದ್ಯುಚ್ಛಕ್ತಿಯನ್ನು ಹಳ್ಳಿಗಳಿಗೆ ಒದಗಿಸುವುದು ಧರ್ಮ. ಈ ಆಯವ್ಯಯದ ಪಟ್ಟಿಯಲ್ಲಿ ಒದಗಿಸಿರುವ ಹಣ ಈ ಬಾಬಿಗೆ ಸಾಲದು. ಇನ್ನೂ ಹೆಚ್ಚು ಹಣವನ್ನೊದಗಿಸಬೇಕಾಗಿತ್ತೆಂದು ನನ್ನ ಅಭಿಪ್ರಾಯ. ಒಟ್ಟಿನಲ್ಲಿ ನಮ್ಮಮೈಸೂರುದೇಶದ ಈ ಆಯವ್ಯಯ ಪಟ್ಟಿ, ನಾನಾ ದೃಷ್ಟಿಗಳಿಂದ ಪರಿಶೀಲಿಸಿದರೆ, ತೃಪ್ತಿಕರವಾಗಿದೆ. ದೇಶದಲ್ಲಿ ಒಂದು ಕೋರಾಹಲವೆದ್ದಿತ್ತು, ನಾಲ್ಕು ಕೋಟಿ ರೂಪಾಯಿ ಕದಮಟ್ಟೀಳಕ್ಕೆ ಆಯವ್ಯಯ ಪಟ್ಟಿಯನ್ನು ಮಂಡಿಸಬೇಕಾದ ಪರಿಸ್ಥಿತಿ ಬರಬಹುದೆಂದು ಆದು ಹೋಗಿ ಈಗ ಕೇವಲ 101 ಚಿಲ್ಲರೆ ಲಕ್ಷ ರೂಪಾಯಿ ಖೋತಾ ಇರುವ ಆಯವ್ಯಯದ ಪಟ್ಟಿಯನ್ನು ನಮ್ಮ ಹಣಕಾಸಿನ ಮಂತ್ರಿಗಳು ಮಂಡಿಸಿದ್ದಾರೆ. ಇವರ ಉದ್ದೇಶ ಸಫಲವಾಗಿ, ದೇಶ ಮುಂದೆ ಆರ್ಥಿಕಾಭಿವೃದ್ಧಿಹೊಂದಿ ಅಭ್ಯುದಯ ಹೊಂದುವುದೆಂದು ನಂಬಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಹನುಮಯ್ಯನವರು (ಹಿರಿಯೂರು-ಅನುಸೂಚಿತ ಜಾತಿಗಳು):—ಅಧ್ಯಕ್ಷ ಮಹಾಶಯರೆ, ಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಮುಂದಿಟ್ಟಿರತಕ್ಕ ಬಡ್ಜೆಟ್ಟನ್ನು ನೋಡಿ ಬಹಳ ಸಮಾಧಾನವಾಗಿದೆ. ಈ ವರ್ಷದಲ್ಲಿ ಒಂದು ಕೋಟಿ ಒಂದು ಲಕ್ಷರೂಪಾಯಿ ಖೋತಾ ಕಂಡರೂ ಕೂಡ ಹೆಚ್ಚಿನ ಹಣವನ್ನು ಉಳಿಸುತ್ತಾರೆಂದು ನನಗನ್ನಿಸುತ್ತದೆ. ಕಾರಣವೇನೆಂದರೆ, ಮುಖ್ಯ ಮಂತ್ರಿಗಳೇ ಹಣಕಾಸಿನ ಇರಾಖೆಯನ್ನು ತೆಗೆದುಕೊಂಡಿದ್ದಾರೆ; ಸಾಧಾರಣವಾಗಿ ಹಿಂದೆ ಮುಖ್ಯ ಮಂತ್ರಿಗಳಲ್ಲದೇ ಇರುವವರು ಈ ಇರಾಖೆಯನ್ನು ತೆಗೆದುಕೊಳ್ಳುತ್ತಿದ್ದರು. ಇದನ್ನು ನೋಡಿ ಇದರಲ್ಲಿ ಒಂದು ಹೆಚ್ಚಿನ ವೈಶಿಷ್ಟ್ಯ ನನಗೆ ಕಂಡುಬಂದಿತು ಅದೇನೆಂದರೆ, ಸಾಮಾನ್ಯವಾಗಿ ಮನೆಯ ಯಜಮಾನರು ಖಜಾನೆ ಬೀಗವನ್ನಿಟ್ಟುಕೊಂಡಿರುತ್ತಾರೆಯೇ ಏನಾ ಬೇರೆಯವರಿಗೆ ಕೊಡುವುದಿಲ್ಲ. ಅದೇ ರೀತಿ ದೇಶದ ನಾಯಕರು ಈ ಹಣದ ವಿಷಯದಲ್ಲಿ ಹೆಚ್ಚಿನ ಎಚ್ಚರಿಕೆಯನ್ನು ತೆಗೆದುಕೊಂಡು ಈ ಇರಾಖೆಯನ್ನು ಅವರೇ ತೆಗೆದುಕೊಂಡಿರುವುದರಿಂದ ಈ ವೈಶಿಷ್ಟ್ಯ ಕಂಡುಬರುತ್ತಿದೆ. ಇದು ದೇಶದ ಪುರೋಭಿವೃದ್ಧಿಗೆ ಕಾರಣವಾಗಿದೆಯೆಂದು ಹೇಳುವುದರಲ್ಲಿ ಏನೂ ಅನುಮಾನವಿಲ್ಲ. ಜನಾಬ್ ಇಮಾಂ ಸಾಹೇಬರು ಹಿಂದೆ ರಿಜರ್ವ್‌ನಲ್ಲಿದ್ದ ಹಣವೆಲ್ಲವನ್ನೂ ಖರ್ಚುಮಾಡಿದ್ದಾರೆಂದು ಹೇಳಿದರು. ಜವಾಬ್ದಾರಿಯಿಂದ ಕೂಡಿದ ಹಿಂದಿನ ಮಂತ್ರಿಗಳು ಮತ್ತು ಈಗಿನ ಮಂತ್ರಿಗಳು ಕೂಡ ದೇಶಾಭಿವೃದ್ಧಿ ಕಾರ್ಯಗಳಿಗಾಗಿ ಹೆಚ್ಚು ಹಣವನ್ನೊದಗಿಸಿದ್ದಾರೆಂಬುದನ್ನು ಅವರು ಒಪ್ಪಲೇ ಬೇಕಾಗಿದೆ. ಏಕೆಂದರೆ, ಪ್ರಜಾಸರ್ಕಾರ ಸ್ಥಾಪನೆಯಾಗುವುದಕ್ಕಿಂತ ಮುಂಚೆ ಸರ್ಕಾರದವರು ಎಷ್ಟು ಹಣವನ್ನು ವಿದ್ಯಾಭ್ಯಾಸ ಮತ್ತು ಇತರ ರಾಷ್ಟ್ರಾಭ್ಯುದಯ ಕಾರ್ಯಗಳಿಗೆ ಖರ್ಚು ಮಾಡುತ್ತಿದ್ದರು, ಈಗ ಎಷ್ಟು ಮಾಡುತ್ತಿದ್ದಾರೆ ಎಂಬುದನ್ನು ಹೋಲಿಸಿ ನೋಡಿದರೆ ಡೆನ್ನಾಗಿ ಮಂದ ಟ್ಯಾಗುತ್ತದೆ. ಈಗ ಮುಖ್ಯವಾದ ವಿದ್ಯಾಭ್ಯಾಸದ ಬಾಬಿಗೆ 3½ ಕೋಟಿ ರೂಪಾಯಿಗಳು ಖರ್ಚಾಗುತ್ತವೆ. ಇದರ ವಿಚಾರದಲ್ಲಿ ಒಂದು ಮಾತು. ಈಗಿನ ವಿದ್ಯಾಭ್ಯಾಸ ಹಿಂದೆ ಬ್ರಿಟಿಷರಿದ್ದಕಾಲದಲ್ಲಿ ಮಾತ್ರ ಬೇಕಾಗಿತ್ತು. ಆದರೆ ಈಗ ಬ್ರಿಟಿಷರು ನಮ್ಮದೇಶವನ್ನು ಬಿಟ್ಟು ಹೋಗಿದ್ದಾರೆ. ಆದಕಾರಣ ಅದೇ ವಿದ್ಯಾಭ್ಯಾಸ ಈಗಿನ ಕಾಲಕ್ಕೆ ಸರಿಯಾಗಿಲ್ಲವೆಂದು ಹೇಳಬೇಕಾಗಿದೆ. ಈ ಹೊತ್ತು ದೇಶವನ್ನು ಕಟ್ಟತಕ್ಕ ವಿದ್ಯಾಭ್ಯಾಸ ಬೇಕು. ಇಂಗ್ಲೀಷಿನವರು ತಮ್ಮ ಕೈಕೆಳಗೆ ನೌಕರಿ ಅಥವಾ ಕೆಲಸಕ್ಕೆ ಇಟ್ಟುಕೊಳ್ಳುವುದಕ್ಕೆ ಮಾತ್ರ ಬೇಕಾದ ವಿದ್ಯಾಭ್ಯಾಸ ಕ್ರಮವನ್ನು ನಮ್ಮದೇಶದಲ್ಲಿ ಅನುಸರಿಸಿದರು. ಈಗ ನಿಜವಾಗಿ ಈ ವಿದ್ಯಾಭ್ಯಾಸಕ್ರಮವನ್ನು ಬದಲಾಯಿಸಲೇಬ್ರೇಕು. ನಮ್ಮ ಈಗಿನ ವಿದ್ಯಾ ಮಂತ್ರಿಗಳು ಕೂಡ ಈಗಿನ ವಿದ್ಯಾಭ್ಯಾಸ ಪದ್ಧತಿಯನ್ನು ಬದಲಾವಣೆ ಮಾಡಬೇಕೆಂದು ಆಲೋಚನೆ ಮಾಡುತ್ತಿದ್ದಾರೆ. ವಿದ್ಯಾಭ್ಯಾಸ ಗ್ರಾಮಾಂತರಗಳಲ್ಲಿ ನಡೆಯತಕ್ಕದ್ದಾಗಲಿ ಅಥವ ಪಟ್ಟಣಗಳಲ್ಲಿ ನಡೆಯುವುದೇ ಆಗಲಿ, ವ್ಯವಸಾಯದ ಕಡೆಗೆ ಹೆಚ್ಚು ಗಮನ ಕೊಡಬೇಕು. ಎಳತನದಿಂದಲೂ ವ್ಯವಸಾಯ ಮಾಕ್ಕಳ ಗಮನದಲ್ಲಿದ್ದರೆ, ಮುಂದೆ ಅವರು ವಿದ್ಯಾಭ್ಯಾಸ ಪೂರೈಸಿದಮೇಲೆ, ದೇಶದ ವ್ಯವಸಾಯದ ಸ್ಥಿತಿಗತಿಗಳನ್ನೂ ಪ್ರಪಂಚದ ವಿಷಯಗಳನ್ನೂ ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಮುಖ್ಯವಾಗಿ ವಿದ್ಯಾಭ್ಯಾಸ ಕ್ರಮದಲ್ಲಿ ಈ ಬದಲಾವಣೆ ಆಗಬೇಕಾದುದು ಅಗತ್ಯವೆಂದು ಸೂಚಿಸುತ್ತೇನೆ.

ಈಗ ಗ್ರಾಮಾಂತರಗಳಲ್ಲಿ ವಿದ್ಯುಚ್ಛಕ್ತಿಯನ್ನು ಹೆಚ್ಚಾಗಿ ಕೊಡಬೇಕಾದದು ಅಗತ್ಯವೆಂದು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏಕೆಂದರೆ, ಹೊದಲಿಂದಲೂ ಹಿಂದಿನ ಮತ್ತು ಇಂದಿನ ಸರ್ಕಾರಗಳು ಪಟ್ಟಣಗಳನ್ನು ಶೃಂಗಾರ ಮಾಡುವುದಕ್ಕೆ ದೀಪ ಹಾಕಿಸುವುದಕ್ಕೆ ಜಾಗ್ರತೆ ವಿದ್ಯುಚ್ಛಕ್ತಿಯನ್ನು ಕೊಡುತ್ತಿವೆ. ಮುಖ್ಯವಾಗಿ ಗ್ರಾಮಾಂತರಗಳಲ್ಲಿ ನೀರಾವರಿ ವ್ಯವಸಾಯಕ್ಕೆ ವಿದ್ಯುಚ್ಛಕ್ತಿಯನ್ನೊದಗಿಸಿದರೆ ಆಹಾರ ಸಮಸ್ಯೆಯನ್ನು ಸುಲಭವಾಗಿ ಬಗೆಹರಿಸಬಹುದೆಂದು ಮನವಿ ಮಾಡಿಕೊಳ್ಳುತ್ತೇನೆ. ಈ ಹೊತ್ತು ನೀರನ್ನೆತ್ತಲು ಎತ್ತುಗಳನ್ನು ಕೊಂಡುಕೊಳ್ಳಬೇಕೆಂದರೆ ಕಷ್ಟ; ಒಂದು ಜೊತೆ ಎತ್ತುಗಳು ನಾಲ್ಕು ಐದು ಸಾವಿರದಿಂದ ಹತ್ತುಸಾವಿರ ರೂಪಾಯಿ ಬೆಲೆ ಬಾಳುತ್ತವೆ. ಹೀಗಿರುವಾಗ ರೈತ ಎತ್ತುಗಳನ್ನು ಕೊಂಡು ವ್ಯವಸಾಯಮಾಡಿ ದೇಶದ ಜನರಿಗೆ ಆಹಾರವನ್ನೊದಗಿಸಬೇಕೆಂದರೆ ಬಹಳ ಕಷ್ಟವಾಗುತ್ತದೆ.

2-30 P.M.

ನಿಜವಾಗಿ ರೈತನು ಎಷ್ಟು ಕಷ್ಟಪಡುತ್ತಾನೆ, ಅತನಿಗೆ ಇದರಿಂದ ಎಷ್ಟು ನಷ್ಟವಾಗುತ್ತದೆ ಎಂಬುದನ್ನು ತಾವು ಪರಿಗಣಿಸಿ. ಪಲ್ಲಾ ಒಂದಕ್ಕೆ ಕದ್ದಾಯವಾಗಿ 20ರೂಪಾ

(ಶ್ರೀ ಟಿ. ಹನುಮಯ್ಯನವರು)

ಯಿಗಳ ಧಾರಣೆ ಕೊಡಬೇಕೆಂದರೆ, ಅತನ ಕಷ್ಟವನ್ನು ನಿವಾರಣೆ ಮಾಡತಕ್ಕಬಗ್ಗೆ ತಾವು ಯಾರೂ ಆಲೋಚನೆ ಮಾಡುವುದಿಲ್ಲ ಎನ್ನಿಸುತ್ತದೆ. ಮುಖ್ಯವಾಗಿ ಕೈಗಾರಿಕೆಗಳೆಲ್ಲವೂ ಪಟ್ಟಣಗಳಲ್ಲೇ ಇದ್ದು, ಉತ್ಪತ್ತಿಯಾಗ ತಕ್ಕ ವಿದ್ಯುಚ್ಛಕ್ತಿಯನ್ನೆಲ್ಲಾ ನೀವು ಅವರಿಗೆ ಕೊಟ್ಟು, ವ್ಯವಸಾಯಾಭಿವೃದ್ಧಿಗೂ ಆಹಾರೋತ್ಪನ್ನದ ಬೆಳೆಗಳಿಗೂ ಅಡ್ಡಿ ಆತಂಕ ತರುತ್ತಿದ್ದೀರಿ. ತಾವು ಇದಿಗೇ ಷನ್ನಿಗೆ ಹೆಚ್ಚುಗಮನ ಕೊಡಬೇಕು ಮತ್ತು ಹಳ್ಳಿಯಲ್ಲರ ತಕ್ಕವರಿಗೆ ವ್ಯವಸಾಯಾಭಿವೃದ್ಧಿಗಾಗಿ ಹೆಚ್ಚು ಹಚ್ಚಾಗಿ ಎರೆಕ್ಟ್ರಿಕ್ ಪವರನ್ನು ಕೊಡಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಚಾರವೇನೆಂದರೆ, ನಮ್ಮ ದೇಶ ಸುಮಾರು ಶೇಕಡ 90ರಷ್ಟು ಮಂದಿ ವ್ಯವಸಾಯಗಾರರಿಂದ ಕೂಡಿರತಕ್ಕ ದೇಶವಾಗಿದೆ. ಪಾಶ್ಚಿಮಾತ್ಯರಾಷ್ಟ್ರಗಳಲ್ಲಾದರೇ ನೂರಕ್ಕೆ 25 ಜನರೂ ಸಹ ವ್ಯವಸಾಯ ಮಾಡತಕ್ಕವರಿರುವುದಿಲ್ಲ. ಇನ್ನುಳಿದ ಶೇಕಡ 75 ಮಂದಿ ಕೈಗಾರಿಕೆಗಳಲ್ಲಿ ನಿರತರಾಗಿರುತ್ತಾರೆ. ಆ ಪಾಶ್ಚಿಮಾತ್ಯ ರಾಷ್ಟ್ರಗಳವರಲ್ಲಿ ಶೇಕಡ 25ರಷ್ಟು ಜನ ಮಾತ್ರ ವ್ಯವಸಾಯದಲ್ಲಿ ನಿರತರಾಗಿದಾಗ್ಯೂ ಅವರು ಅವರ ದೇಶಕ್ಕೆ ಆಗುವಷ್ಟು ಬೆಳೆಯನ್ನು ಬೆಳೆದುಕೊಳ್ಳುವುದಲ್ಲದೆ ಹೊರಗಡೆಗೂ ಸಹ ರವಾನೆ ಮಾಡುವಷ್ಟು ಹೆಚ್ಚಾಗಿ ಆಹಾರವಸ್ತುಗಳನ್ನು ಬೆಳೆಯುತ್ತಿದ್ದಾರೆ. ಆದರೆ ನಮ್ಮ ದೇಶದಲ್ಲಿ ವ್ಯವಸಾಯ ಮಾಡತಕ್ಕವರ ಸಂಖ್ಯೆ 100ಕ್ಕೆ 80-90 ಇದ್ದಾಗ್ಯೂ ಕೂಡ ನಾವು ನಮ್ಮದೇಶಕ್ಕೂ ಸಹ ಸಾಲದಷ್ಟು ಆಹಾರಧಾನ್ಯಗಳನ್ನು ಬೆಳೆದು, ಸಾಲದ್ದಕ್ಕೆ ಹೊರದೇಶದವರಿಗೆ ಕೈಬೀಡುತ್ತಿದ್ದೇವೆ. ಇದು ನಿಜವಾಗಿಯೂ ಬಹಳ ನಾಚಿಕೆಗೇಡಾದದ್ದು. ಆದರೆ ಹೀಗಾಗುವುದಕ್ಕೆ ನಮ್ಮ ವ್ಯವಸಾಯ ಕ್ರಮದಲ್ಲೇನೋ ತಪ್ಪಿರಬೇಕು. ಅದನ್ನೀಗ ಕಂಡುಹಿಡಿಯಲು ನಾವು ಆಲೋಚನೆ ಮಾಡಬೇಕಾಗಿದೆ. ಈ ದಿವಸ ಸುಮಾರು 17 ಲಕ್ಷ ಎಕರೆ ಜಮೀನು ಸಾಗಾಗದೆ ಹಾಗೆಯೇ ಪಾಳು ಬಿದ್ದಿದೆ. ಹಳ್ಳಿಯಲ್ಲರತಕ್ಕ ಕೂಲಿಗಾರನಿಗೆ ವ್ಯವಸಾಯಕ್ಕೆ ಜಮೀನಿಲ್ಲ, ಸ್ವಲ್ಪ ಜಮೀನು ಕೊಡಿ ಎಂದರೆ—ಅದಕ್ಕೆ ಎಷ್ಟೋ ತಂಟೆ ತಕರಾರುಗಳನ್ನು ತಂದು ಒಡ್ಡುತ್ತಾರೆ. ಇದೂ ಅಲ್ಲದೆ ಹೀಗೆ ಜಮೀನು ಮಾಡತಕ್ಕವರಿಗೆ ಜಮೀನಿಲ್ಲದಿದ್ದು, ಬೇರೆ ಎಲ್ಲೋ ಪಟ್ಟಣದಲ್ಲಿ ಯಾವುದೋ ಕಸುಬಿನ ಮೇರೆ—ವ್ಯಾಪಾರವೋ ಮತ್ತೊಂದೋ ಮಗದೊಂದೋ ಮಾಡಿಕೊಂಡು ಇರತಕ್ಕವರಿಗೆ—100, 150, 250 ಎಕರೆ ಜಮೀನುಗಳನ್ನು ಕೊಡಲಾಗಿದೆ. ಇಂಥ ಜಮೀನಿನ ಮಾಲೀಕರಾದವರು ಒಬ್ಬರೂ ಹಳ್ಳಿಯಲ್ಲಿಲ್ಲ; ಅವರೆಲ್ಲಾ ಬೆಂಗಳೂರು ಮದ್ರಾಸ್, ಬೊಂಬಾಯಿ ಇತ್ಯಾದಿ ಸ್ಥಳಗಳಲ್ಲಿ ನಾನಾ ಉದ್ಯೋಗಗಳಲ್ಲಿ ನಿರತರಾಗಿದ್ದಾರೆ. ಆದಾಗ್ಯೂ ಸರ್ಕಾರ ಕೂಲಿಮಾಡತಕ್ಕವನಿಗೆ ಸಹಾಯ ಮಾಡುತ್ತಿಲ್ಲ. ದೇಶದಲ್ಲಿ ವ್ಯವಸಾಯ ಬಿದ್ದುಹೋಗಿದೆ. ಇನ್ನೂ ಹಳ್ಳಿಗಳಕಡೆ ಜಮೀನಿದ್ದು, ಪಟ್ಟಣದಲ್ಲಿ ವಾಸಮಾಡಿಕೊಂಡಿರತಕ್ಕವರು, ವ್ಯವಸಾಯ ಮಾಡುವ ರೈತನಿಗೆ ಗೊಬ್ಬರ, ಬೀಜದ ಕಾಳು ಇತ್ಯಾದಿಗಳಾವುದನ್ನೂ ಸರಿಯಾಗಿ ಕೊಡಿಸದೆ ಇರುವುದರಿಂದ ಜಮೀನು ಮಾಡತಕ್ಕವನಿಗೆ ಯಾವ ಪ್ರೋತ್ಸಾಹವಾಗಲಿ ಉತ್ಸಾಹವಾಗಲಿ ಇಲ್ಲವಾಗಿರುತ್ತದೆ. ನಮ್ಮದೇಶದಲ್ಲಿ ವ್ಯವಸಾಯಕ್ಕೆ ಬೇಕಾದಷ್ಟು ಜಮೀನಿದೆ; ಮಾಡತಕ್ಕ ಜನರೂ ಇದ್ದಾರೆ; ಆದರೆ ನಮಗೆ ಕ್ಷಾಮ ಮಾತ್ರ ತಪ್ಪಿಲ್ಲ. ಇದಕ್ಕೆಮುಖ್ಯ ಕಾರಣ ನಮ್ಮ ವ್ಯವಸಾಯದಲ್ಲಿ ಏನೋ ನ್ಯೂನತೆ ಯಿರಬೇಕು.

ಇನ್ನೊಂದು ವಿಚಾರವನ್ನು ನಾನು ಸರ್ಕಾರದವರ ಗಮನಕ್ಕೆ ತರುತ್ತೇನೆ. ದೇಶದಲ್ಲಿ ದಿನೇದಿನೇ ಪ್ರಜಾ ಸಂಖ್ಯೆ ಹೆಚ್ಚುತ್ತಿದೆ. ಇಲ್ಲಿಗೆ 10 ವರ್ಷಗಳ ಹಿಂದೆ ಎಷ್ಟು ಜಮೀನು ವ್ಯವಸಾಯವಾಗುತ್ತಿತ್ತೋ ಈಗಲೂ ಅಷ್ಟೇ ಜಮೀನು ವ್ಯವಸಾಯವಾಗುತ್ತಿದೆ. ಆದರೂ ಸಾಗುವಳಿ ಮಾಡುವುದು ದಿನದಿನಕ್ಕೂ ಕಡಮೆಯಾಗುತ್ತಿದೆ. ಇವೆಲ್ಲ ಕಾರಣಗಳಿಂದ ನಮಗೆ ಆಹಾರ ಸಾಕಾಗುತ್ತಿಲ್ಲ. ಬೆಳೆಗಳೂ ಸರಿಯಾಗಿ ಆಗುವುದಿಲ್ಲ. ಈ ಕಷ್ಟಗಳನ್ನೆಲ್ಲಾ ನಿವಾರಣೆ ಮಾಡಿ ದೇಶಕ್ಕೆ ಒಳ್ಳೆಯ ದಾಗುವಂತೆ ಆಲೋಚನೆ ಮಾಡಬೇಕೆಂದು ನಾನು ತಮ್ಮನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಗ್ರಾಮಾಂತರ ವಾಸಿಗಳಾದ ಕೂಲಿಗಾರರಿಗೆ ವ್ಯವಸಾಯಕ್ಕೆ ಜಮೀನನ್ನು ಕೊಟ್ಟು ತನ್ಮೂಲಕ ಹೆಚ್ಚು ಬೆಳೆ ಬೆಳೆಯುವಂತೆ ಮಾಡಬೇಕೆಂದು ತಮ್ಮನ್ನು ಪ್ರಾರ್ಥಿಸುತ್ತೇನೆ.

ಇನ್ನು ಮೂರನೆಯದಾಗಿ ಜನಾರೋಗ್ಯ ವಿಚಾರ. ಈ ಸಂಬಂಧವಾಗಿ ಹಿಂದಿನ ಸರ್ಕಾರದವರು ಏನು ನಡೆವಳಿಕೆಗಳನ್ನು ಅನುಸರಿಸಿಕೊಂಡು ಬರುತ್ತಿದ್ದರೋ ಈಗಿರತಕ್ಕ ಸರ್ಕಾರವೂ ಕೂಡ ಅದೇ ನಡೆವಳಿಕೆಗಳನ್ನು ಅನುಸರಿಸಿಕೊಂಡು ಬರುತ್ತಿದೆ. ಡಾಕ್ಟರುಗಳ ಅನುಕೂಲವೆಲ್ಲಾ ಕೇವಲ ದೊಡ್ಡದೊಡ್ಡ ಪಟ್ಟಣಗಳಿಗೆ ಮಾತ್ರವೇ ಇರುತ್ತದೆ. ಬೀದಿ ಬೀದಿಗೆ 8-10 ಜನ ಡಾಕ್ಟರುಗಳಿರುತ್ತಾರೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ಆಸ್ಪತ್ರೆಯಿದ್ದರೆ ಡಾಕ್ಟರು ಇರುವುದಿಲ್ಲ; ಡಾಕ್ಟರಿದ್ದರೆ-ಆಸ್ಪತ್ರೆಯಿರುವುದಿಲ್ಲ. ಈ ಎರಡೂ ಇದ್ದರೆ—ಅಲ್ಲಿ ಔಷಧಿ ಇರುವುದಿಲ್ಲ. ಐಶ್ವರ್ಯವಂತರಿಗೂ ದಿನವೂ ದುಡಿದು ಮಾಡತಕ್ಕ ಉದ್ಯಮದಾರರಿಗೂ ಈ ಡಾಕ್ಟರ ಸಹಾಯ ದೊರಕುತ್ತಿದೆಯೇ ವಿನಾ ಬಡಜನರಿಗೆ ಇದರಿಂದ ಏನೂ ಸಹಾಯವಾಗುತ್ತಿಲ್ಲ. ಕಾರಣ, ಹಳ್ಳಿ ಜನರಿಗೆ ದಿನಂಪ್ರತಿ ಕೈಯಲ್ಲಿ ದುಡ್ಡಿರುವುದಿಲ್ಲ. ಹಳ್ಳಿ ಜನರ ಕೈಯಲ್ಲಿ ದುಡ್ಡಿರುವುದೆಲ್ಲಾ ಕೇವಲ ಒಂದೇ ಒಂದು ಕಾಲದಲ್ಲಿ—ಅದು ಸುಗ್ಗಿ ಕಾಲದಲ್ಲಿ ಮಾತ್ರ. ಆದರೆ ಪಟ್ಟಣವಾಸದಲ್ಲಿರತಕ್ಕ ಸಾಮಾನ್ಯ ಜನರಿಗೂ ಕೂಡ ದಿನಂಪ್ರತಿ ಕೈಯಲ್ಲಿ ದುಡ್ಡು ಚಿರಾವಣೆ ಆಗುತ್ತಿರುತ್ತದೆ. ಆದ್ದರಿಂದ ಇಲ್ಲಿ ಅವರು ಖಾಯಿಲೆ ಇತ್ಯಾದಿ ಬಿದ್ದರೆ ದುಡ್ಡುಕೊಟ್ಟು ಚಿಕಿತ್ಸೆ ಹೊಂದಿ ಗುಣ ಪಡೆಯುತ್ತಾರೆ. ಆದರೆ ಗ್ರಾಮಾಂತರ ಪ್ರದೇಶದಲ್ಲಾ ಆಸ್ಪತ್ರೆಗಳಿಲ್ಲ, ಡಾಕ್ಟರುಗಳಿರುವುದಿಲ್ಲ, ಮಿಡ್‌ವೈಫ್ ಗಳಿರುವುದಿಲ್ಲ, ಕಾಂಪೌಂಡರುಗಳಿರುವುದಿಲ್ಲ, ಔಷಧಿ ಇರುವುದಿಲ್ಲ—ಹೀಗೆ ನಾನಾ ತೊಂದರೆಗಳಿರುತ್ತವೆ. ಆದುದರಿಂದ ಗ್ರಾಮಾಂತರ ಪ್ರದೇಶಗಳಿಗೆ ತಾವು ಹೆಚ್ಚು ನಿಗಾ ಕೊಟ್ಟು, ಅಲ್ಲಿಗೆ ಹೆಚ್ಚು ಹೆಚ್ಚು ಆಸ್ಪತ್ರೆಗಳನ್ನು ಕೊಡಬೇಕು. ನಿಬ್ಬಂದಿ ಸರಿಯಾಗಿರುವಂತೆ ನೋಡಿಕೊಳ್ಳಬೇಕು. ಇದಕ್ಕಾಗಿ ನನ್ನದೊಂದು ಸಲಹೆ ಏನೆಂದರೆ, ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಟೂರಿಂಗ್' ಆಸ್ಪತ್ರೆಯನ್ನಿಡುವುದು ಒಳ್ಳೆಯದೆಂದು ಹೇಳುತ್ತೇನೆ. ಹೀಗೆ ಮಾಡಿದರೆ ಡಾಕ್ಟರೂ, ಮಿಡ್‌ವೈಫ್ ಮತ್ತು ಕಾಂಪೌಂಡರೂ ಒಟ್ಟಾಗಿ ದಿನಕ್ಕೆ 8—10 ಗ್ರಾಮಗಳನ್ನು ಸುತ್ತಿಕೊಂಡು ಬರಬಹುದು. ಇದರಿಂದ ಅನುಕೂಲವಾಗಬಹುದು. ತಾವು ಇದನ್ನು ಪರೀಕ್ಷಾರ್ಥವಾಗಿಯಾದರೂ ಪ್ರತಿಯೊಂದು ಜಿಲ್ಲೆಯಲ್ಲೂ ಒಂದೆರಡು ತಾಲ್ಲೂಕುಗಳಲ್ಲಿ ಮಾಡಿ ನೋಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಆಸ್ಪತ್ರೆಗಳಿಲ್ಲದೆ ಅನೇಕ ಗ್ರಾಮಗಳಲ್ಲಿ ಜನರಿಗೆ ಬಹಳ ತೊಂದರೆಯಾಗಿದೆ.

ಈಗ ತಾವು ಮುಂದಿರತಕ್ಕ ಬಡ್ಜೆಟ್ಟಿನಲ್ಲಿ ಸೆಂಟರ್ ನಿಂದ ಕೂಲಿಗಾರರಿಗೆ ಮನೆ ಕಟ್ಟಿಕೊಳ್ಳಲು ಸಹಾಯ

ನೀಡತಕ್ಕ ಬಗ್ಗೆ 20 ಲಕ್ಷ ರೂಪಾಯಿಗಳು ಬಂದಿರುವುದಾಗಿ ಗೊತ್ತಾಗುತ್ತದೆ. ಈ ಅನುಕೂಲ ಬರಿ ನಗರಗಳಲ್ಲಿ ಕೈಗಾರಿಕಾ ಕ್ಷೇತ್ರಗಳಲ್ಲಿ ಕೆಲಸ ಮಾಡತಕ್ಕ ಕೂಲಿಗಾರರಿಗೆ ಮಾತ್ರ ಅನ್ವಯಿಸುತ್ತದೆಯೋ ಅಥವಾ ಗ್ರಾಮಾಂತರ ಪ್ರದೇಶದಲ್ಲಿ ವ್ಯವಸಾಯ ಸಂಬಂಧದ ಕೆಲಸಗಳ ಕೂಲಿ ಮಾಡುತ್ತಿರುವ ಜನರಿಗೂ ಇದು ಅನ್ವಯಿಸುತ್ತದೆಯೋ ಎಂಬುದು ತಾವು ಸ್ವಲ್ಪ ಆಲೋಚನೆ ಮಾಡಿನೋಡತಕ್ಕ ವಿಷಯವಾಗಿದೆ. ಇದರ ಉಪಯೋಗ ಸಮಗ್ರವಾಗಿ ಕೂಲಿ ಕೆಲಸದಲ್ಲಿ ನಿರತರಾಗಿರುವವರಿಗೆಲ್ಲಾ ಅನ್ವಯಿಸುವಂತೆ ಮಾಡಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ.

ಈಗ ತಾವು 101 ಲಕ್ಷ ರೂಪಾಯಿಗಳು ಬಡ್ಡೆಟ್ಟಿನಲ್ಲಿ ಕಡಮೆಯಾಗಿದೆ ಎಂದು ತಿಳಿಸಿದ್ದೀರಿ. ಇದಕ್ಕೆ ನಾನು ಒಂದು ಸಲಹೆ ನೀಡಬೇಕೆಂದಿದ್ದೇನೆ. ಬೆಂಗಳೂರು ಇತ್ಯಾದಿ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ನೂರಾರು ಹೋಟೆಲುಗಳಿರುತ್ತವೆ. ಇವುಗಳನ್ನೆಲ್ಲಾ ಹಿಂದೆ ನೀವು ಹೇಗೆ ಶೇಂದಿ ಪರಾಬು ಅಂಗಡಿಗಳನ್ನು ಹರಾಜು ಹಾಕುತ್ತಿದ್ದಿರೋ, ಅದೇ ಮಾದರಿಯಲ್ಲಿ ಹರಾಜು ಹಾಕಿದ್ದೇ ಆದರೆ ತಮಗೆ ಬೇಕಾದಷ್ಟು ಉತ್ಪತ್ತಿ ಇದರಿಂದ ಬರುತ್ತದೆ. ಈಗಾಗಲೇ ಈ ಬಗ್ಗೆ, ಕೆಲ ಕೆಲವು ಸ್ಥಳಗಳಲ್ಲರತಕ್ಕ ಹೋಟಲುಗಳನ್ನು—ಎಂದರೆ ರೈಲ್ವೆ ಸ್ಟೇಷ್, ಬಸ್ ಸ್ಟ್ಯಾಂಡು ಇಂಥ ಕಡೆಗಳಲ್ಲರತಕ್ಕ ಹೋಟೆಲುಗಳನ್ನು—ನಡೆಸುವ ಹಕ್ಕನ್ನು ಈಗ ಹರಾಜು ಮೂಲಕವೇ ಕೊಡರಾಗುತ್ತಿದೆ. ಹೀಗೆ ಮಾಡಿದರೆ ಆಯಾಯಾ ಸ್ಥಳಧಲ್ಲರತಕ್ಕ ಮುನಿಸಿಪಾಲಟಿಗಳಿಗಾದರೂ ಹೆಚ್ಚಿನ ಧನ ಸಹಾಯವಾಗಿ ಅನುಕೂಲವಾಗುತ್ತದೆ. ಈಗ ಮುನಿಸಿಪಾಲಟಿಯ ಹಣ ಹೋದರೆ ನಮ್ಮ ಸರ್ಕಾರದ ಹಣ ಹೋದ ಹಾಗೆ. ಯಾವುದಾದರೂ ದೇಶಕ್ಕೆ ಒಳ್ಳೆಯ ಕೆಲಸವಾದರೆ ಸರಿ. ಅದ್ದರಿಂದ ಹಣದ ಅಭಾವವನ್ನು ನೀಗುವುದಕ್ಕೆ ಸಂಬಂಧಪಟ್ಟಿರುವ ಮಂತ್ರಿಗಳು ಹೆಚ್ಚು ಗಮನಕೊಟ್ಟು ಹೋಟಲುಗಳನ್ನು ಕಡಮೆ ಮಾಡಿದರೆ ಖಂಡಿತ ಸರ್ಕಾರಕ್ಕೆ ಹೆಚ್ಚು ಹಣ ಬರುತ್ತದೆ. ಇದನ್ನು ಮಾಡಬೇಕಾದದ್ದು ಬಹಳ ಅಗತ್ಯ. ರಸ್ತೆಯಲ್ಲಿ 25 ಹೋಟಲುಗಳು ಇರುವುದಕ್ಕೆ ಬದಲಾಗಿ 10 ಆಗಬಹುದು. ಹೀಗೆ ಮಾಡಿದರೆ, ಇದರಿಂದ ಸರ್ಕಾರಕ್ಕೆ ಬರುವುದೂ ಬರುತ್ತದೆ ಮತ್ತು ಹಣದ ಅಭಾವ ತಡೆಗಟ್ಟುವುದಕ್ಕೂ ಅನುಕೂಲವಾಗುತ್ತದೆ. ಇದೊಂದು ಮುಖ್ಯವಾದ ಸಲಹೆ.

ಕೈಗಾರಿಕೆಯ ವಿಷಯದಲ್ಲಿ ಹೇಳುವುದಾದರೆ ಸರ್ಕಾರದವರು ದೊಡ್ಡದೊಡ್ಡ ಕೈಗಾರಿಕೆಗಳಿಗೆ ಹೆಚ್ಚು ಗಮನ ಕೊಡುತ್ತಾರೆ. 10—20 ಲಕ್ಷ ರೂಪಾಯಿಗಳ ಸಾಲ ಕೊಡುತ್ತಾರೆ. ಸ್ವಾಮಿ, ಮಹಾತ್ಮಾ ಗಾಂಧಿಯವರ ಉದ್ದೇಶವಾದರೂ ಏನಿತ್ತು ? ಗ್ರಾಮೋದ್ಧಾರ ಮಾಡಬೇಕು, ಗ್ರಾಮಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸಬೇಕು ಎಂಬುದಾಗಿ ಅಲ್ಲವೆ ! ಆದರೆ ಮುಖ್ಯ ಮಂತ್ರಿಗಳ ಭಾಷಣದಲ್ಲಿ ಗ್ರಾಮ ಕೈಗಾರಿಕೆಗಳನ್ನು ನಿಲ್ಲಿಸಬೇಕೆಂದು ಹೇಳಿದರು. ದಯವಿಟ್ಟು ಆ ರೀತಿ ಮಾಡದಾರದು. ಏಕೆಂದರೆ ಹಳ್ಳಿಗಾಡುಗಳಲ್ಲಿ ವ್ಯವಸಾಯ ನಡೆಯುವುದು 6 ತಿಂಗಳು ಮಾತ್ರ. ಇನ್ನು 6 ತಿಂಗಳು ಹಳ್ಳಿಯವರು ಹರಟೆ ಹೊಡೆದು ಕೊಂಡು, ವ್ಯಾಜ್ಯ ಮಾಡಿಕೊಂಡು ಕೋರ್ಟುಗಳಿಗೆ ತಿರುಗುತ್ತಿರುತ್ತಾರೆ. ಅದ್ದರಿಂದ ಅಂಥಾ ಕೆಲಸವಿಲ್ಲದಿರುವ ಕಾಲದಲ್ಲಿ ಗ್ರಾಮಕೈಗಾರಿಕೆಗಳಿದ್ದರೆ ಮಕ್ಕಳು ಮರಿಗಳಾದಿಯಾಗಿ ಹಳ್ಳಿಗರು ಕೆಲಸ ಮಾಡಿಕೊಂಡು ಅವರ ಕಾಲವನ್ನು ಸದ್ವಿನಿಯೋಗಪಡಿಸಿಕೊಳ್ಳಬಹುದು; ಕೈಗಾರಿಕೆಗಳೂ ಮುಂದುವರಿಯುತ್ತವೆ. ಅನೇಕ ಕಡೆ ತೊಂದರೆಯಾಗಿರಬಹುದು; ಅಮ್ಮು ಮಾತ್ರಕ್ಕೇ ಗೃಹಕೈಗಾರಿಕೆಗಳನ್ನೆಲ್ಲಾ ಮುಚ್ಚಬಾರದು. ಅದ್ದರಿಂದ ಅವಕ್ಕೆ ಇನ್ನೂ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಪ್ರತಿಯೊಂದು ಮನೆಗೂ ಗೃಹಕೈಗಾರಿಕೆಗಳ ಅನುಕೂಲವನ್ನು ಕಲ್ಪಿಸಿ ದೇಶವನ್ನು ಕೈಗಾರಿಕೆಯಲ್ಲಿ ಮುಂದುವರಿಯುವಂತೆ ಮಾಡಬೇಕು ಎಂದು ಮಹಾತ್ಮಾಜೀಯವರು ಹೇಳಿದ್ದಾರೆ. ಅದನ್ನು ಬಿಟ್ಟು ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಹೆಚ್ಚು ಉತ್ತೇಜನ ಕೊಟ್ಟು ಗ್ರಾಮಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡದಿದ್ದರೆ ಐಶ್ವರ್ಯವಂತರು ಇನ್ನೂ ಹೆಚ್ಚು ಸಂಪಾದನೆ ಮಾಡಲು ಅನುಕೂಲವಾಗುತ್ತದೆಯೇ ಹೊರತು ಬಡವರು ಉದ್ಧಾರವಾಗಲು ಅವಕಾಶವಾಗುವುದಿಲ್ಲ. ಆದ ಕಾರಣ ಸರ್ಕಾರದವರು ಈ ವಿಚಾರಕ್ಕೆ ಹೆಚ್ಚು ಗಮನ ಕೊಡಬೇಕೆಂದೂ ಸಣ್ಣಪುಟ್ಟ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡಬೇಕೆಂದೂ ಪ್ರಾರ್ಥನೆ ಮಾಡುತ್ತೇನೆ.

ಕೊನೆಯದಾಗಿ ಮುಖ್ಯ ಮಂತ್ರಿಗಳೇ ಹಿಂದುಳಿದಿರುವ ಹರಿಜನರ ಅಭಿವೃದ್ಧಿ ಕಾರ್ಯವನ್ನು ಕೈಕೊಂಡಿರುವುದು ಇನ್ನೂ ಹೆಚ್ಚಿನ ವೈಶಿಷ್ಟ್ಯವೆಂದು ನಾನು ಹೇಳಬೇಕಾಗಿದೆ. ಆದರೆ ಇನ್ನು ಮುಂದೆ ಈ ಬಾಬನಲ್ಲಿ ಎಷ್ಟು ಕೆಲಸಕಾರ್ಯಗಳಾಗುತ್ತವೆ ಎಂಬುದನ್ನು ನಾನು ನೋಡಬೇಕಾಗಿದೆ. ಏಕೆಂದರೆ, ಗ್ರಾಮಾಂತರಗಳಲ್ಲಿ ಅನೇಕ ಹರಿಜನರಿಗೆ ಬಹಳ ಕಷ್ಟವಿದೆ. ಈ ದಿವನ ಭಾರತ ರಾಜ್ಯಾಂಗದಲ್ಲಿ ನಮೂದಿಸಿರುವಂತೆ ವಿಶೇಷ ರೀತಿಯ ಸೌಲಭ್ಯಗಳಿಗೆ,—ಅಂದರೆ ದೇವಾಲಯ ಪ್ರವೇಶದ ಮಸೂದೆ, ಪ್ರಾಣಿವಧೆಗೆ ಸಂಬಂಧಪಟ್ಟ ಮಸೂದೆ ಮುಂತಾದ ಮಸೂದೆಗಳಿಗೆ—ಅಂಗೀಕಾರ ದೊರೆತಿದೆ. ಆದರೆ ನಿಜವಾಗಿಯೂ ಅವು ಜಾರಿಗೆ ಬಂದಿಲ್ಲ. ಅವನ್ನು ಜಾರಿಗೆ ತರುವುದು ಯಾವ ಇರಾಖೆಗೆ ಸಂಬಂಧಪಟ್ಟದೆಯೋ ತಿಳಿಯದು. ಗ್ರಾಮಾಂತರಗಳಲ್ಲಿ ದೇವಿ ಜಾತ್ರೆ ಮಾಡುವಾಗ ಕುರಿ, ಕೋಣ ಕಡಿಯುವುದು ವಾಡಿಕೆಯಲ್ಲಿದೆ. ಇದಕ್ಕೆ ಸಂಬಂಧಪಟ್ಟ ಮಸೂದೆ ಜಾರಿಗೆ ಬಂದು ಮೂರು ವರ್ಷಗಳಾದರೂ ಇನ್ನೂ ಪ್ರಾಣಿವಧೆ ನಡೆಯುತ್ತಲೇ ಇದೆ. ಚಿತ್ರದುರ್ಗದ ಹತ್ತಿರ ಎರಡು ಮೈಲಿ ದೂರದಲ್ಲಿ ಮತ್ತು ಚಿತ್ರದುರ್ಗದಲ್ಲಿ ಈ ರೀತಿ ನಡೆಯುತ್ತಿರುವುದನ್ನು ಕೇಳುವವರೇ ಇಲ್ಲ. ಅದುದರಿಂದ ಇನ್ನು ಮುಂದಾದರೂ ಗ್ರಾಮದ ಪಟೇಲ, ಶ್ಯಾನುಭೋಗರು, ರೆವೆನ್ಯೂ ಇನ್‌ಸ್ಪೆಕ್ಟರು ಮುಂತಾದವರಿಂದ ರಿಪೋರ್ಟ್ ತೆಗೆದುಕೊಂಡು ದೇವೀ ಜಾತ್ರೆ ನಡೆಸಬೇಕೆಂದು ಕಟ್ಟುಮಾಡಬೇಕು. ಇಲ್ಲದಿದ್ದರೆ 'ಪ್ರಾಣಿವಧೆಯನ್ನು ತಡೆಗಟ್ಟುವ ಮಸೂದೆ ಇದ್ದರೂ ಪ್ರಾಣಿಗಳನ್ನು ವಧೆ ಮಾಡುತ್ತಿದ್ದಾರೆ, ಇದೇಕೆ ಹೀಗೆ ನಡೆಯುತ್ತಿದೆ' ಎಂದು ಯಾರಾದರೂ ಕೇಳಿದರೆ ನಾಚಿಕೆಯಾಗುತ್ತದೆ. ಅದ್ದರಿಂದ ದಯವಿಟ್ಟು ಈ ಮಸೂದೆಗಳನ್ನು ಆದಷ್ಟುಮಟ್ಟಿಗೆ ಜಾರಿಗೆ ತರುವಂತೆ ಏರ್ಪಾಡು ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಹರಿಜನರಿಗೆ ಗ್ರಾಮಾಂತರಗಳಲ್ಲಿ ಜಮೀನು ಕೊಡುವ ವಿಷಯದಲ್ಲಿ ಕೂಡ ಬಹಳ ತೊಂದರೆಯಿದೆ. ನನಗೆ ತಿಳಿದಮಟ್ಟಿಗೆ ನಾನು ನೋಡಿರುವ ಹಾಗೆ ಒಂದು ಜಮೀನು ಕೊಟ್ಟಿದ್ದಕ್ಕೆ ಅಮಲ್ದಾರರು, ಜಿಲ್ಲಾಧಿಕಾರಿಗಳು, ರೆವಿನ್ಯೂ ಕಮೀಷನರು ಮತ್ತು ಮಂತ್ರಿಗಳು ಅಲ್ಲಯವರಿಗೂ ಅಪೀಲ್ ಬಂದಿದೆ. ಇದಕ್ಕೆ ಬೇಕಾದಷ್ಟು ಉದಾಹರಣೆಗಳನ್ನು ಕೊಡಬಹುದು. ಜಮೀನು ಮಂಜೂರಾಗಿ ನಾಲ್ಕೈದು ವರ್ಷಗಳಾದಮೇಲೆ ಜಿಲ್ಲಾಧಿಕಾರಿಗಳಿಗೆ ಅಪೀಲು ಹೋಗಿ ಗೋಮಾಳವಿಲ್ಲವೆಂದು ಜಮೀನು ಕೊಡದಂತೆ ತಡೆಯುವುದಕ್ಕೆ

(ಶ್ರೀ ಟಿ. ಹನುಮಯ್ಯನವರು)

ಆರ್ಡರು ಬರುತ್ತದೆ. ಅಮೇಲೆ ಮಂತ್ರಿಗಳವರೆಗೂ ಅಪೀಲು ಹೋಗಬೇಕಾಗುತ್ತದೆ. ಆದರೆ ಸರಿಯಾಗಿ ತಿಳುವಳಿಕೆಯಿಲ್ಲದ ಹಳ್ಳಿಗಾಡಿನಲ್ಲಿರುವ ಹರಿಜನರು ಅಠಾರಾ ಕಚೇರಿಗೆ ತಿರುಗುವುದಕ್ಕೆ ಸಾಧ್ಯವೇ ಎಂಬುದನ್ನು ಯೋಚನೆ ಮಾಡಬೇಕು. ಈ ದಿವಸ ಗೋಮಾಳ ವಿಲ್ಲವೆಂದು ಹೇಳಬಹುದು. ಒಂದು ಊರಿನಲ್ಲಿ ಐನೂರು ಅಥವಾ ಸಾವಿರ ರಾಸುಗಳಿದ್ದರೆ ಗೋಮಾಳ ರೈತರಿಗೇ ಬೇಕಾಗುತ್ತದೆ. ಹರಿಜನರಿಗೆ ಜಮೀನು ಸಿಕ್ಕುವುದೆಲ್ಲಿ? ಅದೇ ಪಾಶ್ಚಿಮಾತ್ಯ ದೇಶದಲ್ಲಿ 100 ಎಕರೆ ಇದ್ದರೆ 25 ಎಕರೆ ದನಗಳಿಗೆ ಸಾಕು ಎಂದು ನಿಗದಿಯಾಗಿದೆ. ಅದೇ ರೀತಿ ಇಲ್ಲೂ ಮಾಡಬಹುದು. ಅದನ್ನು ಬಿಟ್ಟು ಕಂದಾಯದ ಕೆಲವು ಜಮೀನುಗಳನ್ನು ಮಾತ್ರ ಕೊಡುವುದಾದರೆ ಸಾಕಷ್ಟು ಸಿಕ್ಕುವುದಿಲ್ಲ! ಹರಿಜನರು ಉದ್ಧಾರವಾಗುವುದಾದರೂ ಹೇಗೆ! ಆದ್ದರಿಂದ ಸರ್ಕಾರದವರು ಹೆಚ್ಚು ನಿಗಾ ಕೊಟ್ಟು ಈ ವಿಷಯ ಗಳಲ್ಲಿ ತೊಂದರೆಯಾಗದ ಹಾಗೆ ನೋಡಿಕೊಳ್ಳಬೇಕು.

ಇನ್ನೊಂದು ಮುಖ್ಯವಾದ ವಿಚಾರ. ಹರಿಜನರು ಯಾವ ಊರಿಗೆ ಹೋದರೂ ಕೂಡ ಮನೆಕಟ್ಟಿಕೊಳ್ಳುವುದಕ್ಕೆ ಕೊಡುವ ಜಮೀನಿನ ಅಕ್ಯಿಸಿಷನ್ ವಿಚಾರದಲ್ಲಿ ಬಹಳ ಕಷ್ಟವಿದೆ. ಸಾಮಾನ್ಯವಾಗಿ ಊರುಮಗ್ಗುಲಲ್ಲಿರುವ ಜಮೀನನ್ನು ಕೇಳಬೇಕಾಗುತ್ತದೆ. ಅದು ಪಟೇಲರ ಅಥವಾ ಶ್ಯಾನುಭೋಗರ ಅಥವಾ ಬೇರೊಬ್ಬ ಅನುಕೂಲಸ್ಥರ ಜಮೀನಾಗಿರುತ್ತದೆ. ಆದ್ದರಿಂದ ಅವರುಗಳು ಅದನ್ನು ಕೊಡುವುದಕ್ಕೆ ಏನಾದರೂ ನೆಪ ಹೇಳಿ ತಪ್ಪಿಸಿಬಿಡುತ್ತಾರೆ. ಪಂಚಾಯಿತಿ ನಿರ್ಣಯ ಮಾಡಿದರೂ ಕೂಡ ನಡೆಯುವಹಾಗಿಲ್ಲ. ಆದ್ದರಿಂದ ರೆವಿನ್ಯೂ ಫ್ಯಾನ್ಯುಯಲ್ 17ನೇ ಸೆಕ್ಷನ್ ಪ್ರಕಾರ ಅಕ್ವಿಸಿಷನ್ ಮಾಡಿಕೊಳ್ಳಬೇಕೆಂದಿರುವುದನ್ನು ಬಹಳ ಹಿಂದಿನ ಕಾಲದಲ್ಲಿ ಅದು ಮಾಡಲ್ಪಟ್ಟಿರುವುದರಿಂದ ಅದನ್ನು ಬದಲಾವಣೆ ಮಾಡಿ ಜಮೀನು ಬೇಕೆಂದು ಹೇಳಿದರೆ ತಕ್ಷಣ ತೆಗೆದುಕೊಳ್ಳುವುದಕ್ಕವಕಾಶವಾಗಬೇಕು. ಈಗ ದೇಶದಲ್ಲಿ ಮನೆ ಕಟ್ಟುವುದೇ ಒಂದು ದೊಡ್ಡ ಸಮಸ್ಯೆಯಾಗಿದೆ. ಅದರಲ್ಲೂ ಹರಿಜನರಿಗೆ ತುಂಬ ತೊಂದರೆ ಯಾಗಿರುವುದರಿಂದ ಸರ್ಕಾರದವರು ಈ ವಿಷಯದಲ್ಲಿ ಹೆಚ್ಚು ನಿಗಾ ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಮದ್ಯಪಾನ ನಿರೋಧವನ್ನು ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಐದು ಜಿಲ್ಲೆಗಳಲ್ಲಿ ಜಾರಿಗೆ ತಂದರು. ಸರ್ಕಾರದಲ್ಲಿ ಪ್ರಾರ್ಥನೆ ಮಾಡಿದಂತೆ ಪಾನನಿರೋಧವನ್ನು ಜಾರಿಗೆ ತಂದದ್ದರಿಂದ ಹರಿಜನರಿಗೆ ಬಹಳ ಸಂತೋಷವಾಗಿ ಈಗ ಅವರು ಬಹಳ ಸುಖ ಮಯವಾಗಿ ಜೀವನವನ್ನು ಸಾಗಿಸುತ್ತಿದ್ದಾರೆ. ಯಾರು ಬೇಕಾದರೂ ಹೋಗಿ ನೋಡಬಹುದು.

ಅನೇಕ ಕಡೆ ಕಳ್ಳ ಭಟ್ಟಿ ಸಾರಾಯಿ ಆಗುತ್ತಾ ಇದೆ ಎಂದರೂ ಕೂಡ ನಿಜವಾಗಿಯೂ ಹರಿಜನರು ಯಾರೂ ಮಾಡುತ್ತಾ ಇಲ್ಲ. ಬೇರೆಯವರು ದುಡ್ಡು ಸಂಪಾದನೆ ಮಾಡುವ ದೃಷ್ಟಿಯಿಂದ ಮಾಡುತ್ತಾರೆಯೇ ಹೊರತು ನಿಜವಾಗಿಯೂ ಹರಿಜನರು ಬಹಳ ಕಷ್ಟಪಟ್ಟು ಜೀವನ ಮಾಡುತ್ತಾರೆ, ಸುಖಿಗಳಾಗಿರುತ್ತಾರೆ. ಮದ್ಯಪಾನ ನಿರೋಧ ಕುಡಿಯುತ್ತಾ ಇದ್ದ ಹರಿಜನರಿಗೆ ಬಹಳ ಹೆಮ್ಮೆಯನ್ನುಂಟುಮಾಡಿದೆ. ಆದರೆ ಸರ್ಕಾರದವರು ಈಗಿನ ದುಡ್ಡಿನ ಅಭಾವದಿಂದ ಬಾಕಿ ಡಿಸ್ಟ್ರಿಕ್ಟ್‌ಗಳಲ್ಲಿ ಪಾನನಿರೋಧವನ್ನು ಜಾರಿ ಮಾಡದೆ ತಡೆ ಮಾಡಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ಬಹಳ ಧೈರ್ಯಶಾಲಿಗಳು, ಶಕ್ತಿವಂತರು, ಸಾಹಸಿಗಳು; ಏಕೆಂದರೆ ಈವತ್ತು ಪುಡ್ ನಬ್‌ಸಿಡಿ ಎಂತುಹೋಗಿ 3½—4 ಕೋಟಿ ರೂಪಾಯಿ ಖೋತಾ ಇದ್ದುದನ್ನು ಸುಲಭವಾಗಿ ಬಗೆ ಹರಿಸಿದ್ದಾರೆ. ಕಂಟ್ರೋಲ್ ಮುಂದುವರಿಸಿಕೊಂಡು ಬಂದು ಜನಗಳಿಗೆ ಅಕ್ಕಿ, ಜೋಳ, ಗೋಧಿ ಕೊಟ್ಟಿದ್ದರೂ ಸಹ ಬೆರೆ ಜಾಸ್ತಿಯಾಗುತ್ತಾ ಇತ್ತು. ಅದಕ್ಕೆ ಅವರು ಹಣಕಾಸಿನ ಇಲಾಖೆಯನ್ನು ವಹಿಸಿಕೊಂಡು ಅದಷ್ಟೂ ಹೊರೆ ಕಡಿಮೆ ಮಾಡಿಕೊಂಡು ಹೋಗುವುದಕ್ಕೆ 2½—3 ಕೋಟಿಯಷ್ಟು ಹಣದ ಸಮಸ್ಯೆಯನ್ನು ಸುಲಭವಾಗಿ ಬಗೆಹರಿಸಿದ್ದಾರೆ. ಈವತ್ತು ದೇಶದ ಹಿತದೃಷ್ಟಿಯಿಂದ ಪ್ರಜಾಪ್ರಭುತ್ವ ಸ್ವಾರಂಭವಾಗಿರುವುದರಿಂದ, ಮಹಾತ್ಮಾ ಗಾಂಧೀಜಿಯವರು 'ಪಾನನಿರೋಧವನ್ನು ಜಾರಿಗೆ ತರಬೇಕು, ಹಾಗಾದರೆ ದೇಶದ ಜನಗಳು ಒಳ್ಳೆಯ ಸತ್‌ಪ್ರಜೆಗಳಾಗುತ್ತಾರೆ' ಎಂದು ಹೇಳುತ್ತಿದ್ದಂತೆ, ಮದ್ಯಪಾನ ನಿರೋಧವನ್ನು ಇತರ ಡಿಸ್ಟ್ರಿಕ್ಟ್‌ಗಳಿಗೂ ಮುಂದುವರಿಸಬೇಕು. ದುಡ್ಡಿನ ಕೊರತೆ ಜಾಸ್ತಿಯಾಗಿದೆ ಎಂಬುದನ್ನು ಸರ್ಕಾರದವರು ಆರೋಚಿನದೆ ಧೈರ್ಯದಿಂದ ಮುಂದೆ ಹೋಗಬೇಕು. ಅದಕ್ಕೆ ನಾವೆಲ್ಲರೂ ನಿಮಗೆ ಬೆಂಬಲ ಕೊಡುತ್ತೇವೆ. ಆದ್ದರಿಂದ ಮುಖ್ಯವಾಗಿ ಮದ್ಯಪಾನ ನಿರೋಧವನ್ನು ಮುಂದುವರಿಸಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Sri B. Madhavachar. I hope the Hon'ble Member will take only ten minutes.

Sri B. MADHAVACHAR (Bhadravati).—No, sir. I require fifteen minutes. I will speak after lunch.

Mr. SPEAKER.—Is there any Member who will take only ten minutes?

ಶ್ರೀ ಎಚ್. ಕೆ. ಶಿವರುದ್ರಪ್ಪನವರು (ಗುಂಡ್ಲುಪೇಟೆ, ಹೆಗ್ಗಡದೇವನಕೋಟೆ).—ಮಾನ್ಯ ಅಧ್ಯಕ್ಷರೇ, ಈ ದಿವಸ ನಮ್ಮ ಮುಂದೆ ಇಟ್ಟಿರತಕ್ಕಂಥಾ ಆಯವ್ಯಯದ ಪಟ್ಟಿಯನ್ನು ನಾವು ವಿಮರ್ಶಿಸುತ್ತಾ ಇದು ಆಶಾಜನಕವಾಗಿದೆಯೇ, ನಿರಾಶಾಜನಕವಾಗಿದೆಯೇ ಎಂಬುದನ್ನು ಸ್ವಲ್ಪ ಮಾಡಬೇಕಾಗಿದೆ. ಸಾಮಾನ್ಯವಾಗಿ ಬಡ್ಜೆಟ್‌ನ್ನು ಪರಿಶೀಲಿಸುವಾಗ ಆದಾಯಕ್ಕಿಂತ ಖರ್ಚು ಜಾಸ್ತಿಯಾಗಿದೆಯೇ ಅಥವಾ ಖರ್ಚಿಗಿಂತ ಆದಾಯ ಜಾಸ್ತಿಯಾಗಿದೆಯೇ ಅಥವಾ ಖರ್ಚು ಕಡಮೆಯಾಗಿದೆಯೇ ಎಂಬುದನ್ನು ಪರಿಶೀಲಿಸುವುದು ಮೊದಲನೆಯ ಕರ್ತವ್ಯ. ಹಾಗೆ ಪರಿಶೀಲಿಸಿದ ಮೇಲೆ ಈವತ್ತಿನ ದಿವಸ ಆದಾಯಕ್ಕಿಂತ ಖರ್ಚು ಜಾಸ್ತಿಯಾಗಿದೆ ಎಂಬುದು ಗೊತ್ತಾಗುತ್ತದೆ. ಈ ಬಡ್ಜೆಟ್‌ನ್ನು ವಿಮರ್ಶಿಸುವಾಗ, ಈ ಬಡ್ಜೆಟ್ ಸಾಮಾನ್ಯ ಪ್ರಜೆಯದೃಷ್ಟಿಯಲ್ಲಿ ಅನುಕೂಲವಾಗಿದೆಯೇ ಅಥವಾ ಬಂಡವಾಳಶಾಹೀ ದೃಷ್ಟಿಯಿಂದ ಅನುಕೂಲವಾಗಿದೆಯೇ ಎಂಬುದನ್ನು ಸಹ ವಿಮರ್ಶಿಸುವುದು ಸರಿ ಎಂದು ನಾನು ಭಾವಿಸುತ್ತೇನೆ. ಈವತ್ತಿನ ದಿವಸ ನಮ್ಮ ಈ ನೂತನ ಮಂತ್ರಿಮಂಡಲದವರು ಈಗ ರಚಿಸಿ ಇಟ್ಟಿರತಕ್ಕ ಬಡ್ಜೆಟ್ಟನ್ನೂ ಹಿಂದೆ ತಯಾರಿಸಿರತಕ್ಕ ಬಡ್ಜೆಟ್‌ನ್ನೂ ದೃಷ್ಟಿಯಲ್ಲಿಟ್ಟುಕೊಂಡು ಹೊಸ ತೆರಿಗೆ ಯಾವುದನ್ನೂ ಹಾಕುವ ಗೋಜಿಗೆ ಹೋಗದೆಯೇ ಹಾಗೆ, ಬಿಟ್ಟಿದ್ದಾರೆ. ಒಂದು ವಿಮರ್ಶಾತ್ಮಕ ದೃಷ್ಟಿಯಿಂದ ನೋಡುವುದಾದರೆ, 4 ಕೋಟಿ ರೂಪಾಯಿ ಖೋತಾ ಬೀಳಬೇಕಾಗಿದ್ದುದನ್ನು ಕಡಮೆಮಾಡಿದ್ದಾರೆ. ಇದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಮತ್ತು ಖರ್ಚಿನ ವಿಚಾರದಲ್ಲಿ ಇನ್ನೂ ಕಡಮೆಮಾಡಿದ್ದ ಪಕ್ಷದಲ್ಲಿ ಅವರು ನಿಜವಾಗಿಯೂ ಇನ್ನೂ ಜನಾದರಣೀಯರಾಗುತ್ತಾ

ಇದ್ದರು. ಈವತ್ತು ಬಜೆಟ್ಟಿನ ಮೇರೆ ಬಂದಿರತಕ್ಕ ಟೀಕೆ ಟಿಪ್ಪಣಿಗಳಿಗೆ ಒಳಗಾಗುತ್ತಾ ಇರಲಿಲ್ಲ, ಎಂದು ನನ ಗೆನ್ನಿಸುತ್ತದೆ. ಖರ್ಚು ಉಳಿಸುವುದಕ್ಕೆ ಸಾಧ್ಯವಿರಲಿಲ್ಲವೇ ಎಂದು ಯೋಚಿಸುವುದಾದರೆ, ಅನೇಕ ಬಾಬು ಗಳು ಸಾಮಾನ್ಯ ಪ್ರಜೆಯ ದೃಷ್ಟಿಯಲ್ಲಿ ಸರಿಯಾಗಿ ಖರ್ಚಾಗುತ್ತಾ ಇಲ್ಲವೆಂದು ಹೇಳಬಹುದು. ಈಗ ಉದಾಹರಣೆಗೆ ಹೇಳುವುದಾದರೆ, ಅಕ್ಷರ ಪ್ರಚಾರ ಸಮಿ ತಿಗೆ ನಮ್ಮ ಸರ್ಕಾರದವರು 5 ಲಕ್ಷ ರೂಪಾಯಿಗಳನ್ನು ಕೊಡುತ್ತಾ ಇದ್ದಾರೆ. ಅದು ನಿಜವಾಗಿಯೂ ಪ್ರಯೋ ಜನಕಾರಿಯಾದುದಲ್ಲ. ಆ ಸಮಿತಿ ಒಂದು ಖಾಸಗಿ ಸಮಿತಿ ಎಂದು ಹೇಳುತಾ ಇದ್ದಾರೆ. ಅದಕ್ಕೆ ಯಾರಾರು ದುಡ್ಡು ಕೊಟ್ಟಿದ್ದಾರೆ ಎಂಬ ಪಟ್ಟಿ ಕೊಡು ತ್ತೀರಾ? 5 ಲಕ್ಷ ರೂಪಾಯಿ ಕೊಡುತ್ತಾ ಇದ್ದೀರಿ. ಸರ್ಕಾರದ ಈ ದುಡ್ಡಿನ ಆಧಾರದ ಮೇಲೆ ಅದು ನಡೆ ಯುತ್ತಾ ಇದೆಯೇ ವಿನಾ ಅದಕ್ಕೆ ಯಾರೂ ಸಹಾಯ ಮಾಡುತ್ತಾ ಇಲ್ಲ. ಅದರಿಂದ ಆಗತಕ್ಕ ಪ್ರಯೋಜನ ವಾದರೂ ಏನು ಎಂದು ಕೇಳುವುದಾದರೆ, ಪ್ರಯೋಜನ ಏನೂ ಇಲ್ಲ. ನಮ್ಮನೆ ಯಾರ ದಾಕ್ಷಿಣ್ಯಕ್ಕೋ ಕೊಡು ತ್ತಾ ಇದ್ದೀರಿ ಎಂದು ಘಂಟಾಘೋಷವಾಗಿ ಹೇಳ ಬಹುದಾಗಿದೆ. ಅದನ್ನು ದಯವಿಟ್ಟು ತಪ್ಪಿಸುತ್ತೀರಿ ಎಂದು ಭಾವಿಸುತ್ತೇನೆ. ಹೀಗೆಯೇ ಇನ್ನೂ ಕೆಲವು ಇರಾಖೆಗಳನ್ನು ತೆಗೆಯುಬಹುದು ಎಂದೆನ್ನಿಸುತ್ತದೆ. ವ್ಯವಸಾಯದ ಇರಾಖೆಯಿಂದ ಏನಾದರೂ ಪ್ರಯೋಜನ ವಿದೆಯೇ ಎಂದರೆ, ಏನೇನೂ ಇಲ್ಲ ಎಂದು ಎನ್ನಿಸುತ್ತದೆ. ಈವತ್ತಿನ ದಿನ ಸರ್ಕಾರದ ನೀತಿ ಹೇಗಿದೆ ಎಂದರೆ ಯಾವ ಮಕ್ಕಳು ಅಳುತ್ತಾರೋ ಅವರಿಗೆ ಹಾಲು ಹಾಕುವ ಪದ್ಧತಿ ಆಗಿದೆ. ಏಕೆ ಅಳುತ್ತಾರೆ, ಕಾರಣವೇನು, ಹೊಟ್ಟೆ ತುಂಬಿದೆಯೇ ಇಲ್ಲವೇ ಎಂಬುದನ್ನು ನೋಡದೆ ಹೊಟ್ಟೆಗೆ ಹಾಕಿದರೆ, ಅಜೀರ್ಣವಾಗಿ ಆ ಮಗು ಸತ್ತುಹೋಗ ಬಹುದು. ಆ ನೀತಿ ಸರಿಯಿಲ್ಲ. ನಿಜವಾಗಿಯೂ ಯಾರಿಗೆ ಅವಶ್ಯಕತೆ ಇದೆ ಎಂಬುದನ್ನು ನೋಡಬೇಕು. ದೇಶದ ಹಣವನ್ನು ಒಬ್ಬೊಬ್ಬರಿಗೇ ಉಪಯೋಗಿಸುತ್ತಾ ಇದ್ದೀರಿ. ಅದರಿಂದ ಸಾಮಾನ್ಯ ಪ್ರಜೆಗೆ ಎಷ್ಟು ಮಟ್ಟಿನ ಅನುಕೂಲವಾಗುತ್ತದೆ ಎಂದರೆ ಏನೂ ಇಲ್ಲ. ಆ ದೃಷ್ಟಿ ಯಿಂದ ಅಂಥಾ ಇರಾಖೆಗಳು ಹೋಗಬೇಕೆಂದು ನಾನು ಭಾವಿಸುತ್ತೇನೆ.

ಶ್ರೀವಾರ್ಖ ವೀರಣ್ಣಗೌಡರು 11 ತಿಂಗಳು ಅವರಲ್ಲಿ ಬುರ್‌ಡೋಜರು ಕೆಲಸಕ್ಕೆ ಬಾರದೆ ಹಾಗೇ ಇತ್ತು ಎಂದು ಹೇಳಿದರು..... .....

ಶ್ರೀ ಎಚ್. ಸಿದ್ದವೀರಪ್ಪನವರು.—ಆ ರೀತಿ ಆಗ ಬಾರದು ಎಂದು ಹೊಸ ನೀತಿಯನ್ನು ಅನುಸರಿಸಿ ದ್ದೇವೆ. ಅದು ಮಾನ್ಯ ಸದಸ್ಯರಿಗೆ ಗೊತ್ತಿರಬಹುದು.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಸಾಮಾನ್ಯ ಪ್ರಜೆಯ ದೃಷ್ಟಿಯಿಂದ ಅನುಕೂಲವಾಗುವುದಾದರೆ ಸ್ವಾಗತಿಸುತ್ತೇನೆ. ಆ ರೀತಿ ಆಗದೆ ಕೆಲವರಿಗೆ ಅನು ಕೂಲವಾಗುವುದಾದರೆ ಇರಾಖೆಯನ್ನು ರದ್ದುಪಡಿಸು ವುದು ಉತ್ತಮವೆಂದು ಹೇಳುತ್ತೇನೆ. ಹೀಗೆಯೇ ಇನ್ನೂ ಕೆಲವು ಬಾಬುಗಳನ್ನು ಸರ್ಕಾರದವರು ಪರಿಶೀಲಿಸಿ ಅಗತ್ಯವಿಲ್ಲದೇ ಇದ್ದುದನ್ನು ತೆಗೆದುಹಾಕಿದರೆ 101 ಲಕ್ಷ ರೂಪಾಯಿಗಳ ಖೋತಾವನ್ನು ಕೂಡ ಸರಿತೂಗಿಸ ಬಹುದು ಎಂದು ನನಗೆನ್ನಿಸುತ್ತದೆ. ಉಳಿತಾಯವೂ ಆಗಬಹುದು.

ಖರ್ಚಿನ ವಿಚಾರ ಇಷ್ಟು ಹೇಳಿ, ಇನ್ನು ದೇಶದ ಹಿತ ದೃಷ್ಟಿಯಿಂದ ಆಗತಕ್ಕ ಕೆಲವು ಬಾಬುಗಳ ವಿಚಾರ ಹೇಳುವುದಾದರೆ ವೈದ್ಯ ಸಹಾಯ ಮತ್ತು ಜನಾರೋ ಗ್ಯಕ್ಕೆ ಹೆಚ್ಚಿನ ಸೌಕರ್ಯ ಒದಗಿಸಿ ದೇಶದ ಪ್ರಜೆಗಳಿಗೆ ಹಣ ಸದ್ವಿನಿಯೋಗವಾಗುವಂತೆ ಮಾಡಬೇಕು. ಆ ರೀತಿ ಮಾಡಿದರೆ ಅಡ್ಡಿಯಿಲ್ಲ. ಈ ಬಜೆಟನ್ನು ಮಂಡಿಸಿರತಕ್ಕ ಮಂತ್ರಿ ಮಂಡಲದವರಿಗೆ ನನ್ನ ಬೆಂಬಲ ಕೊಟ್ಟು ಅಗತ್ಯ ವಾಗಿರತಕ್ಕ ಕೆಲವು ಅಂಶಗಳನ್ನು ಅವರ ಮುಂದ ಇಟ್ಟಿದ್ದೇನೆ.

Mr. SPEAKER.—The House will now adjourn for lunch.

The Assembly adjourned for Lunch at Three of the Clock and re-assembled at Thirty Minutes past Three of the Clock.

[Mr. SPEAKER In the Chair.]

Sri S. M. MARIYAPPA.—Sir,

(Sri K. Pattabhiraman and several others also rose.)

Mr. SPEAKER.—I know Sri Pattabhiraman rose several times. After Sri Mariyappa, Sri Pattabhiraman can speak and then Sri Shankara Gowda and then others.

ಶ್ರೀ ಎಸ್. ಎಂ. ಮರಿಯಪ್ಪನವರು (ಪಿರಿಯಾಪಟ್ಟಣ).—ಮಾನ್ಯ ಅಧ್ಯಕ್ಷರೇ, ಮೊನ್ನೆ ತಾನೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರತಕ್ಕ ಸಂಸ್ಥಾನದ ಆಯವ್ಯಯದ ಪಟ್ಟಿಯನ್ನು ಪರಿಶೀಲಿಸಿ ನೋಡಿದರೆ ಅದು ನಿಜವಾಗಿಯೂ ಸಮಯೋ ಚಿತವಾಗಿಯೂ, ಸ್ವೋತ್ಕರ್ಷವಾಗಿಯೂ ಇದೆ. ಇದ ರಲ್ಲಿನ ಒಂದು ಹೆಚ್ಚಿನ ವಿಶೇಷವೇನೆಂದರೆ, ಇಂಟೆರಿಮ್ ಬಡ್ಜೆಟ್ಟಿನಲ್ಲಿ 4 ಕೋಟಿ ರೂಪಾಯಿಗಳಷ್ಟು ಖೋತಾ ಆಗಿದ್ದನ್ನು ಕೇವಲ ಒಂದು ಕೋಟಿ ರೂಪಾಯಿಗಳ ಮಟ್ಟಕ್ಕೆ ಇಳಿಸಿರುವುದು ನಿಜವಾಗಿಯೂ ಅವರ ಕಾರ್ಯ ದಕ್ಷತೆಯನ್ನೂ ನೈಪುಣ್ಯತೆಯನ್ನೂ ವ್ಯಕ್ತಪಡಿಸುತ್ತದೆ. ಇಂಥ ಕಷ್ಟದ ದಿನಗಳಲ್ಲೂ ದಿಟ್ಟತನದಿಂದ ಮುನ್ನುಗ್ಗಿ ರುವ ಅವರನ್ನು ಕೆಚ್ಚೆದೆಯ ಕೆಂಗಲ್ ಹನುಮಂತಯ್ಯ ನವರೆಂದು ಹೊಗಳುವುದು ಹೆಚ್ಚಲ್ಲ. ನಮ್ಮನೆ ಮಾತಿ ಗಾಗಿ ಅವರನ್ನು ಹೊಗಳಿ ತೃಪ್ತಿಪಡಿಸಬೇಕೆಂಬ ಕಾಂಕ್ಷೆ ನನಗಿಲ್ಲ. ಅವರು ಸಾಧಿಸಿರತಕ್ಕ ಕೆಲಸಕಾರ್ಯಗಳನ್ನು ನೋಡಿದರೆ, ಅವರು ನಿಜವಾಗಿಯೂ ನಮ್ಮ ದೇಶದ ಮುಖ್ಯ ಮಂತ್ರಿ ಸ್ಥಾನಕ್ಕೂ ಮತ್ತು ಹಣಕಾಸಿನ ಸಚಿವ ಸ್ಥಾನಕ್ಕೂ ಒಪ್ಪತಕ್ಕವರಾಗಿದ್ದಾರೆ.

ಅವರು ನಾನಾ ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ಮುಖ್ಯವಾಗಿ ರಾಷ್ಟ್ರದ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟಿದ್ದಾರೆ. ನಮ್ಮ ರಾಷ್ಟ್ರಪ್ರಗತಿಪರ ರಾಷ್ಟ್ರಗಳೊಂದಿಗೆ ಸರಿಸಮಾನತೆ ಯಿಂದ ಮುನ್ನುಗ್ಗುವಂತೆ ಮಾಡಬೇಕೆಂದು ಅವರು ಮೊದಮೊದಲು ಹೇಳುತ್ತಿದ್ದರು. ಈಗಲೂ ಕೂಡ ಅವರು ಅದನ್ನೇ ದೃಷ್ಟಿಯಲ್ಲಿಟ್ಟು ನಮ್ಮ ರಾಜ್ಯದ ಅಭಿವೃದ್ಧಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ತೋರಿಸಿದ್ದಾರೆ; ಅದಕ್ಕಾಗಿ ಹೆಚ್ಚಿಗೆ ಹಣವನ್ನು ಒದಗಿಸಿದ್ದಾರೆ.

ನಮ್ಮ ನಾಡು ಹಳ್ಳಿಗಳ ಬೀಡು; ಶೇಕಡ 60 ರಷ್ಟು ಮಂದಿ ಹಳ್ಳಿಗಳಲ್ಲಿ ವಾಸಮಾಡುತ್ತಾರೆ. ಆದ್ದರಿಂದ ಹಳ್ಳಿಗಳು ಉದ್ಧಾರವಾದರೆ ನಮ್ಮ ದೇಶವೂ ಉದ್ಧಾರ

(ಶ್ರೀ ಎಸ್. ಎಂ. ಮರಿಯಪ್ಪನವರು)

ವಾದಂತೆ. ಒಂದು ದೇಶವು ಮುಂದಕ್ಕೆ ಬರಬೇಕಾದರೆ ಹೆಚ್ಚು ಹೆಚ್ಚಾಗಿ ಈ ರಾಜ್ಯದ ಸಂಪತ್ತು ದೇಶಕ್ಕೆ ಬೆನ್ನು ಮೂಳೆಯಾಗಿರುವ ರೈತನಿಗೆ ವಿನಿಯೋಗವಾಗಬೇಕು. ಈ ನೀತಿಯನ್ನು ನಮ್ಮ ಸರ್ಕಾರದವರು ಪಾಲಿಸಿದ್ದಾರೆ. ನಮ್ಮ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಹಳ್ಳಿಗಳು ದಾರಿ ಸೌಕರ್ಯವಿಲ್ಲದೆ ಬಹಳ ಮಟ್ಟಿಗೆ ಪಂಜರಗಳಲ್ಲಿಟ್ಟ ಹಕ್ಕಿಗಳಂತಾಗಿವೆ. ನಮ್ಮ ಮಾನ್ಯ ಮಂತ್ರಿಗಳು ಈ ಬಗ್ಗೆ ಗ್ರಾಮಾಭಿವೃದ್ಧಿ ಕಾರ್ಯಗಳಿಗೆಂದು ಒದಗಿಸಿರುವ ಹಣ ಕೇವಲ ಕಡಮೆ. ಏಕೆಂದರೆ, ನಮ್ಮ ಹಳ್ಳಿಗಳು ಇನ್ನೂ ಪುರಾತನ ಕಾಲದ ವ್ಯವಸಾಯ ಕ್ರಮಗಳನ್ನೇ, ಹಳೆಯ ಕಾಲದ ಕೈಗಾರಿಕಾ ವಿಧಾನಗಳನ್ನೇ, ಅನುಸರಿಸುತ್ತಿದ್ದಾರೆ. ಹೀಗಾಗಿ ಇಂದಿನ ಪರಿಸ್ಥಿತಿಯಲ್ಲಿ ಒಳ್ಳೆಯ ನೀರಾವರಿ ಸೌಕರ್ಯಗಳು ಜರಾಶಯದ ಏರ್ಪಾಡುಗಳೂ ಇಲ್ಲದಿದ್ದರೆ ನಾವೆಲ್ಲರೂ ಆಹಾರದ ಮುಗ್ಗಟ್ಟಿನಿಂದ ನರಳಬೇಕಾಗಿರುತ್ತದೆ. ಆದ್ದರಿಂದ ವ್ಯವಸಾಯಕ್ಕೆ ಮಾತ್ಯಪ್ರಾಯವಾಗಿರುವ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಟ್ಟು ನಮ್ಮ ಹಳ್ಳಿಯ ಕೈಗಾರಿಕೆಗಳನ್ನೂ ವ್ಯವಸಾಯವನ್ನೂ ಮುಂದಕ್ಕೆ ತರಬೇಕೆಂದು ಈ ಮೂಲಕ ನಮ್ಮ ಘನ ಸರ್ಕಾರದವರನ್ನು ಪ್ರಾರ್ಥಿಸುತ್ತೇನೆ.

ವಿದ್ಯುಚ್ಛಕ್ತಿ ಇರಾಖಿ ರಾಥದಾಯಕವಾದ ಇರಾಖಿ. ಅದರ ಮೇಲೆ ಎಷ್ಟು ದುಡ್ಡು ಹಾಕಿದರೂ ಅಷ್ಟೂ ಹೆಚ್ಚಿಗೆ ರಾಥವನ್ನು ಕೊಡತಕ್ಕ ಇರಾಖಿ ಅದು; ಅದರಲ್ಲಿ ನಷ್ಟವಿಲ್ಲ. ಆದ್ದರಿಂದ ಇದಕ್ಕಾಗಿ ಇನ್ನೂ ಹೆಚ್ಚಿಗೆ ಪೊಬಲಗನ್ನು ಒದಗಿಸಿ ಪ್ರತಿಹಳ್ಳಿಗೂ ವಿದ್ಯುಚ್ಛಕ್ತಿಯ ಅನುಕೂಲತೆಯನ್ನು ಕಲ್ಪಿಸಿಕೊಡುತ್ತಾರೆಂದು ನಂಬಿದ್ದೇನೆ.

ಇವೆಲ್ಲಕ್ಕಿಂತಲೂ ಮಿಗಿಲಾಗಿ ನಮ್ಮ ಮಾನ್ಯ ಮಂತ್ರಿಗಳು ಸಾಧಿಸಿರುವ ಕಾರ್ಯವೇನೆಂದರೆ, ಆಹಾರದ ಹತೋಟಿಯನ್ನು ನಡಿಲಸಿರುವುದು. ಇದು ಅವರ ಕೆಚ್ಚೆದೆಯನ್ನು ಪ್ರದರ್ಶಿಸುತ್ತದೆ. ಇದರಿಂದ ನಮ್ಮ ರೈತಾಪಿವರ್ಗದವರ ಸಂತೋಷಕ್ಕೆ ಎಲ್ಲೆಯೇ ಇಲ್ಲದಂತಾಗಿದೆ. ಹೀಗೆಯೇ ನಮ್ಮ ಮಂತ್ರಿವರ್ಯರು ಇನ್ನೊಂದು ಹೆಜ್ಜೆ ಮುಂದಿಟ್ಟು ರೈತನ ಹಿತವನ್ನು ಸಂಪೂರ್ಣವಾಗಿ ಕಾಪಾಡಿಕೊಂಡು ಆಹಾರದ ಹತೋಟಿಯನ್ನು ಪೂರ್ಣವಾಗಿ ತೆಗೆದುಹಾಕಿದರೆ ನಮ್ಮ ರೈತರನ್ನು ನೆರೆಯಿಂದ ಬಿಡಿಸಿದಂತಾಗುತ್ತದೆ. ಆದರೆ ಈ ಸಂದರ್ಭದಲ್ಲಿ ಬೊನ್ನೆ ನಮ್ಮ ಮಾನ್ಯ ಸದಸ್ಯರಾದ ಪೆಂಕಟಪ್ಪನವರು ನುಡಿದ ಎಚ್ಚರಿಕೆ ಮಾತುಗಳು ಗಮನಾರ್ಹವಾಗಿವೆ. ಹತೋಟಿಗಳನ್ನು ಸಡಿಲಗೊಳಿಸುವುದರಲ್ಲಿ, ದೇಶದಲ್ಲಿ ರೈತನ ಪಾತ್ರವನ್ನು ಮನಗಂಡು, ಅವನ ಆರ್ಥಿಕ ಸ್ಥಿತಿಗೆ ಧಕ್ಕೆ ಬರದಂತೆ ತಕ್ಕ ರಕ್ಷಣೆಗಳನ್ನಿಟ್ಟುಕೊಂಡು ಮಾಡಬೇಕು. ಧಾರಣೆ ವಾಸಿಗಳನ್ನು ಇಳಿಸಿ ಹತೋಟಿಗಳನ್ನು ತೆಗೆದರೆ ರೈತರ ಸ್ಥಿತಿ ಚಿಂತಾಜನಕವಾಗುತ್ತದೆ. ಇಂದಿಗೂ ರೈತನು ತನಗೆ ಬೇಕಾದ ವ್ಯವಸಾಯ ಸಾಮಗ್ರಿಗಳನ್ನು ಹೊಂದಿಸಿಕೊಳ್ಳಬೇಕಾದರೆ ಬಹಳ ಹೆಚ್ಚಿನ ಬೆಲೆಯನ್ನೇ ಕೊಟ್ಟು ತರಬೇಕಾಗಿದೆ. ಆದ್ದರಿಂದ ಧಾರಣೆವಾಸಿಗಳು ಇಳಿದು ರೈತ ಮುಗ್ಗರಿಸಿದರೆ, ಅತನನ್ನು ಮತ್ತೆ ಮೇಲಕ್ಕೆತ್ತುವುದು ಕಷ್ಟ. ಆತನು ಕಂಗೆಟ್ಟು ಸೋಮಾರಿಯಾಗಿ ಬೆಳೆಗಳನ್ನು ಬೆಳೆಯದೆ ಹೋದರೆ ದೇಶಕ್ಕೆ ಕ್ಷಾಮ ಬರುತ್ತದೆ. ರೈತನ ಪಾತ್ರವೆಂಥಾದೆಂಬುದನ್ನು ನಮ್ಮ ಕವಿಗಳಾದ ಕೆ. ವಿ. ಪುಟ್ಟಪ್ಪನವರು ಬಹಳ ಚೆನ್ನಾಗಿ ಹೇಳಿದ್ದಾರೆ. "ಬಾಳಿತು ನಮ್ಮ ನಾಗರಿಕತೆಯು ಮುಣ್ಣಿಣ್ ನೇಗಿಲಾಶ್ರಯದಿ" ಎಂಬಂತೆ ರೈತನಿಂದಲೇ ಸಕಲ ಸಂಪತ್ತು, ನಮ್ಮ ನಾಗರಿಕತೆಯೇ ರೈತನಲ್ಲಿ ಅಡಗಿದೆ. ಎಲ್ಲಾ ವಿಧದಲ್ಲಿಯೂ ನಮ್ಮ ಹಾಗೆಯೇ ಮಾನ್ಯ ಮಂತ್ರಿಗಳೂ ರೈತನ ಬಾಳ್ಕೆಯನ್ನು ಅಡಗಿದೆ. ಎಲ್ಲಾ ವಿಧದಲ್ಲಿಯೂ ನಮ್ಮ ಹಾಗೆಯೇ ಮಾನ್ಯ ಮಂತ್ರಿಗಳೂ ರೈತನ ಬಾಳ್ಕೆಯನ್ನು. ಅವರು ನಮ್ಮ ರೈತರ ಹಿತವನ್ನು ಸಂಪೂರ್ಣವಾಗಿ ಕಾಪಿಟ್ಟು ಆಹಾರದ ಹತೋಟಿಯನ್ನು ಸಡಿಲಸುತ್ತಾರೆಂದು ನಂಬಿದ್ದೇನೆ.

ಆಮೇಲೆ, ನಮ್ಮ ಸರ್ಕಾರದವರು ನಿಮ್ನ ತರಗತಿಯವರ ವಿಷಯದಲ್ಲಿ ಹೆಚ್ಚಿನ ಮಮತೆಯಿಟ್ಟು ಅವರಿಗೆ ಹೆಚ್ಚಿಗೆ ಪ್ರಾತಿನಿಧ್ಯವನ್ನು ದೊರಕಿಸಿ ಕೊಡಬೇಕು. ದೇಶದಲ್ಲಿ ಜೀವನಕ್ಕೆ ಮಾರ್ಗವಿಲ್ಲದೆ ಅಲೆಯುತ್ತಿರುವ ಈ ಮಂದಿಯನ್ನು ನೋಡಿದರೆ ಇವರ ಕಷ್ಟ ಗೊತ್ತಾಗುತ್ತದೆ. ಹೀಗಿರುವಲ್ಲಿ ಒಂದು ಜಮೀನಿಗಾಗಲಿ, ಅಲ್ಪಸ್ವಲ್ಪ ಧನಸಹಾಯಕ್ಕಾಗಲಿ ಕೇಳಿ ಅರ್ಜಿ ಹಾಕಿಕೊಂಡರೆ ಕೆಲವು ಕಡೆಗಳಲ್ಲಿ ಅಧಿಕಾರಿಗಳು ದರ್ಪದಿಂದ ಧಿಕ್ಕರಿಸಿ ಅರ್ಜಿಗಳನ್ನು ತಳ್ಳಿಹಾಕುತ್ತಿರುವುದು ನಮಗೆ ಕಂಡು ಬಂದಿದೆ. ಆದ್ದರಿಂದ ಈ ಸರ್ಕಾರದವರು ನಿಮ್ನ ತರಗತಿಯವರಿಗೆ ಹೆಚ್ಚಿನ ರೀತಿಯಲ್ಲಿ ಉಚಿತವಾಗಿ ಭೂ ಸಹಾಯವನ್ನೂ ಧನಸಹಾಯವನ್ನೂ ನೀಡಿ, ಆ ಪಂಗಡದ ವಿದ್ಯಾರ್ಥಿಗಳಿಗೆ ಸ್ಕಾಲರ್‌ಷಿಪ್ಪುಗಳನ್ನು ಕೊಟ್ಟು ಇವರುಗಳು ಇತರ ಜನಾಂಗದವರೊಡನೆ ಮುನ್ನುಗ್ಗಲು ಅವಕಾಶವನ್ನು ಕಲ್ಪಿಸಿಕೊಡುತ್ತಾರೆಂದು ನಂಬಿದ್ದೇನೆ.

ಕೊನೆಯದಾಗಿ, ರಿಟ್ರೆಂಚ್‌ಮೆಂಟ್ ವಿಷಯದಲ್ಲಿ ನನ್ನ ದೊಂದು ಸಲಹೆ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ನೌಕರರನ್ನು ರಿಟ್ರೆಂಚ್ ಮಾಡುವುದರಲ್ಲಿ ಅವರ ದೃಷ್ಟಿಯೆಲ್ಲಾ ಬಹಳಮಟ್ಟಿಗೆ ಕೆಳದರ್ಜೆಯವರಮೇಲೆ ಬಿದ್ದಿದೆ. ಈಗ ಕೆಲವು ವರ್ಷಗಳ ಹಿಂದೆ ಜೀವನೋಪಾಯಕ್ಕೆ ಮಾರ್ಗವಿಲ್ಲದೆ ಬಹಳ ಮಂದಿ ಕೆಳದರ್ಜೆಗೆ ಸೇರಿದ್ದಾರೆ. ಈಗ ಅವರ ಮೇಲೆ ತಾವು ತಮ್ಮ ದೃಷ್ಟಿ ಬೀರಿದರೆ, ಅವರೆಲ್ಲರೂ ಅನ್ನವಿಲ್ಲದೆ ನಿರ್ಗತಿಕರಾಗಿ ಅಲೆಯಬೇಕಾಗುತ್ತದೆ. ಆದ್ದರಿಂದ ಕೆಳದರ್ಜೆಯವರನ್ನು ಬಿಟ್ಟು ಮೇಲುಮಟ್ಟದ ಅಧಿಕಾರಿಗಳನ್ನು—ಯಾರು ದೊಡ್ಡ ಮನುಷ್ಯರ ಮಕ್ಕಳುಗಳೆಂದು, ದೊಡ್ಡ ಅಧಿಕಾರಿಗಳ ಮಕ್ಕಳೆಂದು, ಸ್ಥಾನಗಳ ಅವಶ್ಯಕತೆಯಿಲ್ಲದಿದ್ದರೂ ಅವರಿಗಾಗಿ ಸ್ಥಾನಗಳು ಏರ್ಪಾಡಾಗಿ ನೇಮಿಸಲ್ಪಟ್ಟರೋ ಅಂಥ ಅಧಿಕಾರಿ ಸ್ಥಾನಗಳನ್ನು—ನಿರ್ಮೂಲ ಮಾಡಿ ದೇಶದ ಬಡ ಕೆಳದರ್ಜೆಯವರನ್ನು ಬದುಕಿಸಬೇಕೆಂದು ಪ್ರಾರ್ಥಿಸುತ್ತಾ, ನನಗೆ ಕೆಲವು ಮಾತುಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೂ ಮಾತ್ರು ಮಂತ್ರಿಗಳಿಗೂ ನನ್ನ ವಂದನೆಗಳನ್ನರ್ಪಿಸುತ್ತೇನೆ.

ಶ್ರೀ ಕೆ. ಪಟ್ಟಾಭಿರಾಮಿರವರು (ಕೋರಾರ).— ಮಾನ್ಯ ಸಭಾಪತಿ, ಈ ವರೆಗೂ ಆಯವ್ಯಯದ ವರದಿಯ ಮೇಲೆ ದೀರ್ಘವಾಗಿ ಚರ್ಚೆ ನಡೆದಿದೆ. ಈ ಸಂದರ್ಭದಲ್ಲಿ ನಾನೂ ಒಂದೆರಡು ಮಾತುಗಳನ್ನು ನಿವೇದನೆ ಮಾಡಿಕೊಳ್ಳಬೇಕೆಂದು ನಿಂತಿದ್ದೇನೆ.

ಮುಖ್ಯವಾಗಿ ನಾನು ಈ ದಿವನ ಯಾವ ದೃಷ್ಟಿಯಿಂದ ಈ ಬಜೆಟ್ಟನ್ನು ನೋಡಿ ಮಾತನಾಡುತ್ತೆನೆಂಬ ಬಗ್ಗೆ ಒಂದು ವಿವರಣೆ ಕೊಡುವುದು ಅಗತ್ಯ. ಮೊಟ್ಟ ಮೊದಲನೆಯದಾಗಿ ನಾವೇಂದು ಮಾತನಾಡುವಾಗ ಒಂದೆರಡು ನಿವೇದನೆಗಳನ್ನು ಮರೆಯಬಾರದಿಲ್ಲ. ಈ ಹೊತ್ತು, ನಾವೇನು ಟೀಕೆ ಮಾಡಿದರೂ ಅದು ಯಾವ ಸರ್ಕಾರದ ಮುಂದೆ ಎಂಬುದನ್ನು ನೆನಪಿಡಬೇಕು. ಬಹಳ ವರ್ಷಗಳಿಂದ ಯಾವ ಮಂತ್ರಿಮಂಡಲ ಅಡಳಿತ ಸೂತ್ರ ನಡೆಸುತ್ತಿತ್ತೊ ಅದು ಈ ದಿನ ಬೇರೆ ಮಂತ್ರಿ ಮಂಡಳಕ್ಕೆ ಸ್ಥಾನ ಕೊಟ್ಟಿದೆ. ಆದ್ದರಿಂದ ಟೀಕೆ ಟಿಪ್ಪಣಿಗಳನ್ನು ಮಾಡುವಾಗ ಒಂದು ಎಲ್ಲೆಕಟ್ಟನ್ನು ನಿರ್ಧರಿಸುವುದು ಕಷ್ಟ. ಆ ದೃಷ್ಟಿಯಿಂದ ಹೇಳುವುದಾ

ದರೆ, ಈಗ ಹೊಸದಾಗಿ ಯಾವ ಮಂತ್ರಿಮಂಡಲ ಅಧಿಕಾರಕ್ಕೆ ಬಂದಿದೆಯೋ ಅದಕ್ಕೆ ಸ್ವಲ್ಪ ಕಾಲಾವಕಾಶ ಕೊಡುವುದು ಧರ್ಮವೆಂದು ನಾನು ನಂಬಿದ್ದೇನೆ. ನೀವು ದೇಶದ ಕಷ್ಟಕಾಲದಲ್ಲಿ ಕೈಹಾಕಿದಿರಿ, ಆದ್ದರಿಂದ ತಮ್ಮ ಭಾಷಣದಲ್ಲಿ ಸಹಾನುಭೂತಿ, ಸಲಹೆ, ಸಹಕಾರ ಎಂದು ಮುಂತಾಗಿ ಏನೇನನ್ನು ನಮ್ಮ ಈ ಸಭಾ ಸದಸ್ಯರಿಂದ ನಿರೀಕ್ಷಿಸುವುದಾಗಿ ಹೇಳಿದಿರೋ ಆ ಎಲ್ಲ ಸಹಕಾರ, ಸಹಾನುಭೂತಿ, ಸಹವರ್ತನೆಗಳನ್ನು ತಮಗೆ ಕೊಡುವುದು ನ್ಯಾಯವೆಂದು ನಾನು ಹೇಳುತ್ತೇನೆ. ಹಾಗೆಯೇ.

ಆದರೆ, ಒಂದೆರಡು ಎಚ್ಚರಿಕೆ ಮಾತುಗಳನ್ನು ಈ ಸಂದರ್ಭದಲ್ಲಿ ಹೇಳುವುದೂ ಅಗತ್ಯ. ಬಡ್ಜೆಟ್ ಎಂಬುದು, ಡೊಡ್ಡವರು ಹೇಳುವಂತೆ, ದೇಶದ ಜೀವನಾಡಿ. ನಾಡಿಯನ್ನು ನೋಡಿದರೆ ಹೇಗೆ ಮನುಷ್ಯನ ದಿಟ್ಟತನ, ಕಷ್ಟತನ, ಆರೋಗ್ಯ ತಿಳಿದುಬರುತ್ತಿದೆಯೋ ಅದೇ ರೀತಿ ದೇಶವು ಬೆಳೆಯುತ್ತಿದೆಯೇ ಇಲ್ಲ ಕುಂಠಿತಗೊಳ್ಳುತ್ತಿದೆಯೇ ಎಂಬುದು ದೇಶದ ಬಡ್ಜೆಟ್ಟಿನಿಂದ ತಿಳಿಯುತ್ತದೆ.

ಈ ನಾಡಿ ಪರೀಕ್ಷೆಯಿಂದ, ಎಂದರೆ ಈ ಬಡ್ಜೆಟ್ಟಿನಿಂದ ನನಗೆ ಏನು ತೋರುತ್ತದೆ ಎಂಬುದನ್ನು ಒಂದೆರಡು ಮಾತುಗಳಲ್ಲಿ ಹೇಳುತ್ತೇನೆ.

ನನಗೆ ಒಂದು ಭಯವಿದೆ. ಈ ಬಡ್ಜೆಟ್ಟನ್ನು ನಮ್ಮ ಮುಂದಿಟ್ಟಿದ್ದಾರೆ; 101·72 ಲಕ್ಷ ರೂಪಾಯಿ ಖೋತಾ ಎಂದು ಹೇಳಿದ್ದಾರೆ. ಇದನ್ನು ಯಾವ ಆಧಾರದ ಮೇರೆ ಮಾಡುತ್ತಾರೆಂದರೆ, ನನಗೆ ತೋರುವುದು, ವರಮಾನ ಮತ್ತು ಖರ್ಚು ಇವುಗಳನ್ನು ಲೆಕ್ಕಹಾಕಿ, ಇವನ್ನು ಕೂಡಿ, ಗುಣಾಕಾರ ಮಾಡಿ 101·72 ಲಕ್ಷ ರೂಪಾಯಿ ಖೋತಾ ಎಂದು ಹೇಳುತ್ತಾರೆ. ಈ ವಿಷಯದಲ್ಲಿ ಒಂದು ಎಚ್ಚರಿಕೆ ಹೇಳುತ್ತೇನೆ. ನಿಮ್ಮ ಈ ಸಂಖ್ಯೆಗಳು ಮುಂದೆ ಭವಿಷ್ಯದಲ್ಲಿ ಸರಿಹೋಗುತ್ತವೆಯೇ ಎಂದು ಭಯವಾಗುತ್ತದೆ. ಏಕೆಂದರೆ ಖರ್ಚು ಬಾಬುಗಳನ್ನು ಮತ್ತು ವರಮಾನದ ಬಾಬುಗಳನ್ನು ಪರೀಕ್ಷೆ ಮಾಡೋಣ. ಆದಾಯ ಖರ್ಚು ಹೇಗೆ ಎಂಬುದನ್ನು ಒಂದೊಂದಾಗಿ ತೆಗೆದುಕೊಂಡು ವಿಮರ್ಶೆ ಮಾಡಿ ನೋಡಿದರೆ ಗೊತ್ತಾಗುತ್ತದೆ. ಇದಕ್ಕೆ ಇನ್ನೊಂದು ಅವಕಾಶ ನನಗಿದೆ. ಡಿಮ್ಯಾಂಡ್ಸ್ ಮತ್ತು ಕಟ್‌ಮೋಷನ್ಸ್‌ಗಳ ಮೇರೆ ಮಾತನಾಡುವಾಗ ಆಯಾ ಸಂದರ್ಭದಲ್ಲಿ ಹೇಳುತ್ತೇನೆ. ಈಗ ಈ ಬಡ್ಜೆಟ್ ವೀಕ್ಷಣ ಸಾಮಾನ್ಯ ಚರ್ಚೆಯ ದೃಷ್ಟಿಯಿಂದ ಯಾವ ರೀತಿ ಹೇಳಬೇಕೋ ಆ ರೀತಿ ಹೇಳುತ್ತಿದ್ದೇನೆ. ಈ ಬಡ್ಜೆಟ್ಟಿನಿಂದ ಒಂದಂಶ ಸ್ಪಷ್ಟವಾಗಿ ಕಾಣುತ್ತದೆ. ನಿಮ್ಮ ವರಮಾನ ವರ್ಷಾಂತ್ಯದಲ್ಲಿಯೂ ಹೀಗೆಯೇ ಇರುತ್ತದೆಯೇ ಎಂಬ ಭಯ ತೋರುತ್ತಿದೆ. ಹೀಗೆಯೇ ಇರಲಾರದೆಂದು ನವಿನಯದಿಂದ ಹೇಳುತ್ತೇನೆ. ಇದಕ್ಕೆ ಒಂದು ಉದಾಹರಣೆ ಮಾತ್ರ ಕೊಡುತ್ತೇನೆ. ತಾವು ಲ್ಯಾಂಡ್ ರೆವಿನ್ಯೂನಿಂದ ಒಂದು ಕೋಟಿ ಚಿಲ್ಲರೆ ವರಮಾನ ಬರುತ್ತದೆಂದು ಹೇಳುತ್ತೀರಿ. ಆದರೆ ಇದು ಹೀಗೆಯೇ ಇರುವುದಿಲ್ಲ. ಇದು ಸುಧಾರಣೆಯ ಕಾಲ; ಇಂದು ದೇಶ ನಿಮ್ಮ ಆದ ಬಹಳ ನಿರೀಕ್ಷಣೆ ಮಾಡುತ್ತಿದೆ. ಇದಕ್ಕಾಗಿ ನೀವು ಹೊಸ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬಹುದು. ಆರ್ಥಿಕ ಪುನರ್ವ್ಯವಸ್ಥೆಯಾಗಬೇಕು, ಭೂ ಸುಧಾರಣೆಯಾಗಬೇಕು, ಜನಜೀವನದ ಮಟ್ಟ ಉತ್ತಮವಾಗಬೇಕು, ಪ್ರಜಾಪ್ರಭುತ್ವ ಸರ್ಕಾರ ಜನಜೀವನದ ಹಿನ್ನೆಲೆಯಲ್ಲಿ ಶ್ರಮಿಸಬೇಕು; ಹೀಗೆ ಆಗಬೇಕಾದರೆ ಬೇರೆ ಮಾರ್ಗದಲ್ಲಿ ಹೋಗಬೇಕಾಗುತ್ತದೆ. ಲ್ಯಾಂಡ್ ರೆವಿನ್ಯೂ ಏನಾಗುತ್ತದೆಂದು ನೋಡೋಣ. ಜೋಡಿ ಪದ್ಧತಿ, ಇನಾಂ ಪದ್ಧತಿ, ಹೋಗಬೇಕು. ಆರ್ಥಿಕ ದೃಷ್ಟಿಯಿಂದ ಇದರ ಪರಿಣಾಮವೇನಾಗುತ್ತದೆಂದು ಯೋಚನೆ ಮಾಡೋಣ. ಎರಡು ಮೂರು ವರ್ಷಗಳಿಂದ ಈ ಭೂಸುಧಾರಣೆ ವಿಷಯ ಯೋಚನೆಯಲ್ಲದೆ. ಆರ್ಥಿಕ ಪುನರ್ವ್ಯವಸ್ಥೆಯಾಗಬೇಕಾದರೆ, ಜೋಡಿ ಇನಾಂ ಪದ್ಧತಿ ಹೋಗಬೇಕು, ಭೂ ಪುನರ್ ವ್ಯವಸ್ಥೆಯಲ್ಲಿ ಭೂಮಿ ಹಂಚಿಕೆಯಾಗಬೇಕು ಎಂದು ಹೇಳುತ್ತಿದ್ದಾರೆ. ಹೀಗಿದ್ದರೂ ಈ ಬಡ್ಜೆಟ್ಟಿನಲ್ಲಿ ಇದರ ಬಗ್ಗೆ ಯಾವ ಸೂಚನೆಯೂ ಇಲ್ಲವೆಂದು ವ್ಯಸನಪಡುವವರಲ್ಲಿ ನಾನೂ ಒಬ್ಬ. ಆದರೆ ದೇಶದಲ್ಲಿ ನಿರೀಕ್ಷಣೆ ಏನಿವೆ ಎಂಬುದನ್ನು ಸರ್ಕಾರ ಗಮನಿಸಬೇಕು. ಪಾಶ್ಚಾತ್ಯರಿ ಸರ್ಕಾರವು ಜನಾನುಕರಣೆಯ ಸರ್ಕಾರವೂ ಹೌದು Responsible Government is also responsive Government. ಜನರ ಅಭಿಪ್ರಾಯಗಳಿಗೆ ತಲೆದೂಗದೇ ಹೋದರೆ respond ಮಾಡದೆ ಹೋದರೆ, ಮನ್ನಣೆ ಕೊಡದೇ ಹೋದರೆ, ಅಂಗೀಕಾರ ಕೊಡದೇ ಹೋದರೆ, ಅದು Responsible Government ನ ತತ್ವಕ್ಕೇ ವಿರೋಧವಾಗುತ್ತದೆ.

ಇನ್ನೊಂದು ವಿಷಯವೇನೆಂದರೆ, ಭೂಕಂದಾಯದಿಂದ ಬರತಕ್ಕ ವರಮಾನ. ಇದರಲ್ಲಿ ಎರಡು ಮೂರು ವಿಚಾರಗಳನ್ನು ಗಮನದಲ್ಲಡಬೇಕು. ನಾನು ತತ್ವದ ದೃಷ್ಟಿಯಿಂದ ಇದನ್ನು ಬದಲಾವಣೆ ಮಾಡಬೇಕೆಂದು ನವಿನಯದಿಂದ ಹೇಳುತ್ತೇನೆ. ಭೂ ಕಂದಾಯದ ಪದ್ಧತಿ ಬಹಳ ಕಾಲದಿಂದ ನಡೆದುಕೊಂಡು ಬಂದಿರುವ ಪದ್ಧತಿ. ಭೂ ಕಂದಾಯ ವರಮಾನ ದಿನಚರಿ ವರಮಾನವಾಗಿರಬೇಕೆಂದು ಭಾವಿಸಬಾರದು. ಇದೊಂದು token demand ಸಾಂಕೇತಿಕ ತೆರಿಗೆಯ ಇರವಂತೆ ಇರಬೇಕು. ಇದು ಕೇವಲ ಜನರಿಗೂ ಸರ್ಕಾರಕ್ಕೂ ಇರುವ ಸಂಬಂಧವನ್ನು ಮಾತ್ರ ಸೂಚಿಸತಕ್ಕ ಒಂದು ಸಾಂಕೇತಿಕ ತೆರಿಗೆಯಾಗಿರುವುದು. ಇದು ಸರ್ಕಾರದ ಒಂದು ಮುಖ್ಯ ವರಮಾನದ ಭಾಗವಾಗಿ ಶಾಶ್ವತವಾಗಿ ಹೀಗೆಯೇ ಇರುತ್ತದೆಂದು ಹೇಳುವುದಕ್ಕಾಗುವುದಿಲ್ಲವೆಂದು ಸೂಕ್ಷ್ಮವಾಗಿ ಹೇಳುತ್ತೇನೆ. ಹೀಗಿರುವಾಗ ಈಗ ಒಂದು ಕೋಟಿ 20 ಲಕ್ಷ ರೂಪಾಯಿ ಭೂ ಕಂದಾಯದಿಂದ ವರಮಾನವೆಂದರೂ ಅದು ಬಹುಶಃ ಕಾಲಕ್ರಮದಲ್ಲಿ ನಡೆಯಾಗುತ್ತದೆಂದು ಹೇಳುತ್ತೇನೆ.

ಇನ್ನು ಕೈಗಾರಿಕೆಗಳನ್ನು ನೋಡೋಣ. ನಿಮ್ಮ ಆಯವ್ಯಯದ ಪಟ್ಟಿಯಿಂದ ಏನು ಕಾಣುತ್ತದೆ! ನನ್ನ ಸ್ನೇಹಿತರಾದ ಮಾನ್ಯ ಸದಸ್ಯರು ಶ್ರೀವಾಣಿ ಶಂಕರ ಲಿಂಗೇಗೌಡರು ಒಂದೆರಡು ವಿಷಯಗಳನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಅವುಗಳನ್ನು ನಾನು ಸ್ವಾಗತಿಸುತ್ತೇನೆ. ಅವರು ಈ ಬಗ್ಗೆ ಅಂಕಿ ಅಂಶಗಳನ್ನು ಕೊಟ್ಟು ಹೇಳಿದ್ದಾರೆ. ಒಟ್ಟಿನಲ್ಲಿ ಕೈಗಾರಿಕೆಗಳ ಮೇರೆ ಏನು ಹಣ ಹಾಕಿದ್ದೀರಿ, ಅವುಗಳಿಂದ ಏನು ವರಮಾನ ಬರುತ್ತಿದೆ ಎಂಬುದನ್ನು ನೋಡಿದ್ದೇ ಆದರೆ ಸಂಪೂರ್ಣವಾಗಿ ತೃಪ್ತಿಕರವಾಗಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಕೈಗಾರಿಕೆ ವಿಷಯದಲ್ಲಿ ಒಂದು ಹೊಸ ನೀತಿಗೆ ನಾವು ಹೊಂದಿಕೊಳ್ಳುತ್ತಿದ್ದೇವೆ. ದೊಡ್ಡ ಕೈಗಾರಿಕೆಗಳೂ ಇವೆ, ಸಣ್ಣ ಕೈಗಾರಿಕೆಗಳೂ ಇವೆ. ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಮಾತ್ರ ಈಗಿನಂತೆಯೇ ಮುಂದುವರಿಸಿಕೊಂಡು ಹೋಗುವ ನೀತಿ ಇರಬೇಕು. ಆದರೆ ಸಣ್ಣ ಕೈಗಾರಿಕೆಗಳ ವಿಷಯದಲ್ಲಿ ಇದುವರಗೆ ಹಿಂದೆ ಯಾವ ಒಂದು ನೀತಿಯನ್ನನುಸರಿಸಲಾಗುತ್ತಿತ್ತೋ ಅದನ್ನು ಬದಲಾವಣೆ ಮಾಡಿಕೊಂಡು

(ಶ್ರೀ ಕೆ. ಪಟ್ಟಾಭಿರಾಮನ್‌ರವರು)

ವಿಕೇಂದ್ರೀಕರಣ ಮಾಡಬೇಕು. ಹಣಕಾಸಿನ ದೃಷ್ಟಿಯಲ್ಲಿ ಇದರ ಪರಿಣಾಮವೇನು ?

ಇನ್ನು ಅರಣ್ಯ ಇಲಾಖೆ. ಇದೊಂದು ಬಹಳ ವರಮಾನ ಬರತಕ್ಕ ಇಲಾಖೆ. ಅರಣ್ಯ ಶಾಖೆಯ ವಿಷಯದಲ್ಲಿ ಈಗ ಅನುಸರಿಸುತ್ತಿರುವ ನೀತಿ ತೃಪ್ತಿಕರವಾಗಿಲ್ಲ. ಆದರಿಂದ ವಿಷ್ಟು ವರಮಾನ ಬರಬೇಕೋ ಅಷ್ಟು ಬರುತ್ತಿಲ್ಲ. ಆದಕಾರಣ ಹೀಗೆಯೇ ಮುಂದುವರಿದರೆ ನೀವು ವಿಷ್ಟು ಅಂದಾಜು ಮಾಡಿದ್ದೀರೋ ಅಷ್ಟು ವರಮಾನ ಬರುತ್ತದೆಯೆಂದು ಹೇಳುವುದಕ್ಕಾಗುವುದಿಲ್ಲ. ಈಗ ಪ್ರಪಂಚದ ಪರಿಸ್ಥಿತಿ ಅನಿಶ್ಚಿತವಾಗಿ ಕಾಣುತ್ತಿದೆ. ವಿಲ್ಲಿ ನೋಡಿದರೂ ಹೈಪೋಚಿ ಕಾಣುತ್ತಿದೆ. ಅನೇಕ ಯತ್ನಗಳು ಅಪಘಾತಕ್ಕೊಳಗಾಗುತ್ತಿರುವ ಕಾಲದಲ್ಲಿ ನಿಮ್ಮ ವರಮಾನ ಇದೇ ರೀತಿಯಾಗಿರುತ್ತದೆಂದು ನಂಬಿಕೊಂಡಿರುವುದು ಸಾಧುವಲ್ಲ.

ಮತ್ತೊಂದು ಕಡೆ ಖರ್ಚು ಪೆಚ್ಚಗಳನ್ನು ತೆಗೆದು ಕೊಳ್ಳೋಣ. ಈಗಿರುವುದಕ್ಕಿಂತ ಖರ್ಚು ಜಾಸ್ತಿಯಾಗುವ ನಿರೀಕ್ಷಣೆ ಇದೆಯೇ ವಿನಾ ಕಡಿಮೆಯಾಗುವ ನಿರೀಕ್ಷಣೆ ಕಾಣುತ್ತಿಲ್ಲ. ಜೋಡಿ, ಇನಾಂ ಮುಂತಾದವು ಕೋಗುವಾಗ ಹೊಸ ಖರ್ಚು ಬರುತ್ತದೆಯೇ ವಿನಾ ಉಳಿತಾಯವಾಗುತ್ತದೆಯೇ ಎಂಬುದನ್ನು ಪರಿಶೀಲನೆ ಮಾಡಬೇಕು. ಮತ್ತೊಂದು ಕಡೆ ಕ್ಷಾಮ ಪರಿಸ್ಥಿತಿ ದೇಶದ ನಾನಾ ಭಾಗಗಳಲ್ಲಿ ದಿನೇ ದಿನೇ ಹೆಚ್ಚಾಗುತ್ತಿದೆ. ಪರಿಸ್ಥಿತಿ ನಿನ್ನೆ ಹೇಗಿತ್ತೊ, ಈ ಹೊತ್ತು ನಾಗಿಲ್ಲ. ಅನೇಕ ಕಡೆ ಈ ಕ್ಷಣದವರೆಗೂ ಮಳೆ ಬಿದ್ದಿಲ್ಲ, ಒಂದು ಹನಿ ಕೂಡ ಬಿದ್ದಿಲ್ಲ. ರೈತರು ಜಮೀನನ್ನು ತಯಾರುಮಾಡಿಕೊಂಡಿದ್ದಾರೆ. ಆದರೆ ಇಷ್ಟು ಕಾಲವಾದರೂ ಬಿತ್ತನೆ ಆಗದೇ ಇರುವಾಗ ನೀವು ಕ್ಷಾಮನಿವಾರಣೆಗೆಂದು 20 ಲಕ್ಷ ರೂಪಾಯಿ ಇಟ್ಟುಕೊಂಡಿರುವುದು ಸಾಲುವುದಿಲ್ಲ ; ಇಷ್ಟಕ್ಕೇ ಈ ಖರ್ಚು ನಿಲ್ಲುವುದಿಲ್ಲವೆಂದು ತೋರುತ್ತದೆ. ನಮ್ಮ ಮಂತ್ರಿಗಳ ಹೃದಯ ವೈಶಾಲ್ಯಕ್ಕಾಗಿ ಅವರನ್ನು ವಂದಿಸುತ್ತೇನೆ, ಇಷ್ಟು ಮಾಡಿರುವುದಕ್ಕೆ. ಇನ್ನೂ ಹೆಚ್ಚಿನ ಹೃದಯ ವೈಶಾಲ್ಯ ತೋರಿಸುವುದಕ್ಕೆ ಅವಕಾಶ ಬರುತ್ತದೆ. ವರಮಾನಗಳು ಕುಡಿಮೆಯಾಗತಕ್ಕ ನನ್ನಿವೇಶಗಳು ಕಾಣುತ್ತಿವೆ. ಇದಕ್ಕೆ ಅನೇಕ ಕಾರಣಗಳಿವೆ. ನೀವು ತೋರಿಸಿರುವ 101·72 ಲಕ್ಷ ರೂಪಾಯಿಗಳ ಖೋತಾ ಇಷ್ಟಕ್ಕೆ ನಿಲ್ಲುವುದಿಲ್ಲವೆಂದೂ ವರ್ಷಾಂತ್ಯದಲ್ಲಿ ಇನ್ನೂ ಶ್ರಮ ವಹಿಸಬೇಕಾಗುತ್ತದೆಂದೂ ನನಗೆನ್ನಿಸುತ್ತಿದೆ. ಈ ರೀತಿ ಆಗುತ್ತಿರುವಾಗ ಇದನ್ನು ಸರಿಪಡಿಸುವುದಕ್ಕೆ ಏನು ಮಾಡಬೇಕು ಎಂಬುದನ್ನು ಬಹಳ ಎಚ್ಚರಿಕೆಯಿಂದ ಆಲೋಚನೆ ಮಾಡಬೇಕು. ಈ ಸಭೆಯಲ್ಲಿ ಅನೇಕ ಸಲಹೆಗಳು ಬಂದಿವೆ. ಆದರೆ ಮೂಲಭೂತವಾದ ಒಂದು ವಿಷಯ ಕಾಣುತ್ತದೆ. ವರಮಾನವನ್ನು ಹೆಚ್ಚು ಮಾಡುವ ಮಾರ್ಗ ಬೇಕು. ಖರ್ಚನ್ನು ಕಡಮೆ ಮಾಡುವ ಮಾರ್ಗ ಬೇಕು. ಈ ಸಂಬಂಧದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಎರಡು ಪದಗಳನ್ನು ಉಪಯೋಗಿಸಿದ್ದಾರೆ. ಅದನ್ನು ನೋಡಿ ನನಗೆ ಬಹಳ ಸಂತೋಷವಾಯಿತು. Retrenchment and Economy ಖರ್ಚು ಖೋತಾ, ಮಿತವ್ಯಯ ಎಂದು ಎರಡು ಪದಗಳನ್ನು ಪ್ರಯೋಗಿಸಿದ್ದಾರೆ. Retrenchment is not the same as economy ಇದೆರಡೂ ಒಂದೇ ಅಲ್ಲ. ಬರಿಯ ಖರ್ಚು ಕಡಮೆಮಾಡುವುದು ರಿಟ್ರೆಂಚ್‌ಮೆಂಟ್. ಕೆಲಸಗಳು ದಕ್ಷತೆ ಕಡಿಮೆಯಾಗದಂತೆ ನಿರ್ವಾಹಣೆಯಾಗುವಂತೆ ವ್ಯವಸ್ಥೆ ಮಾಡಿ ಹಣವನ್ನು ಉಳಿತಾಯ ಮಾಡುವುದು ಎಕಾನಮಿ. ಈ ಎರಡು ಪದಗಳನ್ನೂ ಉಪಯೋಗಿಸಿರುವುದರಿಂದ ಬಹಳ ಸಂತೋಷ. ಈ ಸೂಚನೆಯನ್ನು ಮುಂದುವರಿಸಿಕೊಂಡು ಹೋಗುತ್ತಾರೆಂದು ತಿಳಿದುಕೊಂಡಿದ್ದೇನೆ. ಈಗ ಸಂಪಾದನೆಯನ್ನು ಹೆಚ್ಚು ಮಾಡಬೇಕಾಗಿದೆ ; ಖರ್ಚನ್ನು ಕಡಮೆಮಾಡಬೇಕಾಗಿದೆ. ಇದನ್ನು ಹೇಗೆ ಮಾಡೋಣ ಎಂದು ಯೋಚನೆ ಮಾಡಬೇಕಾಗಿದೆ. ಇದಕ್ಕೆ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ.

ಈ ಹೊತ್ತು ನಮ್ಮ ಸಂಸ್ಥಾನದಲ್ಲಿ 9 ಡಿಸ್ಟ್ರಿಕ್ಟುಗಳಿವೆ. ಇಷ್ಟೊಂದು ಡಿಸ್ಟ್ರಿಕ್ಟುಗಳು ಇರಬೇಕೇ ಎನ್ನುವುದು ಸುಮಾರು 20—25 ವರ್ಷಗಳಿಂದಲೂ ಒಂದು ರೂಪದಲ್ಲಿಲ್ಲ ಇನ್ನೊಂದು ರೂಪದಲ್ಲಿ ಒಂದೇ ಸಮನಾಗಿ ನಮ್ಮ ಮುಂದೆ ಬರುತ್ತಿದೆ. ಶ್ರೀವರ್ಮಾ ಶಂಕರಲಿಂಗೇಗೌಡರು ಈ ವಿಷಯದಲ್ಲಿ ಬಹಳ ವಿಚಾರಪೂರಿತವಾಗಿ, ಮುನಸ್ಸಿಗೆ ನಾಟುವ ಹಾಗೆ ಒಂದು ಯೋಜನೆಯನ್ನು ಕೊಟ್ಟಿದ್ದಾರೆ. ಡಿಸ್ಟ್ರಿಕ್ಟುಗಳ ಸಂಖ್ಯೆಯನ್ನು ಕಡಮೆ ಮಾಡಬೇಕು, 9 ಡಿಸ್ಟ್ರಿಕ್ಟುಗಳು ಅನಾವಶ್ಯಕ, 6 ಡಿಸ್ಟ್ರಿಕ್ಟುಗಳು ಸಾಕು. ಒಂದು ಉದಾಹರಣೆ ಹೇಳಿದರೆ ದಯೆಯಿಟ್ಟು ಚಿಕ್ಕಮಗಳೂರು ಡಿಸ್ಟ್ರಿಕ್ಟಿನವರು ಕೋಪ ಮಾಡಿಕೊಳ್ಳಬಾರದು, ಚಿಕ್ಕಮಗಳೂರು ಡಿಸ್ಟ್ರಿಕ್ಟೂ ಒಂದು ಜಿಲ್ಲೆ! ಅದಕ್ಕೆ ಒಬ್ಬ ಜಿಲ್ಲಾಧಿಕಾರಿ ಇಬ್ಬರು ಸಬ್‌ಡಿವಿಜಿ ಆಫೀಸರುಗಳು, ಫಾರೆಸ್ಟ್ ಅಧಿಕಾರಿಗಳು, ಹೀಗೆ ಲೆಕ್ಕಹಾಕಿದರೆ 30—40 ಜನ ಮೇಲ್ಪಟ್ಟವರ ಸಂಬಳ ತೆಗೆದುಕೊಳ್ಳುವ ಅಧಿಕಾರಿಗಳಿದ್ದಾರೆ. ಇವರ ಜೊತೆಗೆ ಸಿಬ್ಬಂದಿಯ ಖರ್ಚು ಬೇರೆ. ಇಂತಹ ಒಂದು ಡಿಸ್ಟ್ರಿಕ್ಟನ್ನು ವಜಾಮಾಡಿ ಆ ಪ್ರದೇಶವನ್ನು ಮತ್ತೊಂದು ಡಿಸ್ಟ್ರಿಕ್ಟಿಗೆ ಸೇರಿಸಿದರೆ ಎಷ್ಟೋ ಹಣ ಉಳಿತಾಯವಾಗುತ್ತದೆ. ರಿಟ್ರೆಂಚ್‌ಮೆಂಟ್ ಎಂಬುದರಲ್ಲಿ ಒಂದು ತೊಡಕಿದೆ. ಹೊಸದಾಗಿ ಸರ್ಕಾರ ಅಡಳಿತ ವಹಿಸಿಕೊಂಡಿರುವಾಗ, ಮೊದಲೇ ಸಿಬ್ಬಂದಿಯನ್ನು ಕುಂಠಿತ ಮಾಡುವ ನೀತಿ ಚೆನ್ನಾಗಿಲ್ಲ. ಆದುದರಿಂದ ಇದೇ ಸಂಬಳ ಬರತಕ್ಕ ಅಧಿಕಾರಿಗಳಿಗೆ ಇನ್ನೂ ಹೆಚ್ಚು ಜವಾಬ್ದಾರಿ ಕೊಡಿ. ಪಕ್ಕದ ಮುಬ್ಯಾಸು ಸಂಸ್ಥಾನದಲ್ಲಿ ನೋಡಿದರೆ ಚಿತ್ರದುರ್ಗ ಜಿಲ್ಲೆ ಒಂದು ನಮ್ಮ ಮೂರು ಜಿಲ್ಲೆಗಳಷ್ಟಾಗುತ್ತದೆ. ಹೀಗೆ ಇದೊಂದು ಸಲಹೆ ಇದೆ ; ಬಹುಶಃ ಮುಖ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಈ ವಿಷಯ ಹೇಳುತ್ತಾರೆಂದು ಭಾವಿಸಿದ್ದೇನೆ. ಇದರ ಸಾಧಕ ಬಾಧಕಗಳನ್ನು ನೋಡಬೇಕು. ಇದನ್ನು ಮಾಡದೇ ಇದ್ದರೆ ಸಾಧ್ಯವಿಲ್ಲ. ಏಕೆಂದರೆ, ಖರ್ಚು ಕಡಮೆಮಾಡಬೇಕೆಂದರೆ, ಡಿಸ್ಟ್ರಿಕ್ಟುಗಳನ್ನು ಕಡಮೆ ಮಾಡುವುದು ಆವಶ್ಯಕ.

ಮತ್ತೊಂದು ಸಲಹೆ ಕೊಡುತ್ತೇನೆ. ಈ ವಿಷಯ ಈಗಾಗಲೇ ಸಭೆಯಲ್ಲಿ ಬಂದಿದೆ. ನಮಗಿರತಕ್ಕ ವರಮಾನದಲ್ಲಿ ಎದ್ಯುಚ್ಛಕ್ತಿ ಇಲಾಖೆ ಬಹಳ ಮುಖ್ಯವಾದುದು. ಈಗಿರತಕ್ಕ ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಹೆಚ್ಚು ಗಮನ ಕೊಡಬೇಕು. ನಾನು ಅಡಳಿತದ ವರದಿಯನ್ನು ಅನೇಕ ವರ್ಷಗಳಿಂದ ನೋಡುತ್ತಿದ್ದೇನೆ. ನಮ್ಮ ವಿದ್ಯುಚ್ಛಕ್ತಿ ಇಲಾಖೆಗೆ ಸಂಬಂಧಪಟ್ಟ ಒಂದು ಉದ್ಯಮದಲ್ಲಿ ವರ್ಷಕ್ಕೆ ನಾಲ್ಕೈದು ಲಕ್ಷ ರೂಪಾಯಿ ವರಮಾನ ಬರುತ್ತಿದ್ದುದು ಒಂದು ಒಂದೂವರೆ ಲಕ್ಷಕ್ಕೆ ಇಳಿದಿದೆ. ಇದಕ್ಕೇನು ಕಾರಣ! ನಮ್ಮ ದೇಶವನ್ನು ಕಾಪಾಡುವುದಕ್ಕೆ ವಿದ್ಯುಚ್ಛಕ್ತಿ ಮೂಲ ಸಾಧನ. ಇದರಲ್ಲಿ ನಮ್ಮ ತತ್ವವನ್ನು ಬಿಡಬೇಕಾದ್ದಿಲ್ಲ. ಉದ್ದೇಶಗಳನ್ನು ಬಿಡಬೇಕಾದುದಿಲ್ಲ. ಇನ್ನೊಂದು ಸಲಹೆ ಕೊಡುತ್ತೇನೆ. ಏನೆಂದರೆ ನಾನು ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಪೈಕಿ ಒಂದು ಸಂಸ್ಥಾನದ ಬಜೆಟ್ ಪಟ್ಟಿಯನ್ನು ಓದಿ ನೋಡಿದ್ದೇನೆ. ಅದರಲ್ಲಿ

ನನಗೆ ಕಂಡು ಬಂದ ಒಂದು ಆಶ್ಚರ್ಯಕರವಾದ ಸಂಗತಿಯೇನೆಂದರೆ—ಅಲ್ಲಿ ಒಂದು ಸಂಸ್ಥಾನ ಟೂರಿಸ್ಟ್ ಟ್ರಾಫಿಕ್ ಪ್ರೋಜೆಕ್ಷನ್‌ಗಳಿಂದ ಬಂದ ವರಮಾನವೆಂದರೇ ಎಂದರೆ, ಪ್ರೇಕ್ಷಕರನ್ನು ಆಕರ್ಷಿಸುವಂಥ ಸ್ಥಳಗಳನ್ನು ಏರ್ಪಡಿಸಿ ತನ್ಮೂಲಕ ಬರತಕ್ಕ ದುಡ್ಡಿನಿಂದರೇ ಆ ದೇಶದ ಆಯವ್ಯಯ ಪಟ್ಟಿಯನ್ನು ಬಹುಮಟ್ಟಿಗೆ ಭರ್ತಿ ಮಾಡಿದ್ದಾರೆ. ನಮ್ಮ ದೇಶದಲ್ಲಿ ಸೌಂದರ್ಯ ಸಾಪತ್ತಿನಿಂದ ಕೂಡಿರತಕ್ಕ ರಮಣೀಯವಾದ ಸ್ಥಳಗಳು—ಕನ್ನಂಬಾಡಿ, ಬೆಂಗಳೂರು, ಮೈಸೂರು, ಇತ್ಯಾದಿ ಸ್ಥಳಗಳು—ಬಹಳವಾಗಿವೆ. ಹೀಗೆ ನಮ್ಮ ಮೈಸೂರು ಸಂಸ್ಥಾನದಲ್ಲಿ ವಿಚಿತ್ರ ವಿಚಿತ್ರ ವೆರಾಟ್ ಸ್ವರೂಪದಿಂದ ಕೂಡಿರುವಂಥ ವಿಶೇಷ ಸ್ಥಳಗಳಿರುವುದರಿಂದ, ಇವುಗಳಿಗೆ ಹೊರಗಡೆಯ ಜನರನ್ನು ಆಕರ್ಷಿಸುವಂತೆ ಮಾಡಿ, ತನ್ಮೂಲಕ ಸರ್ಕಾರಕ್ಕೆ ದುಡ್ಡು ಬರುವಂತೆ ಮಾಡಬಹುದು. ಅದುದರಿಂದ ತಾವು ಇಂಥ ಟೂರಿಸ್ಟ್ ಟ್ರಾಫಿಕ್ಕಿಗೆ ತಕ್ಕ ಏರ್ಪಾಡುಗಳನ್ನು ಮಾಡಬೇಕು. ಈಗ ರತಕ್ಕ ಅರಣ್ಯ ನೀತಿಯನ್ನು ಬದಲಾಯಿಸಿ, ಆ ಬಾಬನಲ್ಲಿ ಹೆಚ್ಚು ಉತ್ಪತ್ತಿ ಬರುವಂತೆ ಮಾಡಬೇಕಾಗಿದೆ. ಎರಕ್ಟ್ರಿಸಿಟಿಯಿಂದ ಹೆಚ್ಚು ದುಡ್ಡು ಬರುವಂತೆ ಮಾಡಬೇಕು. ಖರ್ಚು ಬಾಬಿನಲ್ಲಿ ಉಳಿತಾಯಮಾಡುವುದು ಬಹಳ ಮುಖ್ಯ ವಿಚಾರ. ಅದಕ್ಕಾಗಿ ನಾನಾಗಲೇ ಹೇಳಿದಂತೆ ಜಿಲ್ಲಾವಾರು ಸಂಖ್ಯೆಗಳನ್ನು ಕಡಮೆಮಾಡಬೇಕು.

ಈಗ ನಮ್ಮ ಬಜೆಟ್ಟನ್ನು ಇನ್ನೊಂದು ದೃಷ್ಟಿಯಲ್ಲಿ ನೋಡುವುದಾದರೆ, ನಮಗೆ ಬರತಕ್ಕ ವರಮಾನದ ಹೆಚ್ಚು ಭಾಗ ಕೇವಲ ಹಳ್ಳಿಯ ಜನಗಳಿಂದ ಬರುತ್ತದೆ. ಆದರೆ ಆ ಹಳ್ಳಿ ಜನರ ವರಮಾನವೆಷ್ಟಿದೆ? ಆತನ ವರಮಾನ 32 ರೂಪಾಯಿ ಎನ್ನಬಹುದು. Cost of administration ಆದಳಿತ ಖರ್ಚು ಎಷ್ಟಿದೆ? ಒಕ್ಕ ಹಾಕಿ ನೋಡಿದರೆ ಅದಕ್ಕೆ ಅವನ ಆದಾಯದ 30 ಪರ್ಸೆಂಟಿಗಿಂತ ಜಾಸ್ತಿ ಹೋಗುತ್ತದೆ. ಕೇವಲ 15—20 ರೂಪಾಯಿಗಳಲ್ಲಿ ಸಂಸಾರ ಮಾಡಲು ಯತ್ನಿಸುತ್ತಿದ್ದಾನೆ. ಹೀಗೆ ಇಷ್ಟು ಆಡಳಿತ ಖರ್ಚು ಇರತಕ್ಕದೇಶ ಮತ್ತೊಂದಿಲ್ಲ ಇಂಥ. ಜನರಿಂದ ದುಡ್ಡನ್ನು ಪಡೆದುಕೊಳ್ಳುವ ಸರ್ಕಾರ ತನ್ನ ಆಡಳಿತ ಖರ್ಚು ಕಡಮೆಮಾಡತಕ್ಕದ್ದು ಅತ್ಯಗತ್ಯ. ಹೀಗೆ cost of administration ಕಡಮೆ ಮಾಡಿ, ದೇಶದ ಜನರ ಸಂಪಾದನೆಗೆ ಸರಿಮಾನವಾದ ಮತ್ತು ಸಮತೂಕಿನ ತಕ್ಕಂಥ ಆಡಳಿತದ ಖರ್ಚಿನ ಬಜೆಟ್ಟನ್ನು ತಯಾರಿಸಬೇಕು. ಮತ್ತು ಅಂಥ ರೀತಿಯಲ್ಲಿ ದೇಶದ ಆಡಳಿತವನ್ನು ಮುಂದುವರಿಸಿಕೊಂಡು ಹೋಗಬೇಕು. ಇದು ಬಹಳ ಮುಖ್ಯವಾದ ವಿಷಯ.

ಇನ್ನು ವರಮಾನವನ್ನು ಹೆಚ್ಚಿಸತಕ್ಕ ಬಗ್ಗೆ ನಾನು ತಮಗೆ ಎರಡು ಸಲಹೆಗಳನ್ನು ಕೊಡಬೇಕೆಂದಿದ್ದೇನೆ. ನಮ್ಮ ಖರ್ಚಿನ ಬಾಬುಗಳಲ್ಲಿ ದೊಡ್ಡ ಬಾಬುಗಳು ಎರಡು—ಒಂದು ವಿದ್ಯಾಭ್ಯಾಸ ಮತ್ತೊಂದು ನ್ಯಾಯಾಂಗದ ಬಾಬು. ಆದರೆ ಈ ನ್ಯಾಯಾಂಗದ ವಿಚಾರದಲ್ಲಿ ತಾವು ಹೆಚ್ಚು ಖರ್ಚ ಮಾಡುವುದಲ್ಲದೆ, ಆ ಬಗ್ಗೆ ಹೆಚ್ಚು ಸಹಕಾರವನ್ನೂ ನೀಡುತ್ತಿದ್ದೀರಿ. ಈ ಬಾಬು ಬಹಳ ಮುಖ್ಯವಾದದ್ದೇನೋ ನಿಜ—ಇದಕ್ಕೆ ತಾವು ಹೆಚ್ಚು ಸಹಾಯ ನೀಡತಕ್ಕದ್ದು ನ್ಯಾಯ.

ಇನ್ನು ವಿದ್ಯಾಭ್ಯಾಸದ ವಿಚಾರದಲ್ಲಿ ತಾವು ತೋರಿಸಿರತಕ್ಕ ಪ್ರೋತ್ಸಾಹವನ್ನು ಪುಷ್ಟೀಕರಿಸುತ್ತೇನೆ. ಆದರೆ ಈ ವಿದ್ಯಾಭ್ಯಾಸದ ಸಂಪೂರ್ಣ ಜವಾಬ್ದಾರಿಯನ್ನೆಲ್ಲಾ ಸರ್ಕಾರವೇ ಹೊರುತ್ತಾ ಹೋದರೆ, ಎಲ್ಲಿಯವರೆಗೆ ಈ ಸರ್ಕಾರ ಈ ಹೊರೆಯನ್ನು ಹೊತ್ತುಕೊಂಡು ಮುಂದುವರಿಯಲು ಸಾಧ್ಯ? ಡೈರೆಕ್ಟಿವ್ ಪ್ರಿನ್ಸಿಪಲ್ಸ್ ರಾಜ್ಯಾಂಗದ ನಾಲ್ಕನೆಯ ಭಾಗದಲ್ಲಿ ಹೇಳಿರುವಂತೆ, ತಾವು ಇನ್ನು ಕೇವಲ ಹತ್ತು ವರ್ಷಗಳ ಕಾಲಾವಧಿಯಲ್ಲಿ ದೇಶಾದ್ಯಾಂತವೂ ಸಂಪೂರ್ಣವಾಗಿ, ಉಚಿತ ಮತ್ತು ಬಲತ್ಕಾರ ವಿದ್ಯಾಭ್ಯಾಸವನ್ನು ಕಡ್ಡಾಯವಾಗಿ ತರಬೇಕು. ಇದು ನಮ್ಮ ರಾಜ್ಯಾಂಗದಲ್ಲಿ ಅಡಕವಾಗಿರುವುದಕ್ಕೆ ಅನುಸಾರವಾಗಿದೆ. ಆದರೆ ಇಲ್ಲಿಯ ತನಕ ತಾವು ಒಂದು ಹೆಜ್ಜೆಯನ್ನಾದರೂ ಇನ್ನೂ ಮುಂದಕ್ಕೆ ಇಟ್ಟಿಲ್ಲ. ಆದರೆ ಮಾನ್ಯ ಮುಖ್ಯ ಮಂತ್ರಿಗಳು ಹೆಜ್ಜೆಯಿಡುತ್ತೇವೆಂದು ಹೇಳಿದರೆ, ವಿದ್ಯಾಭ್ಯಾಸದ ವಿಚಾರವಾಗಿ ನನ್ನದೊಂದು ಸಲಹೆ ಇದೆ. ಪ್ರಾಥಮಿಕ ವಿದ್ಯಾಭ್ಯಾಸ ಮತ್ತು ವಿಶ್ವವಿದ್ಯಾನಿಲಯದ ಶಿಕ್ಷಣ, ಅದರಲ್ಲೂ ಈ ವಿಶ್ವವಿದ್ಯಾನಿಲಯದ ಶಿಕ್ಷಣದಿಂದ ದಕ್ಷರಾಗಿ ಯಾರು ಮೈಜ್ಞಾನಿಕ ಇತ್ಯಾದಿ ಶಾಸ್ತ್ರಗಳಲ್ಲಿ ಹೆಚ್ಚಿನ ಪ್ರತಿಭೆಯನ್ನು ಹೊಂದುವರೋ ಅಂಥ ಪ್ರೌಢ ಶಿಕ್ಷಣ, ಈ ಎರಡು ಬಾಬುಗಳನ್ನು ಮಾತ್ರ ಸರ್ಕಾರ ತನ್ನ ಜವಾಬ್ದಾರಿಗೆ ವಹಿಸಿಕೊಂಡು ಬಾಕಿ ವಿದ್ಯಾಭ್ಯಾಸ ಎಂದರೆ, ಹೈಸ್ಕೂಲು ಮುಂತಾದುವನ್ನೆಲ್ಲಾ ಖಾಸಗಿಯವರ ಜವಾಬ್ದಾರಿಗೆ ಗ್ರಾಂಟ್-ಇ-ಏಡ್ ವ್ಯವಸ್ಥೆ ಮೇರೆ ಬಿಟ್ಟು ಬಿಟ್ಟರೆ ಅನುಕೂಲವಾಗುತ್ತದೆ. ಆದರೆ ಇದು ಬಹಳ ಕಷ್ಟದ ವಿಷಯ. ಜನರೂ ಕೂಡ ತಮ್ಮನ್ನು ಕಟುವಾಗಿ ಟೀಕಿಸಬಹುದು. ತಾವು ಈಗ ನಾನು ಹೇಳಿದಂತೆ ಮಾಡದೆಹೋದ ಪಕ್ಷದಲ್ಲಿ, ಇನ್ನೂ 10 ವರ್ಷಗಳಾದ ಮೇಲೆ, ತಾವು ಈ ಸಂಬಂಧವಾಗಿ ಎಷ್ಟು ಕಷ್ಟಕ್ಕೀಡಾಗುತ್ತೀರೆಂಬ ಒಂದು ಭಯವನ್ನೂ ಮತ್ತು ಶಂಕೆಯನ್ನೂ ನಾನು ಈ ದಿವಸವೇ ತಮಗೆ ತಿಳಿಸುತ್ತಿದ್ದೇನೆ.

ಇನ್ನು ನ್ಯಾಯಾಂಗದ ವಿಚಾರ. ಮಹಾತ್ಮಾಗಾಂಧಿಯವರು ಏನು ಒಂದು ಪಂಚಾಯಿತಿ ರಾಜ್ಯವನ್ನು ಸ್ಥಾಪಿಸಬೇಕೆಂದಿದ್ದಾರೋ ಅದರಲ್ಲಿ ಎಲ್ಲ ಬಗೆಯ ಆಡಳಿತವೂ ಅಡಕವಾಗಿದೆ. ಅದು ತಮಗೆಲ್ಲರಿಗೂ ಗೊತ್ತಿರತಕ್ಕ ವಿಚಾರ. ಮಹಾತ್ಮಾಗಾಂಧಿಯವರು ಹೇಳಿರುವಂತೆ ನ್ಯಾಯ ಸಂರಕ್ಷಣೆಮಾಡಲು ಅವಶ್ಯಕವಾದ ಕೆಲವು ಜುಡಿಷಿಯರ್ ಅಧಿಕಾರವನ್ನು ಈ ಪಂಚಾಯಿತಿಗಳಿಗೇ ಕೊಟ್ಟರೆ ಅವು ಸುಗಮವಾಗಿ ನಡೆಯುತ್ತದೆಯೆಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಆದುದರಿಂದ ತಾವು ಮುಂದೆ ತರಲಿರುವ ಪಂಚಾಯಿತಿ ಬಿಲ್ಲಿನಲ್ಲಿ ಈಗ ಹಾಲಿ ಇರತಕ್ಕ I, II ಮತ್ತು III ನೇ ತರಗತಿ ಮ್ಯಾಜಿಸ್ಟ್ರೇಟರುಗಳ ಕೆಲವು ಅಧಿಕಾರ ಮತ್ತು 504 ಐ. ಪಿ. ಸಿ. ಪೋಲೀಸ್ ಆಕ್ಟ್ ಇಂಥ ಅಪರಾಧಗಳನ್ನು ತೀರ್ಮಾನಮಾಡುವಂಥ ಅಧಿಕಾರ ಇವು ಈ ಪಂಚಾಯಿತಿಗಳಿಗಿರುವಂತೆ ಮಾಡಿ, ಮುನಿಸಿಪಾಲಿಟಿಗಳಿಗೆ ಕೊಡಿ. ಈ ಕೇಸುಗಳ ತೀರ್ಮಾನವನ್ನೆಲ್ಲಾ ಅವರಿಗೆ ವಹಿಸುವುದಾದರೆ, ತಾವು ಒಂದು ದೊಡ್ಡ ತತ್ವವನ್ನು ಪಾಲಿಸಿದಂತಾಗುತ್ತದೆ ಮತ್ತು ಖರ್ಚನ್ನೂ ಸಹ ಸ್ವಲ್ಪಮಟ್ಟಿಗೆ ಉಳಿತಾಯಮಾಡಿದಂತೆ ಆಗುತ್ತದೆ ಇದರ ಜೊತೆಗೆ ಜನರಿಗೂ ಕೂಡ ನ್ಯಾಯ ಸಂರಕ್ಷಣೆ ಮತ್ತು ನ್ಯಾಯ ವಿಲೇರ್ವೆ ಬಗ್ಗೆ ಸಂಪೂರ್ಣ ವಿಶ್ವಾಸ ಪುಟಿಗಾಗುತ್ತದೆ. ಇಷ್ಟು ತತ್ವಗಳನ್ನು ಮನಸ್ಸಿನಲ್ಲಿಟ್ಟುಕೊಂಡು, ಈ ಒಂದು ವಿಶೇಷ ದೃಷ್ಟಿಯಿಂದ ನಾನು ಇದನ್ನೆಲ್ಲಾ ಹೇಳುತ್ತಿದ್ದೇನೆ. ಮುಖ್ಯವಾಗಿ ತಾವು ಇದನ್ನು ತಮ್ಮ ಗಮನಕ್ಕೆ ಹಾಕಿಕೊಳ್ಳಬೇಕು ಮತ್ತು ಆಲೋಚನೆ ಮಾಡಬೇಕಾಗಿದೆ.

ಇನ್ನು ಎಲ್ಲಕ್ಕಿಂತ ಹೆಚ್ಚಾಗಿ ಆರ್ಥಿಕವಿಲೇನೀಕರಣದ ಸಂಬಂಧವಾಗಿ ಎಂದರೆ, ಭಾರತ ಸರ್ಕಾರಕ್ಕೂ ಮತ್ತು ನಮ್ಮ ಸರ್ಕಾರಕ್ಕೂ ಆಗಿರುವ ಒಂದು ಒಪ್ಪಂದದ ಪರಿಣಾಮವಾಗಿ, ಆದ ತೀರ್ಮಾನ ಈಗ

(ಶ್ರೀ ಕೆ. ಪಟ್ಟಾಭಿರಾಮನ್ ರವರು)

ಏನಾಗಿದೆಯೆಂದರೆ—ಅದೊಂದು ದೊಡ್ಡ ಉಗ್ರ ರೂಪ ವನ್ನೇ ತಾಳಿರುತ್ತದೆಂದು ಮಾನ್ಯ ಮುಖ್ಯ ಮಂತ್ರಿಗಳೇ ಹೇಳಿದ್ದಾರೆ. ಅವರು ಹಾಗೆ ತಿಳಿಸಿದ್ದಕ್ಕಾಗಿ ನಾನು ಸಂತೋಷಪಡುತ್ತೇನೆ. ಆದರೆ ಇದು ಆದ ಮೊದಲನೆಯ ಒಂದೆರಡು ವರ್ಷಗಳು ಬಹಳ ಚೆನ್ನಾಗಿದ್ದಂತೆ ಕಾಣಬಹುದು. ಆದರೆ ಈ ವಿಚಾರವಾಗಿ ಮೊದಲೇ ಸ್ವಲ್ಪ ಕಷ್ಟಪಟ್ಟು ಕೆಲಸಮಾಡಿದ್ದರೆ ಚೆನ್ನಾಗಿತ್ತು. ಈ ಸಂಬಂಧವಾಗಿ ಇನ್ನೂ ಅನೇಕ ಸಮಸ್ಯೆಗಳು ಚರ್ಚೆಗೆ ಮುಂದಕ್ಕಾದರೂ ಒಂದಲ್ಲ ಒಂದು ದಿನ ಬರಲೇಬೇಕು; ಬಂದೇ ಬರುತ್ತದೆ. ಅನೇಕ ವಿಚಾರ ಗಳಲ್ಲಿ ನಾವು ಇಂದು ಅವರಿಗೆ ಅಧೀನರಾಗಿರುವುದ ರಿಂದ, ನಮ್ಮ ಸಂಸ್ಥಾನದಲ್ಲಿ ನಾವು ದೊಡ್ಡ ದೊಡ್ಡ ಯೋಜನೆಗಳನ್ನು ಸ್ಥಾಪನೆ ಮಾಡುವುದಕ್ಕಾಗುವುದಿಲ್ಲ, ಪಾಂಚವಾರ್ಷಿಕ ಯೋಜನೆಯನ್ನು ಮಾಡುವುದಕ್ಕಾಗು ವುದಿಲ್ಲ. ಹೀಗೆ ಈ ಆರ್ಥಿಕ ವಿಲೀನೀಕರಣದ ಫಲವಾಗಿ ನಾವು ಇನ್ನೂ ಹೆಚ್ಚಿನ ಕಷ್ಟನಷ್ಟಗಳನ್ನು ಅನುಭವಿಸಬೇ ಕಾಗಿದೆ. ನನ್ನ ದೃಷ್ಟಿಯಲ್ಲಿ ಯಾವಾಗ ಈ ಆರ್ಥಿಕ ವಿಲೀನೀಕರಣವಾಯಿತೋ ಆ ಕಾಲದಿಂದ ಕೇಂದ್ರ ಸರ್ಕಾರದವರು ನಮಗೆ ದೊಡ್ಡ ದೊಡ್ಡ ಯೋಜನೆ ಗಳನ್ನು ಕೈಕೊಳ್ಳತಕ್ಕ ಬಗ್ಗೆ ಗ್ಯಾರಂಟುಗಳನ್ನು ಕೊಡು ವುದೂ ಒಂದು ಕಡೆಗೆ ಇರಲಿ, ಇಂಥ ದೊಡ್ಡ ದೊಡ್ಡ ಯೋಜನೆಗಳ ಖರ್ಚನ್ನು ಪ್ರಾಂತ ಸರ್ಕಾರಗಳ ಮೇಲೆ ಹಾಕತಕ್ಕದ್ದು ಸ್ವಲ್ಪವೂ ಚೆನ್ನಾಗಿಲ್ಲ; ನರಿಯಾಗಿಲ್ಲ, ಇವುಗಳೆಲ್ಲವೂ ಸಂಪೂರ್ಣವಾಗಿ ಕೇಂದ್ರ ಸರ್ಕಾರದ ಪರ ಜವಾಬ್ದಾರಿಯ ಮೇಲೆಯೇ ನಡೆಯಬೇಕಾಗಿತ್ತು. ಆದರೆ, ಹಾಗೆ ಮಾಡದೆ, ಈ ದಿವಸ ಇಂಥಾದ್ದನ್ನೆಲ್ಲಾ ಪ್ರಾಂತ ಸರ್ಕಾರಗಳ ಮೇಲೆ ಹಾಕಿರತಕ್ಕ ಅವರ ನೀತಿ, ಧೋರಣೆ, ಅವರ ಕಾರ್ಯಕ್ರಮ, ಒಪ್ಪ ತಕ್ಕದ್ದಲ್ಲ. ಈ ವಿಚಾರಗಳನ್ನೆಲ್ಲಾ ಈಗಲಾದರೂ ತಾವು ಅವರಿಗೆ ಒತ್ತಿ ಒತ್ತಿ ಹೇಳಬೇಕು. ದಕ್ಷಿಣ ಹಿಂದೂ ಸ್ಥಾನದಲ್ಲೇ ಅಂಥ ದೊಡ್ಡ ಯೋಜನೆ ಇಲ್ಲ, ಎಲ್ಲಾ ಉತ್ತರ ಹಿಂದೂಸ್ಥಾನದಲ್ಲೇ ಇದೆ ಎಂದಿದ್ದೀರಿ. ನನಗಾದರೂ ಹೀಗೆನ್ನಿಸುತ್ತದೆ—ಇನ್ನಾದರೂ ನಾವು ನಮ್ಮ ದೇಶದಲ್ಲಿ ದೊಡ್ಡ ದೊಡ್ಡ ಯೋಜನೆಗಳನ್ನು ಹಾಕಿಕೊಳ್ಳದೆ ಹೋದರೆ, ನಾವು ಖಂಡಿತ ಮುಂದೆಬರಲು ಸಾಧ್ಯವಿಲ್ಲ. ಅದ್ದರಿಂದ ಈಗಲಾದರೂ ನಾವು ಎಚ್ಚತ್ತುಕೊಳ್ಳದೆ ಹೋದರೆ, ನಮಗೆ ಮುಂದೆ ಮುಕ್ತಿ ಯಿಲ್ಲ. ಹಾಗೆ ನಾವು ಹಾಕಿಕೊಳ್ಳುವ ಪ್ರತಿಯೊಂದು ದೊಡ್ಡ ದೊಡ್ಡ ಯೋಜನೆಗೂ, ಇದರ ಕಾರ್ಯ ಕರಾ ಪಗಳನ್ನು ನಡೆಸತಕ್ಕ ಏಜನ್ಸಿ ನಮ್ಮ ಮೈಸೂರು ಸಂಸ್ಥಾನಕ್ಕಿರಬೇಕು, ಇದರ ಖರ್ಚು ವೆಚ್ಚಗಳ ಜವಾ ಬ್ದಾರಿಯೆಲ್ಲಾ ಕೇಂದ್ರ ಸರ್ಕಾರದ ಮೇಲಿರಬೇಕು. ಈಗೆ ಬೆಂಗಳೂರಿಗೆ ಈ ಆರ್ಥಿಕ ವಿಲೀನೀಕರಣಕ್ಕೆ ಸಂಬಂಧಪಟ್ಟ ನಮ್ಮ ಮಿತಿಯವರು ಬಂದಿದ್ದಾರೆಂದು ತಿಳಿಸಿ ದ್ದೀರಿ. ಅವರಲ್ಲಿ ತಾವು ಈ ವಿಚಾರಗಳನ್ನೆಲ್ಲ ಒತ್ತಿ ಹೇಳಿ ನಮ್ಮ ನೀತಿಯನ್ನು ಅವರು ಪಾಲಿಸುವಂತೆ ಮಾಡಲು ಈ ಮಾನ್ಯ ಸಭೆಯ ಸದಸ್ಯರೆಲ್ಲರೂ ಏಕಕಂಠ ದಿಂದ ತಮಗೆ ಒತ್ತಾಸೆಕೊಡುತ್ತಾರೆ. ಅಷ್ಟೇ ಏಕೆ, ಈ ದಿವಸ ಸಭಾ ನಾಯಕರಾಗಿರತಕ್ಕ ಮಾನ್ಯ ಮುಖ್ಯ ಮಂತ್ರಿಗಳೂ, ಅಲ್ಲದೆ ಇಡೀ ದೇಶದ 78 ಲಕ್ಷ ಪ್ರಜೆ ಗಳಿಗೂ ನಾಯಕರಾಗಿ ತಾವೆಲ್ಲರೂ ಅವರಲ್ಲಿ ಹೋಗಿ ನಮ್ಮ ಬೇಡಿಕೆಯನ್ನಿಟ್ಟು, ಈ ಸಂಸ್ಥಾನಗಳ ಮೇಲೆ ಭಾರ ಹಾಕತಕ್ಕ ಅವರ ಭಾವನೆ ಹೋಗುವ ಹಾಗೆ ಅವರ ನೀತಿಯನ್ನು ಬದಲಾಯಿಸುವಂತೆ ಅವರಿಗೆ ಹೇಳಬೇಕಾಗಿದೆ. ದೊಡ್ಡ ದೊಡ್ಡ ಕೆಲಸಗಳೇನಿದ್ದರೂ, ಈಗಿರುವುದೂ ಮುಂದಾಗತಕ್ಕದ್ದೂ, ಸೆಂಟ್ರಲ್ ಫಂಡ್ಸ್ ನಿಂದಲೇ ಆಗಬೇಕು. ಹಾಗೆ ಮಾಡದಿದ್ದರೆ ನಮ್ಮ ಭವಿಷ್ಯತಕ್ಕ ದುದ್ದೂ ಯಾತಕ್ಕೂ ಸಾಲದು. 'ಮೊದಲಾಗಿ ದ್ದರೋ ನಮ್ಮಲ್ಲಿ ದೊಡ್ಡ ರಿಸರ್ವ್ ನಿಧಿಯೊಂದಿತ್ತು, ಆದರೆ ಆ ರಿಸರ್ವ್ ನಿಧಿ ಈ ದಿವಸ ಇಲ್ಲ, ಇದು ಒಂದು ದೊಡ್ಡ ತಪ್ಪು' ಎಂದು ನನ್ನ ಪರಮಮಿತ್ರರಾದ ಜನಾಬ್ ಮಹಮದ್ ಇಮಾಂರವರು ಹೇಳಿದರು. ಆದರೆ ವಿಚಾರಗಳನ್ನು ಅವರು ಹೇಳಿದಂಥ ವಾದ ಸರಣಿಯಲ್ಲಿ ಹೇಳುವುದಕ್ಕಾಗಲಿ ಅಥವಾ ಅವರಷ್ಟು ಸ್ವಾರಸ್ಯವಾಗಿ ಭಾಷಣಮಾಡುವುದಕ್ಕಾಗಲಿ ನನಗೆ ಶಕ್ತಿಯಿಲ್ಲ. ಅವರಷ್ಟು ಮೇಧಾಶಕ್ತಿಯಾಗಲೀ, ರೋಕಾನುಭವವಾಗಲೀ, ನನಗೆ ಇರುವುದಿಲ್ಲ.

4 P.M.

ಈ ಸಂದರ್ಭದಲ್ಲಿ ದೇಶವನ್ನು ಕಾಪಾಡಬೇಕು, ದೇಶದಲ್ಲಿ ಬಹಳವಾಗಿ ಬದಲಾವಣೆಯಾಗಬೇಕು ಎಂದು ನಿವೇದನ ಮಾಡುತ್ತೇನೆ. ಆಗದಿದ್ದರೆ ಬಹಳ ಕಷ್ಟ.

ಇದೇ ಸಮಯದಲ್ಲಿ ಪ್ರಾಸಂಗಿಕವಾಗಿ ಬಂದಿ ರುವ ಎರಡು ಮಾತುಗಳಿವೆ. ಒಂದು ಸರ್ಕಾರದ ಕಾರ್ಯನೀತಿಯ ಬಗ್ಗೆ ಮಾನ್ಯ ಮಿತ್ರರಾದ ಜನಾಬ್ ಇಮಾಂರವರು ಪ್ರಸ್ತಾಪಮಾಡಿರುವುದು. ಹಾಗೆ ಮಾಡುವಾಗ ನನ್ನ ಹೆಸರು ಕೂಡ ಒಂದು ಸಂಬಂಧ ವಾಗಿ ಬಂದಿರುವುದರಿಂದ ಆ ವಿಚಾರದಲ್ಲಿ ಏನೂ ಹೇಳ ದಿದ್ದರೆ ಬಹುಶಃ ನಮಗೆ ಮುಖ್ಯ ಮಂತ್ರಿಗಳು ಯಾವ ವಿಧವಾದ ಒಂದು ಸೌಹಾರ್ದವನ್ನು ತೋರಿಸಿ ದ್ದಾರೋ ಅದಕ್ಕೆ ಅವಮಾನ ಮಾಡಿದಂತಾಗುತ್ತದೆ. ಆ ವಿಷಯದಲ್ಲಿ ಒಂದೆರಡು ವಿಚಾರ ಹೇಳುತ್ತೇನೆ. ಶ್ರೀ ಹನುಮಂತಯ್ಯನವರು ಗಂಡಭೇರುಂಡಧ್ವಜವನ್ನು ಅಶೋಕ ಚಕ್ರದಿಂದ ಇಳಿಸಿದ್ದು ಒಂದು ನಿಷ್ಪ್ರ ಯೋಜನ ಒಂದು ಸತ್ಸಂಪ್ರದಾಯ ಮತ್ತು ನೂತನ ರಾಜ್ಯಾಂಗ ಕ್ಕೆ ವಿಶ್ವಾಸ ಇವುಗಳನ್ನು ತೋರಿಸುತ್ತದೆ. ಇಡೀ ಜನತೆ ಇದಕ್ಕೆ ಕೃತಜ್ಞರಾಗಿದ್ದಾರೆ ಎಂದು ಧಾರಾಳ ವಾಗಿ ಹೇಳಬಲ್ಲೆ ಬಹುಶಃ ಅದು ಈಗಾಗಲೇ ಆಗಬೇ ಕಾಗಿತ್ತು. ಆದರೆ ದೇವರ ಉದ್ದೇಶ ಹೀಗಿತ್ತು. ಅದು ಶ್ರೀ ಹನುಮಂತಯ್ಯನವರಿಂದಲೇ ಆಗಬೇಕಾಗಿ ತ್ತು. ಅವರ ಪೂರ್ವ ಚರಿತ್ರೆಯನ್ನು ನೋಡಿದರೆ ಅವ ರಿಂದ ಆ ಕೆಲಸ ಆಗಬೇಕಾದದ್ದೂ ಒಂದು ವೈಶಿಷ್ಟ್ಯ ಎಂದು ಕಾಣುತ್ತದೆ. ಎರಡನೆಯದಾಗಿ ಶ್ರೀ ಹನು ಮಂತಯ್ಯನವರು ಜವಾಬ್ದಾರಿಯಿಂದ ನಿಷ್ಪ್ರಯೋಜ ಕೂಡಿದ ಹೊಸ ವ್ಯವಸ್ಥೆಯನ್ನು ನಿರ್ಮಿಸಬೇಕೆಂದು ಹೊರಡುತ್ತಿರುವಾಗ ಅದಕ್ಕೆ ಒಪ್ಪಿಗೆ ಕೊಡುತ್ತೇನೆ. ಅವರ ಜೊತೆಯಲ್ಲಿ ಸಾಮಾನ್ಯ ಮನುಷ್ಯನಂತೆ ಸಹ ಕಾರ ನೀಡಿ ಸ್ವಾಗತ ಮಾಡುತ್ತೇನೆ.

ನಮ್ಮ ಮೈಸೂರು ದೇಶದ ಪತ್ರಿಕಾವರ್ಗ ಆದರ್ಶ ಪ್ರಾಯವಾಗಿವೆ. ಆದರ ವ್ಯವಸ್ಥೆ ಚೆನ್ನಾಗಿದೆ ಎಂದು ಹೇಳಬಹುದು. ಹಾಗೆ ಹೇಳಿದರೆ ಅದು ತಪ್ಪಾಗುವಾ ದು. ನಮ್ಮ ಕನ್ನಡ, ಇಂಗ್ಲೀಷು ಮತ್ತು ಬೇರೆ ಯಾವ ಪತ್ರಿಕೆಗಳನ್ನು ನೋಡಿದರೂ ಪತ್ರಿಕಾವರ್ಗ ಆದರ್ಶವಾಗಿದೆ; ಪ್ರಗತಿ ಹೇಗಿದೆ, ದೇಶ ಮುಂದುವರಿ ಯುತ್ತಿರುವ ದಾರಿ ಹೇಗಿದೆ ಎಂದು ತಿಳಿದು, ಕಾಲಕ್ಕೆ ತಕ್ಕಂತೆ ಹೆಜ್ಜೆಯಿಡುತ್ತಿದೆ; ಧ್ವಜವನ್ನು ತೆಗೆದುದನ್ನು ಸ್ವಾಗತಮಾಡಿದೆ. ನನ್ನ ಪರಮಮಿತ್ರರೂ, ಗೌರವಕ್ಕೆ ಅರ್ಹರಾದವರೂ ಆದ ಜನಾಬ್ ಇಮಾಂರವರು ನುಡಿದಿರುವ ಚೀನುನುಡಿಗಳನ್ನು ನೋಡಿ ಬಹಳ ವ್ಯಸನ ವಾಯಿತು.

ಈಗ ದೇಶವನ್ನೆಲ್ಲಾ ಕಾಪಾಡಬೇಕಾಗಿದೆ. ಏನಾದರೂ ಮಾಡಿ ಸಂಪಾದನಾ ಮೂಲ ಕಂಡುಹಿಡಿದು ಹಣವನ್ನು ಗಳಿಸಿ ಜನರನ್ನು ತೃಪ್ತಿಪಡಿಸದಿದ್ದಲ್ಲಿ ಜವಾಬ್ದಾರಿ ಸರ್ಕಾರ ಬಂದಿದ್ದಕ್ಕೆ ಸಾಕಷ್ಟು ಪ್ರಯೋಜನವಾಗಲಾರದು. ಜನರನ್ನು ಕೈಬಿಟ್ಟು ಮುಂದುವರಿಯುವುದಕ್ಕಾಗುವುದಿಲ್ಲ. ದೊಡ್ಡವರು ಹೇಳುವ ಹಾಗೆ ಬರಿಯ ಧ್ಯೇಯದಿಂದ ಹೊಟ್ಟೆ ತುಂಬಿಸುವುದಕ್ಕೆ ಸಾಧ್ಯವಿಲ್ಲ; ಅನ್ನದಿಂದಲೇ ತುಂಬಿಸಲು ಸಾಧ್ಯ. ಜವಾಬ್ದಾರಿ ಸರ್ಕಾರದಿಂದ ಜನರ ಅನುಕೂಲಕ್ಕಾಗಿ, ಸತ್ಕಾರ್ಯಕ್ಕಾಗಿ ತಕ್ಕ ಬದಲಾವಣೆ ಆಗಬೇಕು.

ಇನ್ನೆರಡು ಧ್ಯೇಯಗಳನ್ನು ಸಭೆಯ ಮುಂದಿಟ್ಟು ನನ್ನ ಭಾಷಣವನ್ನು ಮುಕ್ತಾಯಮಾಡುತ್ತೇನೆ. ತರೀಕಂದಾಯ ಮದ್ಯಾಸು ಬೊಂಬಾಯಿಗಳಲ್ಲಿ ಜಾಸ್ತಿಯಿದೆ. ಆದರೆ ನಮ್ಮಲ್ಲಿ ಕಡಮೆ, ಎಂದಿದ್ದಾರೆ, ಹಣಕಾಸಿನ ಸಚಿವರು. ಒಂದು ಕಡೆ ನೀರಾವರಿ ಕೆಲಸ ಹೆಚ್ಚಾಗಿ ನಡೆಯುತ್ತಿರುವುದರಿಂದ ಹೆಚ್ಚು ಅನುಕೂಲ ದೊರೆತಿದೆ ಎಂದಾಗ ಕೋಲಾರ ಜಿಲ್ಲೆಯನ್ನು ಕೈಬಿಟ್ಟಿರೆಂದು ನಂತೋಷಪಟ್ಟೆ. ಅಲ್ಲ ಹೆಚ್ಚಿಸುವಂತಿಲ್ಲ. ಕಂದಾಯ ಹೆಚ್ಚಿಸಲಿಕ್ಕೆ ಕೈಹಾಕಬೇಡಿ. ಕಂದಾಯ ಹೆಚ್ಚುಮಾಡುವುದಕ್ಕೆ ಕಾಲವಲ್ಲ. ಕೆರಿಗೆಯ ನೀತಿಯ ವಿಚಾರ ಹೇಳುತ್ತಾ ಹೋಗುವುದಿಲ್ಲ, ಬಹುಶಃ ದೇಶದ ಸ್ಥಿತಿಗತಿ ನೋಡಿದರೆ ತೆರಿಗೆ ಈಗಾಗಲೇ ಮಿತಿಮೀರಿದೆ. ಕಂದಾಯ ಹೆಚ್ಚಿಸುವುದಕ್ಕೆ ಕೈಹಾಕಬೇಡಿ, ಕಂದಾಯ ಜಾಸ್ತಿಮಾಡುವ ನೀತಿಸರಿಯಲ್ಲ, ಎಂದು ಇಡೀ ಜನತೆಯ ಪರವಾಗಿ ಹೇಳುತ್ತೇನೆ. ಒಂದು ಕೋಟಿಯ ಮೇಲೆ ಖೋತಾ ಆಗಿದ್ದರೂ ಆರ್ಥಸಚಿವರು ಅದನ್ನು ಸರಿಪಡಿಸುವ ಹೊಸ ಭಾರವನ್ನು ಹೊರಿಸದೇ ಬಿಟ್ಟು ಅವರ ಎದೆಗಾರಿಕೆ ತೋರಿಸಿದ್ದಾರೆ. ಇದೇ ದಿಟ್ಟತನ ಈ 12 ತಿಂಗಳೂ ಇರಬೇಕು. ಮತ್ತೆ ಮೇಲೆ ಬದ್ದುಬರಬೇಡಿ ಎಂದು ಈ ಸಂದರ್ಭದಲ್ಲಿ ತಿಳಿಸಬೇಕಾಗಿದೆ.

ಎಲ್ಲಕ್ಕೂ ಹೆಚ್ಚಾಗಿ ಸಂಬಳ ಸಾರಿಗೆ ಎಸ್.ಆರ್. ಈ ವಿಚಾರದಲ್ಲಿ ಡಿದಾರ್ಯ ಜಾಸ್ತಿಯಾಗಬೇಕು. ಇದರಲ್ಲಿ ಒಂದು ಮೂಲತತ್ವ ಅಡಗಿದೆ. ಇಂಗ್ಲೆಂಡ್ ಮುಂತಾದ ಸುಧಾರಿತವಾದ ದೇಶಗಳಲ್ಲಿ ಬಡ್ಜೆಟ್ ತಯಾರಿಸುವಾಗ ಮಾಡುವಂತೆ ಇಲ್ಲೂ ಕೂಡ ಒಂದು ತತ್ವವನ್ನನುಸರಿಸಿ ಸ್ಯಾಲರಿ ಸ್ಟ್ರಕ್ಚರ್ ರೂಪಿಸಿ ಹಣ ಒದಗಿಸಬೇಕು. ತತ್ವ ಏನು? ಬಹಳ ಕೆಳದರ್ಜೆಯಲ್ಲಿರುವವರ ಸಂಬಳ ಕೂಡ ಅವರ ಜೀವನಕ್ಕೆ ತಕ್ಕ ಹಾಗಿರಬೇಕು, ಸುಖಜೀವನ ನಡೆಸುವ ಹಾಗಿರಬೇಕು, ಜೀವನದ ಭದ್ರತೆಯಿರಬೇಕು. ಜೀವನ ಜರುಗಿಸಲು ಎಷ್ಟು ಅಗತ್ಯವೋ ಅಷ್ಟು ದೊರೆಯುವಂತಾಗಬೇಕು. ಕನಿಷ್ಠ ಜೀವನ ಸಂಬಳಕೊಡಲೇಬೇಕು. ದೇಶದ ವರಮಾನ ಮತ್ತು ಆರ್ಥಿಕಪರಿಸ್ಥಿತಿಗಳ ಆಧಾರದ ಮೇಲೆ ಸಂಬಳ ಸಾಕಷ್ಟು ಗೊತ್ತುಮಾಡುವುದು ಸುಧಾರಿತವಾದ ನಾಗರಿಕ ದೇಶಗಳಲ್ಲಿ ಮತ್ತು ಪಾಶ್ಚಾತ್ಯ ರಾಜ್ಯಗಳಲ್ಲಿ ಇರುವ ಒಂದು ಪದ್ಧತಿ. ಆ ಪದ್ಧತಿ ನಮ್ಮ ದೇಶದಲ್ಲಲ್ಲ. ನಿನ್ನೆ ಶ್ರೀ ಥಾಮಸ್‌ರವರು ಕೆಣ್ಣು ಮಕ್ಕಳ ವಿಚಾರದಲ್ಲಿ ಒಂದು ಮಾತು ಹೇಳಿದ್ದಾರೆ. ನರ್ಸುಗಳಿಗೆ ಕೇವಲ 22 ರೂಪಾಯಿಗಳ ಸಂಬಳ ಬರುತ್ತದೆಯಂತೆ. ಅದೇ ದಿನಗೂಲಿ ಮಾಡುವವರಿಗೆ, ಮಣ್ಣು ಹೊರುವವರಿಗೆ ದಿನಕ್ಕೆ ಒಂದರಿಂದ ಒಂದೂವರೆ ರೂಪಾಯಿಗಳವರೆಗೆ ಕೂಲಿ ಇದೆ. ಆದರ ಪ್ರಕಾರ ತಿಂಗಳಿಗೆ ಆ ಕೂಲಿಗಳು 35-40 ರೂಪಾಯಿಗಳನ್ನು ಸಂಪಾದಿಸುವಾಗ, ಎಷ್ಟೋ ಜವಾಬ್ದಾರಿಯಿಂದ ಕೆಲಸಮಾಡುವ ನರ್ಸುಗಳಿಗೆ ಮಾಹೆಯಾನಾ 22 ರೂಪಾಯಿಗಳ ಸಂಬಳಕೊಡುವುದು ಗೌರವಯುತವಾಗಿ ಕಾಣುತ್ತದೆಯೆ? ಅದರಿಂದ ಅವರು ಮರ್ಯಾದೆಯಿಂದ ಜೀವನ ಮಾಡುವುದಾದರೂ ಹೇಗೆ? ಆದ್ದರಿಂದ ವೇಜ್ ಸ್ಟ್ರಕ್ಚರ್ ಬದಲಾಯಿಸಬೇಕು. ಎಲ್ಲರನ್ನೂ ತೃಪ್ತಿಪಡಿಸುವುದು ಸರ್ಕಾರಕ್ಕೆ ಸಾಧ್ಯವಿಲ್ಲ. ಒಂದು ಕಾನೂನು ಮಾಡಿದರೆ, ಒಂದು ಶಾಸನ ಮಾಡಿದರೆ ಕೆಲವರು ಅದನ್ನು ಒಪ್ಪಬಹುದು; ಮತ್ತೆ ಕೆಲವರು ಟೀಕೆಮಾಡಬಹುದು. ಹಣ ಜಾಸ್ತಿಯಿರುವವರು ಇನ್ಕ್ರೀಸ್ ಆಗಬೇಕೆಂದೂ, ಹಣವಿಲ್ಲದಿರುವವರು ಇನ್ನೊಂದು ತರಹದಲ್ಲೂ ಹೇಳುತ್ತಾರೆ. ಆದ್ದರಿಂದ ಒಂದು ತತ್ವ, ಧರ್ಮ, ಆದರ್ಶ ಇಟ್ಟುಕೊಂಡು ಮುಂದುವರಿಯಬೇಕೆಂದು ಸಹೃದಯದಿಂದ ತಿಳಿಸುತ್ತಿದ್ದೇನೆ. ಒಬ್ಬರ ಹೊಟ್ಟೆಯ ಮೇಲೆ ಹೊಡೆಯಬೇಕೆಂಬ ದೃಷ್ಟಿಯಿಂದ ಯಾವ ಕೆಲಸವನ್ನೂ ಮಾಡಬಾರದು. ಎಲ್ಲರೂ ಸಮಯಮಯವಾಗಿ ಜೀವನ ಮಾಡಲು ಅನಾನುಕೂಲತೆ ಕಲ್ಪಿಸಿಕೊಡುವುದಕ್ಕೆ ಎಷ್ಟು ಬೇಕೋ ಅಷ್ಟನ್ನು ಉತ್ಪತ್ತಿಮಾಡಿಕೊಳ್ಳಲು ವಿಶಿಷ್ಟಕಾರ್ಯಕ್ರಮಗಳನ್ನು ಕೈಕೊಳ್ಳಬೇಕು. ಈ ಬಡ್ಜೆಟ್ ನೋಡಿದರೆ, ನೀವು ಕೊಡುವ ಪರ್ಸನಲ್ ಕಾಂಟ್ರಿಬ್ಯೂಷನ್ ಮತ್ತು ಸಿಬ್ಬಂದಿಗಾಗುವ ಖರ್ಚು ಎಷ್ಟು ಎಂಬುದನ್ನು ಪರಿಶೀಲಿಸಿದರೆ, ಈ ಬಾಬಿಗಾಗುವ ಖರ್ಚಿಗೆ ಇನ್ನು ಹತ್ತು ವರ್ಷಗಳಲ್ಲಿ ನಮ್ಮ ವರಮಾನವೆಲ್ಲಾ ಹೋಗುವ ಭಯವಿದೆ. ಈ ಎರಡು ಐಟಂಗಳ ಖರ್ಚೇ ಇಪ್ಪತ್ತಾದರೆ ಹೇಗೆ? ವರಮಾನ ಸಾಕೆಂಬುದನ್ನು ಪರಿಶೀಲಿಸಬೇಕು. ಇದಕ್ಕಾಗಿ ಜೋಕೆ, ಎಚ್ಚರಿಕೆ ಎಂದು ಹೇಳಬೇಕಾಗಿದೆ. ಪರ್ಸನಲ್ ಜಾಸ್ತಿಯಾಗುತ್ತಾ ಆಗುತ್ತಾ, ಹೀಗೆ ಸಿಬ್ಬಂದಿ ಖರ್ಚಿಗೆ ಇನ್ನು ಹತ್ತು ವರ್ಷಗಳಲ್ಲಿ ಖಂಡಿತ ಹೆಚ್ಚು ಮೊಬಲಗು ಬೇಕಾಗುತ್ತದೆ. ಇನ್ನೊಂದು ದೃಷ್ಟಿಯಿಂದ ನೋಡಿದರೆ, ಸಿಬ್ಬಂದಿ ಖರ್ಚು ಜಾಸ್ತಿಯಾಗಿ, ಉತ್ಪತ್ತಿ ಕಡಮೆಯಾಗಿರುವುದು ತೃಪ್ತಿಕರವಾಗಿಲ್ಲ. 12 ತಿಂಗಳಲ್ಲಿ 5-10 ವರ್ಷಗಳ ದೃಷ್ಟಿಯನ್ನಿಟ್ಟು ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕು. ಎಷ್ಟು ಸಾಧ್ಯವೋ ಅಷ್ಟನ್ನು ಮಾಡಿದ್ದೀರಿ. ಹಿಂದೆ ಬಂದ ಕಷ್ಟ ಪರಿಹಾರ ಮಾಡುವುದಕ್ಕೆ ತಮಗೆ ಎದೆಯಿದೆ. ಅದಷ್ಟು ಮುಂದೆ ಹೋಗುತ್ತೀರಿ ಎಂಬ ನಂಬಿಕೆಯಿದೆ. ಈಗ ಮಾಡಿರುವುದು ಸಾಲದು, ಬಹಳ ಆಧದ್ರವಾಗಿ ಕಾಣುತ್ತದೆ. ಆದ್ದರಿಂದ ನೀವು ಮುಖ್ಯವಾಗಿ ರೂಢಮೂಲವಾದ ಕೆಲಸಗಳಿಗೆ ಕೈಹಾಕಿ ಬದಲಾವಣೆಮಾಡಿ, ಕ್ರಾಂತಿಕಾರಕವಾದ ಬದಲಾವಣೆಮಾಡಿ ಎಲ್ಲಾ ದೃಷ್ಟಿಯಿಂದ ಜನ ಜೀವನದ ಕೆಲಸ ಕಾರ್ಯಗಳನ್ನು ಬದಲಾಯಿಸಬೇಕು. ಹಾಗೆ ಮಾಡುವುದಾದರೆ ನಿಮ್ಮ ಕೀರ್ತಿಯನ್ನು ಮುಂದಿನ ಪೀಳಿಗೆ ಕೊಂಡಾಡುತ್ತದೆ. ಜವಾಬ್ದಾರಿ ಸರ್ಕಾರ ಬಂದಮೇಲೆಯೇ ಈ ರೀತಿ ಅನೇಕ ಸಮಸ್ಯೆಗಳು ಉದ್ಭವಿಸಿವೆ. ಹಿಂದಿನ ಮಂತ್ರಿಗಳ ಕಾಲಕ್ಕೂ ಈಗಿನ ಕಾಲಕ್ಕೂ ವ್ಯತ್ಯಾಸವಾಗಿದೆ.

ಅವರು ತಾತ್ಕಾಲಿಕವಾದ ಸರ್ಕಾರ ಏರ್ಪಾಡು ಮಾಡಿದರು. 4½ ವರ್ಷ ನಡೆಯಿತು. ಈಗ ಶ್ರೀ ಹನುಮಂತಯ್ಯನವರು ತಾತ್ಕಾಲಿಕ ಸರ್ಕಾರ ವರ್ತಿಸಿರುವಂತೆ ವರ್ತಿಸುವುದಕ್ಕಾಗುವುದಿಲ್ಲ. ಶಾಶ್ವತವಾಗಿ ನಡೆದುಕೊಂಡು ಬರುವ ಶಾಶ್ವತವಾದ ಕಾರ್ಯಕ್ರಮ ಹಾಕಬೇಕಾಗುತ್ತದೆ. ಹಾಗೆ ಮಾಡುವಾಗ ಕೆಲವರ ಮನಸ್ಸು ನೋಯಬಹುದು, ಕೆಲವರಿಗೆ ಅನಮಾಧಾನವುಂಟಾಗಬಹುದು, ಪ್ರಗತಿ ಪೂರ್ವಕವಾದ ರೀತಿಯಲ್ಲಿ ಮುಂದುವರಿಯುವಾಗ ಏನೇ ಅಡ್ಡಿ ಆತಂಕ ಬರಲಿ ಎಲ್ಲವನ್ನೂ ತೊಡೆದು ಹಾಕಿ ಮುಂದಿನ ಜನಾಂಗಕ್ಕೆ ಭವ್ಯವಾದ ಸುಭದ್ರವಾದ ಏರ್ಪಾಡು ಆಗುವಂತಹ ಕೆಲಸವನ್ನು ಮಾಡಬೇಕು. ಒಂದು ಮಾತನ್ನು ಶ್ರೀ ಆರ್

(ಶ್ರೀ ಕೆ. ಪುಟ್ಟಾಭಿರಾಮ್ಮರವರು)

ನಿದ್ದ ವೀರಪ್ಪನವರಿಗೆ ಹೇಳುತ್ತೇನೆ. ಈಗ ತಾನೆ ಅವರು ದೆಹಲಿಯಿಂದ ಹಿಂತಿರುಗಿದ್ದಾರೆ. ಹಾವಾಡಿಗರು ಬುಟ್ಟಿಯಿ ದ ಮಾವಿನಹಣ್ಣನ್ನು ಹೊರ ಹಾಕುವವರೆಗೂ ತಿಳಿಯುವುದಿಲ್ಲ. ಆ ರೀತಿ ಇವರು ಮಾವಿನ ಕಾಯಿ ತಂದಿದ್ದಾರೋ, ಹಣ್ಣು ತಂದಿದ್ದಾರೋ ಗೊತ್ತಿಲ್ಲ. ಒಂದು ಮಾತ್ರ ಹೇಳುತ್ತೇನೆ. ಡೀಕಂಟ್ರೋಲ್ ಎನ್ನುವುದನ್ನು ಎರಡು ದೃಷ್ಟಿಯಿಂದ ಅರ್ಥ ಮಾಡಿಕೊಳ್ಳಬೇಕು. ಹತೋಟಿ ತೆಗೆಯುವುದು ಒಂದು; ಇನ್ನೊಂದು ಏಕತ್ಯಾಳು. 3½ ಕೋಟಿ ಸರಿ ಬರುತ್ತದೆಯೇ ಎಂಬ ಭಯ ಇದೆ. ಇದು ಫೈನಾನ್ಸ್ ಅಂಡ್ ರೀಅಪ್ರೊಪ್ರಿಯೇಷನ್ (Finance and Reappropriation Committee) ಸಮಿತಿಯ ಮುಂದೆ ಬಂದಾಗ ವಾಸ್ತವಾಂಶ ಏನಾಗುತ್ತದೆಯೊ ಹೇಳಲಾರೆ. ಅದನ್ನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಡೀ ಕಂಟ್ರೋಲ್ ಎನ್ನುವುದು ಜನಗಳನ್ನು ತೃಪ್ತಿಪಡಿಸುವುದು ಅಷ್ಟೇ ಅಲ್ಲ, ಖರ್ಚು ಖೋತಾ ಮಾಡಿದ ಹಾಗೂ ಆಗುತ್ತದೆ. ಆದರಿಂದ ವಿಮರ್ಶೆಯ ಕೊನೆಯಲ್ಲಿ ಇಷ್ಟು ಹೇಳುತ್ತೇನೆ. ಈ ಎರಡೂ ದೃಷ್ಟಿಯಿಂದಲೂ ವಾಸ್ತವಾಂಶ ಕಂಡು ಹಿಡಿದು, 5-10 ವರ್ಷಗಳೊಳಗೆ ಭವ್ಯವಾದ ಏರ್ಪಾಡುಗಳನ್ನು ಮಾಡುವ ದೃಷ್ಟಿಯನ್ನಿಟ್ಟುಕೊಂಡಲ್ಲಿ ತಮ್ಮನ್ನು ಬಹು ಮಟ್ಟಿಗೆ ಮೆಚ್ಚುತ್ತೇನೆ ಮತ್ತು ಶ್ರೀಮಾನ್ ಹನುಮಂತಯ್ಯನವರಿಗೆ ಪೂರ್ಣ ಸಹಾನುಭೂತಿಯನ್ನು ತೋರಿಸುತ್ತೇನೆ. ಆದ್ದರಿಂದ ರಚನಾತ್ಮಕ ದೃಷ್ಟಿಯಿಂದ ಶಾಶ್ವತವಾದ ಕೆಲಸ ಮಾಡಲಿಕ್ಕೆ ಅವಕಾಶ ಕಲ್ಪಿಸಿಕೊಂಡು ದೇಶದಲ್ಲಿ ಕೀರ್ತಿ ಸಂಪಾದಿಸಿ. ಯಾವ ಒಂದು ಬಾವುಟವನ್ನು ಇಳಿಸಿ ನಿಷ್ಠೆಯನ್ನು ತೋರಿಸಿದರೋ ಅದೇ ನಿಷ್ಠೆಯಿಂದ ಶ್ರಮಿಸಿ ನಿಮ್ಮ ಕೀರ್ತಿಧ್ವಜವನ್ನು ಎತ್ತಿರಿ. ಅದು ಬೆಳಗಲಿ. ಆದ್ದರಿಂದ; ನಾನು ಮೊದಲೇ ಹೇಳಿದ ಹಾಗೆ, ನಾಡಿ ಪರೀಕ್ಷೆಯಲ್ಲಿ ಅಭದ್ರತೆ ಕಂಡು ಬಂದರೆ ಅದನ್ನು ತಡೆಗಟ್ಟುವುದಕ್ಕೆ ಸೂಕ್ತ ಚಿಕಿತ್ಸೆ ಮಾಡುವಂತೆ ಈಗಿನ ದೇಶದ ಪರಿಸ್ಥಿತಿಯಲ್ಲಿ ಅಭದ್ರತೆ ಕಂಡು ಬಂದಾಗ್ಲೂ ಒಂದು ಭರವಸೆ ತಮಗೆ ಬರಲಿ ಎಂಬ ದೃಷ್ಟಿಯಿಂದ ಇದನ್ನೆಲ್ಲಾ ಹೇಳಿ, ನಾಲ್ಕು ಮಾತುಗಳಿಂದ ಸ್ವಾಗತಿಸುತ್ತೇನೆ. ವಿಶಾಲ ದೃಷ್ಟಿಯಿಂದ ದೇಶದ, ನಾಡಿನ ಅಭಿವೃದ್ಧಿಗೆ ದುಡಿಯುವುದಕ್ಕೇ ನಾವೆಲ್ಲರೂ ಸೇರಿರುವುದು. ನಮ್ಮಲ್ಲಿ ಭೇಧ ಭಾವ ಇಲ್ಲ. ಜನ ಸಾಮಾನ್ಯರಿಗೆ ತೃಪ್ತಿಯಿಂಟಾಗುವಂಥ ಕೆಲಸ ಕಾರ್ಯಗಳನ್ನು ನೆರವೇರಿಸುವುದಕ್ಕೆ ಅಧಿಕಾರ ಮಾತ್ರ ಸಹಾಯವಾಗುತ್ತದೆ ಎಂದು ನನಗೆನ್ನಿಸುತ್ತದೆ. ಆದ್ದರಿಂದ ಎಲ್ಲಾ ದೃಷ್ಟಿಯಿಂದಲೂ ಯೋಚನೆ ಮಾಡಿ ಈಗಿನ ಪರಿಸ್ಥಿತಿಯನ್ನು ಬದಲಾವಣೆ ಮಾಡತಕ್ಕ ರೀತಿಯಲ್ಲಿ ವಾತಾವರಣವನ್ನು ಏರ್ಪಡಿಸಿಕೊಳ್ಳಿ. ಈ ಬಜೆಟ್ಟನ್ನು ಸ್ವಾಗತಿಸುತ್ತೇನೆ ಮತ್ತು ನಿಮ್ಮ ಕಷ್ಟಗಳಿಗಾಗಿ ಪಶ್ಚಾತ್ತಾಪ ಪಡುತ್ತೇನೆ. ಏನೇ ಆಗಲಿ ಶಾಶ್ವತವಾದ ಕೆಲಸ ಕಾರ್ಯಗಳನ್ನು ಮಾಡಿ ಕೀರ್ತಿ ಸಂಪಾದಿಸಿ ಎಂದು ಹೇಳುವುದಲ್ಲದೆ ಸಭಾಪತಿಗಳು ಈ ಸಂದರ್ಭದಲ್ಲಿ ನನ್ನ ವಿಷಯದಲ್ಲಿ ತೋರಿಸಿರುವ ಹೆಚ್ಚಿನ ಔದಾರ್ಯಕ್ಕೆ ನಾನು ಅವರಿಗೆ ಬಹಳ ಋಣಿಯಾಗಿದ್ದೇನೆ.

*ಶ್ರೀ ಎ. ವೀರಪ್ಪನಾಯಕರು (ಬೊಳಕಾಲ್ಮೂರು).— ಸ್ಪೀಕರ್ ಸ್ವಾಮಿ, ಈಗ ತಾನೆ ನನಗಿಂತ ಮುಂಚೆ ಮಾತನಾಡಿದಂಥ ಶ್ರೀಮಾನ್ ಪುಟ್ಟಾಭಿರಾಮ್ಮರವರ ಭಾಷಣ ಕೇಳಿದ ಮೇಲೆ ನಿಜವಾಗಿಯೂ ಎದುರು ಪಕ್ಷದವರು ಎಷ್ಟು ನ್ಯಾಯವನ್ನು ಅರಿಯುವುದಕ್ಕೆ ಪ್ರಯತ್ನ ಮಾಡುತ್ತಾರೆ, ಕೆಲವರು ಎಷ್ಟು ಮಟ್ಟಿಗೆ ವಿಷಯಗಳನ್ನು ಅವುಗಳು ಹೇಗೆ ಇವೆಯೋ ಹಾಗೆಯೇ ತೆಗೆದು ಕೊಳ್ಳುತ್ತಾರೆ, ಎನ್ನುವುದರಲ್ಲಿ ನನಗಂತೂ ಬಹಳ ಪರಿಣಾಮವನ್ನುಂಟುಮಾಡಿತು. ಅವರು ಈಗ ಆಯವ್ಯಯ ತಖ್ತೆಯನ್ನು ಪರಿಶೀಲನೆ ಮಾಡುತ್ತಾ, ಮುಂದೆ ಆಗತಕ್ಕ ಅನೇಕ ಖರ್ಚುಗಳ ವಿಚಾರದಲ್ಲಿ ಸಲಹೆ ಕೊಟ್ಟರಾದರೂ ಕೂಡ ಬಜೆಟ್‌ನಲ್ಲಿ ಈಗಿರತಕ್ಕಂಥಾ ಅಭಿವೃದ್ಧಿ ಕಾರ್ಯಗಳ, ಅಭಿವೃದ್ಧಿಯೋಜನೆಗಳ ವಿಚಾರದಲ್ಲಿ ಅಭಿನಂದನೆಯನ್ನು ವ್ಯಕ್ತಪಡಿಸಿದ್ದು ನಿಜವಾಗಿಯೂ ಅವರ ಸರ್ವೋದಯ ತತ್ವಕ್ಕೆ ಬಹಳ ಬೆಳಕನ್ನೂ ಕಳೆಯನ್ನೂ ಕೊಡುತ್ತದೆಂದು ನನಗೆನ್ನಿಸುತ್ತದೆ. ಹೇಗೆಯೇ ನಮ್ಮ ಮಿತ್ರರಾದ ಎದುರು ಪಾರ್ಟಿಯ ಮುಖಂಡರಾದ ಜನಾಬ್ ಇಮಾಂರವರೂ ಕೂಡ ಬಜೆಟ್‌ನ್ನು ವಿಮರ್ಶೆಮಾಡುವಾಗ ದೇಶಾಭ್ಯುದಯವನ್ನು ಜನತೆಯ ಮುಂದಿಟ್ಟಿದ್ದರೆ ಚೆನ್ನಾಗಿತ್ತು. ಅದೇಕೆ ದೇವರು ಮನಸ್ಸು ಕೊಡಲಿಲ್ಲವೋ ಎಂದು ನನಗೆ ವ್ಯಸನವಾಗುತ್ತದೆ. ಅವರು ಈ ಆಯವ್ಯಯ ತಖ್ತೆಯನ್ನು ವಿಮರ್ಶಿಸುತ್ತಾ—ಈ ತಖ್ತೆಯಿಂದ ನಿದರ್ಶನ ಕೊಟ್ಟು ತೋರಿಸುತ್ತೇನೆ—ಅಡಳಿತಗಾರರ ಮೇರೆ ಒಂದು ಕಲ್ಲು ಎಸೆಯುವುದಕ್ಕೆ ಪ್ರಯತ್ನಪಟ್ಟರೇ ಹೊರತು, ದಾರಿಯಲ್ಲಿ ಕಲ್ಲು ಮುಳ್ಳು ಇದ್ದರೆ ಅದನ್ನು ತೆಗೆಯುವುದಕ್ಕೆ ಪ್ರಯತ್ನ ಮಾಡಲಿಲ್ಲ. ನಾಳೆ ದಿನ ಯಾವುದಾದರೂ ಹೇಳುವುದಕ್ಕೆ ಜವಾಬು ಇದ್ದರೆ ಹೇಳಿ. ಶ್ರೀಮಾನ್ ಶಂಕರಲಿಂಗೇಗೌಡರು ಕೂಡ ನಿನ್ನೆ ದಿನ ಭಾಷಣ ಮಾಡಿದರು. ಭಾಷಣ ಮಾಡುವಾಗ ಅವರು ಯಾವುದಕ್ಕೆ ಅಭಿನಂದನೆಯನ್ನು ಅರ್ಪಿಸಬೇಕೋ ಅದಕ್ಕೆ ಅಭಿನಂದನೆಯನ್ನು ಅರ್ಪಿಸಿದರು; ಜೊತೆಗೆ ಎಲ್ಲೆಲ್ಲಿ ಟೀಕೆ ಮಾಡಬೇಕಾಗಿತ್ತೋ ಅಲ್ಲಿ ಟೀಕೆ ಮಾಡಿದರು. ಕೆಲವು ಸಂದರ್ಭಗಳಲ್ಲಿ ಟೀಕೆಗಳನ್ನು ಸ್ವಾಗತಿಸೋಣ. ಆದರೆ ನಿಜವನ್ನು ಮರೆಮಾಚುವುದಕ್ಕೆ ಮಾತ್ರ ಪ್ರಯತ್ನ ಮಾಡಬಾರದು. ಜನಾಬ್ ಇಮಾಂರವರಿಗೆ ಮೊದಲು ಅಂಕಿ ಅಂಶಗಳಿಂದ ಜವಾಬು ಕೊಟ್ಟು ಆ ಮೇರೆ ಆಯವ್ಯಯ ತಖ್ತೆಯನ್ನು ತೆಗೆದುಕೊಳ್ಳೋಣ ಎಂದು ನನಗೆನ್ನಿಸುತ್ತದೆ. ಆ ದೃಷ್ಟಿಯಿಂದ ಒಂದೆರಡು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಸುಮಾರು ಒಂದು ಕೋಟಿ ರೂಪಾಯಿ ಈ ದಿವಸ ಖೋತಾ ಇದೆ ಎಂದು ಮುಖ್ಯಮಂತ್ರಿಗಳು ಅವರ ಭಾಷಣದಲ್ಲಿ ಹೇಳಿದ ಮಾತಿಗೆ, ಒಂದು ಕೋಟಿ ರೂಪಾಯಿ ಖೋತಾ ಅಲ್ಲ ಐದು ಕೋಟಿ ರೂಪಾಯಿ ಖೋತಾ ಆಗಿದೆ, ಅದನ್ನು ತೋರಿಸಿಕೊಡುತ್ತೇನೆ, ಎಂದು ಅವರು ತಮ್ಮ ಭಾಷಣವನ್ನು ಪ್ರಾರಂಭ ಮಾಡಿದರು. ಅದನ್ನು ಕೇಳಿದರೆ, ಅವರು ಜನತೆಯ ಮೇಲೆ ಒಂದು ಪರಿಣಾಮವನ್ನುಂಟುಮಾಡಬೇಕು, ಸರ್ಕಾರದ ಮೇರೆ ವ್ಯಥಾ ಅಪಾದನೆ ಮಾಡಬೇಕು ಎಂದು ಭಾವಿಸಿ ಆ ರೀತಿ ಮಾಡುವುದಕ್ಕೆ ಪ್ರಯತ್ನಪಟ್ಟರು ಎಂದು ನನಗೆನ್ನಿಸುತ್ತದೆ. ಯಾರಾದರೂ 5 ಕೋಟಿ ರೂಪಾಯಿ ಖೋತಾ ಇದ್ದರೆ ಒಂದು ಕೋಟಿ ರೂಪಾಯಿಗೆ ಇಳಿಸಿ ತೋರಿಸುತ್ತಾರೆಯೇ? ತೋರಿಸುವುದಕ್ಕೆ ಸಾಧ್ಯವೇ? ಒಂದು ವಿಷಯ ಗ್ರಹಣವಾಗದೇ ಸಂಧಾರಣವಾಗಿ ಹೇಳಿದ್ದರೆ, ತೋರಿಸಿಕೊಟ್ಟಾಗ ತಪ್ಪು ಒಪ್ಪಿಕೊಳ್ಳಬೇಕು. ಹಾಗೆ ಇಲ್ಲದೆ ತಿಳಿದೂ ತಿಳಿದೂ ಆ ಮಾತನ್ನು ಹೇಳಿದರೆ, ನಿಜವಾಗಿಯೂ ವಿಷಾದ ಪಡಬೇಕಾದದ್ದೇ.

*Speeches indicated by asterisk have not been revised by the Member concerned.

ಆ ದೃಷ್ಟಿಯಿಂದ ಹೇಳುತ್ತೇನೆ. ಒಂದು ಕೋಟಿ ರೂಪಾಯಿ ಖೋತಾ ಇರುವುದನ್ನು ಮುಖ್ಯ ಮಂತ್ರಿಗಳು ಒಪ್ಪಿಕೊಂಡು ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ ಎಲ್ಲ ಪ್ರಯತ್ನವನ್ನೂ ಮಾಡಿ ಆ ಖೋತಾ ಕೂಡ ಇಲ್ಲದಂತೆ ಮಾಡುವುದಕ್ಕೆ ಈ ವರ್ಷದ ಕೊನೆಯಲ್ಲಿ ಪ್ರಯತ್ನ ಮಾಡುತ್ತೇನೆ ಎಂದು ಧೈರ್ಯವಾಗಿ ಹೇಳಿದ್ದಾರೆ. ಅದು ಧೈರ್ಯದ್ದಾರು ಮಾತ್ರ ಹೇಳತಕ್ಕ ಮಾತು ಎಂಬುದನ್ನು ತಿಳಿದುಕೊಳ್ಳಬೇಕಾಗಿತ್ತು; ಈಗಿನಂದನೆ ಕೊಡಬೇಕಾಗಿತ್ತು. ಹಾಗೆ ಮಾಡದೆ '49 ಲಕ್ಷ ರೂಪಾಯಿಗಳನ್ನು ಷುಗರ್‌ಕೇನ್ ಸೆಸ್ ಫಂಡಿನಿಂದ ತೆಗೆದುಕೊಂಡಿದ್ದೀರಿ, ಆ ರೀತಿ ತೆಗೆದುಕೊಂಡದ್ದನ್ನು ಅದಕ್ಕೆ ಉಪಯೋಗಿಸಿಲ್ಲ' ಎಂದು ಹೇಳಿದರು. ಷುಗರ್ ಕೇನ್ ಸೆಸ್ ಫಂಡ್‌ನ್ನು ಫಾರಂ ಮಾಡಿದವರು ಅವರು. ಆಗ್ಗೆ ನರ್ಕಾರಿ ಆರ್ಡರ್ ಮಾಡುವಾಗ ರಸ್ತೆ ಸೌಕರ್ಯ ಒದಗಿಸುವುದಕ್ಕೆ.....

ಜನಾಬ್ ಜೆ. ಮಹಮದ್ ಇಮಾಂರವರು.—ಯಾರ ಕಾಲದಲ್ಲಿ ಆ ಷುಗರ್‌ಕೇನ್ ಸೆಸ್ ಫಂಡ್ ಆದದ್ದು?

ಶ್ರೀ ಎ. ಭೀಮಪ್ಪನಾಯಕರು.—1948 ರಲ್ಲಿ ಎಂದು ನಮ್ಮ ಮಿತ್ರರು ಹೇಳುತ್ತಾ ಇದ್ದಾರೆ. ಆಗ್ಗೆ ರಸ್ತೆಗಳ ಸೌಕರ್ಯಕ್ಕೆ, ಕಾಲುವೆ ವಗೈರೆಗಳನ್ನು ಸರಿಪಡಿಸುವುದಕ್ಕೆ ಆ ಫಂಡ್‌ನ್ನು ಉಪಯೋಗಿಸಿಕೊಳ್ಳಬೇಕೆಂದು ಮಾಡಿದ್ದರು. ಈ ದಿವಸ ಷುಗರ್‌ಕೇನ್ ಸೆಸ್ ಫಂಡಿನಿಂದ 15·73 ಲಕ್ಷ ತೆಗೆದುಕೊಂಡಿದ್ದರೂ ಅದನ್ನು ಅಲ್ಲಿಗೇ ಪುನಃ ಹಾಕಿದ್ದಾರೆ ಎಂಬುದನ್ನು ನಮ್ಮ ಮಿತ್ರರು ನೋಡಬೇಕಾಗಿತ್ತು. 132ನೇ ಪೇಜನ್ನು ನೋಡುವುದಾದರೆ, ವಿಶ್ವೇಶ್ವರಯ್ಯ ಕೆನಾಲ್ ರೋಡ್ಸ್‌ಗೆ 12,00,000 ರೂಪಾಯಿಗಳನ್ನು ಉಪಯೋಗಿಸರಾಗಿದೆ. ಹಾಗೆಯೇ 133ನೇ ಪೇಜನ್ನು ನೋಡಿದರೆ ವಿಶ್ವೇಶ್ವರಯ್ಯ ಕೆನಾರ್ ಟ್ರ್ಯಾಕ್ಟ್‌ಗೆ ವಿಶೇರಿಗಾಗಿ 85 ಸಾವಿರ ರೂಪಾಯಿಗಳನ್ನು ಉಪಯೋಗಿಸರಾಗಿದೆ. ಮತ್ತು 104ನೇ ಪೇಜ್‌ನಲ್ಲಿ ತೋರಿಸಿರುವಂತೆ, 2 ಲಕ್ಷ ರೂಪಾಯಿಗಳನ್ನು ಪಬ್ಲಿಕ್ ವರ್ಕ್ಸ್‌ಮೆಷರ್ಸ್‌ಗೆ ಉಪಯೋಗಿಸರಾಗಿದೆ. ಎಂದರೆ 15·73 ಲಕ್ಷ ರೂಪಾಯಿಗಳನ್ನು ಅದೇ ಫಂಡ್‌ನಿಂದ ಡ್ರಾಮಾಡಿ ಅಲ್ಲಿಯ ಕೆಲಸಗಳಿಗಾಗಿಯೇ ಒದಗಿಸರಾಗಿದೆ. ಆದ್ದರಿಂದ ಯಾವ ಉದ್ದೇಶಕ್ಕಾಗಿ ಫಂಡ್ ಮಾಡರಾಯಿತೋ ಆ ಉದ್ದೇಶಕ್ಕಾಗಿಯೇ ಆ ಫಂಡ್‌ನಿಂದ ಹಣ ತೆಗೆದುಕೊಂಡು ಉಪಯೋಗಿಸುವುದರಲ್ಲಿ ತಪ್ಪೇನಿದೆ ಎಂಬುದನ್ನು ವಿನಯದಿಂದ ಕೇಳಿಕೊಳ್ಳುತ್ತೇವೆ.

ಅವರು ಸಿರ್ಕ್ ಫಂಡಿನಿಂದ ತೆಗೆದುಕೊಂಡಿರುವುದೂ ಹಾಗೆಯೇ. 2,81,000 ರೂಪಾಯಿಗಳನ್ನು ಅಲ್ಲಿಂದ ತೆಗೆಯರಾಗಿದೆ. ಅದೂ ಅದನ್ನು inporve ಮಾಡುವುದಕ್ಕಾಗಿಯೇ. ಫೈನಾನ್ಷಿಯರ್ ಮೆಮೊರಾಂಡಮ್ಮಿನ 41ನೆಯ ಪುಟದಲ್ಲಿ ನೋಡುವುದಾದರೆ, ಅಲ್ಲಿ sericulture development ಗೆ ಉಪಯೋಗಿಸರಾಗಿದೆಯೆಂದು ತಿಳಿಸಿದೆ. ಇದೂ ಪಾಲಿಸಿ ಕಮಿಟಿಯವರು ಮತ್ತು ಪ್ಲಾನಿಂಗ್ ಕಮಿಷನ್ನಿನವರು ಕೊಟ್ಟಂಥ ಒಂದು ಸಲಹೆಯ ಮೇರೆಗೆ ಉಪಯೋಗಿಸರಾಗಿದೆಯೇ ಹೊರತು ಬೇರೆ ಯಾವುದಕ್ಕೂ ಉಪಯೋಗಿಸಿಲ್ಲ. ಈಗಿರುವಾಗ ಇದನ್ನು ಫಂಡಿನಿಂದ ತೆಗೆಯತಕ್ಕುದಲ್ಲ, ಅದನ್ನು ಖೋತಾಕ್ಕೆ ಸೇರಿಸಬೇಕೆಂದು ಹೇಳುವುದರಲ್ಲಿ ಅರ್ಥವಿಲ್ಲ.

ಆ ಮೇಲೆ ದುರ್ಭಿಕ್ಷ ಪ್ರದೇಶಕ್ಕೆ ಸಹಾಯ ಮಾಡಿರುವ ವಿಷಯವನ್ನೂ ಕೂಡ ನಾನು ಅವರನ್ನು ಪ್ರಶ್ನೆ ಮಾಡಿದ ಮೇಲೆ ಮಾತ್ರ ಒಪ್ಪಿಕೊಂಡರು. ಅಭಾವ ಪ್ರದೇಶಕ್ಕೆ ಸಹಾಯವನ್ನೊದಗಿಸುವುದಕ್ಕಾಗಿ 18 ಲಕ್ಷ ರೂಪಾಯಿಗಳನ್ನು ಉಪಯೋಗಿಸುವುದಕ್ಕೆ ನಮ್ಮ ಸರ್ಕಾರದವರು ತಯಾರಾಗಿದ್ದಾರೆ; ಅಲ್ಲದೆ ಇನ್ನೂ ಎಷ್ಟು ಬೇಕಾದರೂ ಖರ್ಚುಮಾಡುವುದಕ್ಕೆ ಸಿದ್ಧರಾಗಿದ್ದೇವೆಂದು ಹೇಳಿದ್ದಾರೆ. ಬಾವಿಗಳನ್ನು ತೋಡಿಸುತ್ತಿದ್ದಾರೆ; ಹುಲ್ಲು ಮೇವುಗಳನ್ನು ಒದಗಿಸುತ್ತಿದ್ದಾರೆ; ಇನ್ನೂ ಅನೇಕ ಕಾರ್ಯಕ್ರಮಗಳನ್ನು ನಡೆಸುತ್ತಿದ್ದಾರೆ. ಅಂಥಾದ್ದರಲ್ಲಿ ಜನಾಬ್ ಇಮಾಮ್‌ರವರು ಬಾಯಿ ತುಂಬ ಹೊಗಳಿ ಎರಡು ಒಳ್ಳೆಯ ಮಾತುಗಳನ್ನಾಡಿ ಇಂಥ ಕಷ್ಟಕಾಲದಲ್ಲಿ ಹಣವನ್ನು ಫಂಡಿನಿಂದ ತೆಗೆಯುವುದು ನೂಕ್ತವೆಂದು ಹೇಳುವುದಕ್ಕೆ ಬದಲು, ಅದನ್ನೂ ಖೋತಾಕ್ಕೆ ಸೇರಿಸಿ, 49 ಲಕ್ಷ ರೂಪಾಯಿಗಳ ಖೋತಾ ಇದರಿಂದ ಬೇರೆ ಆಗಿದೆಯೆಂದು ಹೇಳಿದ್ದು ಖಂಡಿತ ಸರಿಯಾಗಿ ವಿಷಾದಕರ.

ಟ್ರೆಜರಿ ಬಿಲ್ಲುಗಳ ವಿಚಾರ ಹೇಳಿದರು. No. Treasury Bills are floated here. Treasury Bills ನ್ನು float ಮಾಡಬೇಕಾಗಿಯೂ ಇಲ್ಲ, ಹಾಗೆ float ಮಾಡಿಯೂ ಇಲ್ಲ. ಪಬ್ಲಿಕ್‌ರೋಕ್‌ನ್ನು ತೆಗೆಯುವುದಕ್ಕೆ propose ಮಾಡಿದ್ದೇವೆ. ಹೀಗೆ 100 ಲಕ್ಷ ರೂಪಾಯಿಗಳನ್ನು ಪಬ್ಲಿಕ್ ಡೆಟ್ ಎಂದು ತೆಗೆಯುವುದು ಮತ್ತು ಇನ್ನು ಕೆಲವು ಫಂಡುಗಳು, ಜೊತೆಗೆ ಭಾರತ ಸರ್ಕಾರದವರು ಕೊಡತಕ್ಕ ಗ್ಯಾರಂಟುಗಳು ಇವೆಲ್ಲವನ್ನೂ ಲೆಕ್ಕಕ್ಕೆ ತೆಗೆದುಕೊಂಡು, ಒಟ್ಟು 413 ಲಕ್ಷ ರೂಪಾಯಿಗಳನ್ನು ಹೊಂದಿಸಿಕೊಳ್ಳುವ ನಿರೀಕ್ಷೆಯಿದೆಯೆಂದು ಹೇಳಿ, ಅದರ ಆಧಾರದ ಮೇಲೆ 504 ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತೇವೆಂದು ಹೇಳಿದ್ದಕ್ಕೆ, ಈ 413 ಲಕ್ಷ ರೂಪಾಯಿಗಳನ್ನು ಲೆಕ್ಕಹಾಕಿಕೊಂಡು, ರೆವಿನ್ಯೂ ಬಾಬಿನ ಒಂದು ಕೋಟಿ ಖೋತಾ ಜೊತೆಗೆ ಸೇರಿಸಿ, ಒಟ್ಟು 5 ಕೋಟಿ ರೂಪಾಯಿಗಳ ಖೋತಾ ಆಗಿ ಬಿಟ್ಟಿದೆಯೆಂದು ಹೇಳಿಬಿಟ್ಟರು!!!

Janb J. MOHAMED IMAM.—I think, now and then interjections are allowed Treasury Bills are the existing assets.

Sri A. BHEEMAPPA NAIK.—I am also answering that Treasury Bills were never floated in these parts. Treasury Bills are different things. Treasury Bills are those where deposits are made. These deposits are not Treasury Bills in the present sense.

ಈಗ ರಿಸರ್ವ್ ಬ್ಯಾಂಕಿನವರು ಟ್ರೆಜರಿ ಬಿಲ್ಲುಗಳನ್ನು ನಮ್ಮಿಂದ ಹಣ ತೆಗೆದುಕೊಂಡು issue ಮಾಡುತ್ತಾರೆ. 100 ಲಕ್ಷ ರೂಪಾಯಿಗಳಿದ್ದರೆ 100 ಲಕ್ಷ ರೂಪಾಯಿಗಳಿಗೊಂದು ಬಿಲ್ಲನ್ನು issue ಮಾಡಿ ಅವನ್ನು Negotiable ಆಗಿ ಮಾಡುವುದು ನಿಜವಾದ ಟ್ರೆಜರಿ ಬಿಲ್ಲುಗಳು. ಆದರೆ ನಮ್ಮ ಟ್ರೆಜರಿ ಬಿಲ್ಲುಗಳೆಂದರೆ: ನಮ್ಮ ಟ್ರೆಜರಿಗಳಲ್ಲಿ savings deposit ಗಳನ್ನು ಅನೇಕರು ಇಟ್ಟಿರುತ್ತಾರೆ—ಇವು ನಮ್ಮ ಟ್ರೆಜರಿ ಬಿಲ್ಲುಗಳು. ಈಗ ನಾವಿಲ್ಲಿ ತೋರಿಸಿರತಕ್ಕ ಟ್ರೆಜರಿ ಬಿಲ್ಲುಗಳು, ಮುಂದೆ ನಾವು ಸಾಲವನ್ನು float ಮಾಡಿದರೆ ಕೊಡತಕ್ಕ ಬಿಲ್ಲುಗಳು ಅಷ್ಟೆ. ಇವು ರಿಸರ್ವ್‌ಬ್ಯಾಂಕಿನವರು ಕೊಟ್ಟಿರುವ ಅರ್ಥದಲ್ಲಿ ಟ್ರೆಜರಿ ಬಿಲ್ಲುಗಳಲ್ಲ.

ಆ ಮೇಲೆ, ಹೀಗೆ ದುಡ್ಡನ್ನು ಹೊಂದಿಸಿಕೊಂಡು, ಇನ್ನೂ ಕೊಂಡ ಮುಂದೆ ಹೋಗಿ 504 ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತೇವೆಂದರೆ, ಅದಕ್ಕೆ ನೀವು

(SRI A. BHEEMAPPA NAIK)

ಆಕ್ಷೇಪಣೆ ಮಾಡುತ್ತೀರಿ, ಈ ಸೇವಿಂಗ್ಸ್ ಬ್ಯಾಂಕ್ ದುಡ್ಡನ್ನೆಲ್ಲಾ ಉಪಯೋಗಿಸಿಕೊಂಡು ಬಿಟ್ಟರು ಎಂದು. ಮಾನ್ಯ ಮಿತ್ರರು ಒಂದು ವಿಷಯವನ್ನು ತಿಳಿದುಕೊಳ್ಳಬೇಕು. ನಾವು ಸೇವಿಂಗ್ಸ್ ಬ್ಯಾಂಕ್ ಅಕೌಂಟ್‌ಗೆ ಸರಿಯಾಗಿ ಬಡ್ಡಿ ಕೊಟ್ಟುಬಿಟ್ಟ ಮೇಲೆಯೂ ಆ ಹಣವನ್ನು ನಮ್ಮ ಉಪಯೋಗಕ್ಕೆ ತೆಗೆದುಕೊಳ್ಳದೆ ಅಲ್ಲಯೇ ಬೀಗ ಹಾಕಿಬಿಡುವ ನೀತಿ; ಹಿಂದಿನ ಸರ್ಕಾರದವರದು. ಆ ಹಣವನ್ನು ಸರಿಯಾದ ಲಾಭದಾಯಕವಾದ ರೀತಿಯಲ್ಲಿ invest ಮಾಡಬೇಕೆಂಬುದು ನಮ್ಮ ಈಗಿನ ನೀತಿ. ನೀವು ಹೇಳುವ ನೀತಿ, ಸರ್ಕಾರ ದಿವಾಳಿಯೇಳುವ (liquidate ಆಗುವ) ನಂದರ್ಭದಲ್ಲಿ ಅನುಸರಿಸಬೇಕಾದ ನೀತಿ. ಮೈಸೂರು ಸರ್ಕಾರದವರ ವಿಚಾರದಲ್ಲಿ ಅಂಥಾದ್ದೇನೂ ಇಲ್ಲ. ಆದ್ದರಿಂದ 501 ಲಕ್ಷ ರೂಪಾಯಿಗಳ ಖರ್ಚು ಮಾಡುತ್ತೇವೆಂದು ಹೇಳಿದ್ದರೆ, ಅದಕ್ಕೆ ಸರಿಯಾಗಿ ಡೆವಲಪ್‌ಮೆಂಟ್ ಪ್ಲಾನುಗಳೇನೆಂಬುದನ್ನೂ ಹೇಳಿದ್ದಾರೆ. ತಾವು ದಯವಿಟ್ಟು 6-7ನೆಯ ಪುಟಗಳನ್ನು ನೋಡಿದರೆ ತಮಗೇ ಗೊತ್ತಾಗುತ್ತದೆ. ಆದ್ದರಿಂದ ಅವರು (ಜನಾಬ್ ಇಮಾಂರವರು) 5 ಕೋಟಿ ರೂಪಾಯಿಗಳ ಡಿಫಿಸಿಟ್ ಆಗಿದೆಯೆಂದು ಹೇಳಿದ್ದು ಕೇವಲ ಜನರ ಮೇಲೆ ಒಂದು ದುಷ್ಪರಿಣಾಮವನ್ನುಂಟು ಮಾಡುವುದಕ್ಕಾಗಿದೆಯೇ ಹೊರತು ಮತ್ತೇನೂ ಅಲ್ಲ. ಆ ರೀತಿ ಮಾಡುವುದು ಸರಿಯಾದ್ದಲ್ಲ. ಈ ಬಗ್ಗೆ ವಿವರಣೆಯನ್ನು ನನಗೆ ತಿಳಿದ ಮಟ್ಟಿಗೆ ಹೇಳಿದ್ದೇನೆ. ಮುಖ್ಯ ಮಂತ್ರಿಗಳು ಆ ವಿಚಾರದಲ್ಲಿ ನಿರ್ದಿಷ್ಟವಾಗಿ ಎಲ್ಲಾ ಅಂಶಗಳನ್ನು ತಿಳಿಸುತ್ತಾರೆಂದು ನಂಬಿದ್ದೇನೆ.

ಆದಾದ ಮೇಲೆ, ನಮ್ಮ assets ಮತ್ತು liabilities ವಿಚಾರವಾಗಿ ಅವರು ಒಂದು ಮಾತು ಹೇಳಿದರು. ಅಗ್ಗೆ ತಮ್ಮಲ್ಲಿ cash ಎಷ್ಟಿತ್ತು, permanent capital assets ಏನಿತ್ತು, ಎಂಬುದನ್ನು ತೆಗೆದು ನೋಡುವುದಾದರೆ, 1-4-47 ರಲ್ಲಿ 6ಕೋಟಿ ರೂಪಾಯಿಗಳ ನಗದೂ, investment ಗಳ ಮೇಲೆ 27 ಕೋಟಿ ರೂಪಾಯಿಗಳೂ ಇದ್ದುವೆಂದು ಕಂಡುಬರುತ್ತದೆ.

ಶ್ರೀ ಮುಲ್ಕ ಗೋವಿಂದರೆಡ್ಡಿಯವರು.—ಅವರಲ್ಲಲ್ಲ, ಸರ್ಕಾರದಲ್ಲಿ.

ಶ್ರೀ ಎ. ಭೀಮಪ್ಪನಾಯಕರು.—ಹೌದು, ಅಗ್ಗೆ ಸರ್ಕಾರದಲ್ಲಿ.

ಹೀಗೆ ಒಟ್ಟು 33 ಕೋಟಿ ರೂಪಾಯಿಗಳು ಅವರ ಕಾಲದಲ್ಲಿತ್ತು. ಅದರಲ್ಲಿ 26 ಕೋಟಿ ರೂಪಾಯಿಗಳನ್ನು Productive Assetsನಲ್ಲಿ ಹಾಕಿದ್ದರು. ಆದೇ ಈಗಿನ ಪರಿಸ್ಥಿತಿಯೇನೆಂಬುದನ್ನು ನೋಡಿ. ಅವರು ಹೇಳುವುದನ್ನು ನೋಡಿದರೆ ನನಗೊಂದು ಪ್ರಸಂಗ ನೆನಪಿಗೆ ಬರುತ್ತದೆ. ಇಬ್ಬರು ಅಣ್ಣತಮ್ಮಂದಿರು ಹಿಸ್ಸೆಯಾದರು. ಒಬ್ಬನಿಗೆ 1,000 ರೂಪಾಯಿ ನಗದೂ 100 ಎಕರೆ ಜಮೀನೂ ಪಾಲಿಗೆ ಬಂತು. ಹತ್ತುವರ್ಷದ ಮೇಲೆ ನೋಡಿದಲ್ಲಿ ಅವನಲ್ಲಿ 100 ರೂಪಾಯಿ ನಗದೂ 1000 ಎಕರೆ ಜಮೀನು ಇದ್ದವು. ಇದನ್ನು ನೋಡಿ, ಸಾವಿರ ರೂಪಾಯಿಗಳನ್ನೆಲ್ಲಾ ಕಳೆದುಕೊಂಡುಬಿಟ್ಟ, ಈಗ ಬರೀ ನೂರುರೂಪಾಯಿದೆಯೆಂದು ಆಕ್ಷೇಪಿಸಿದಂತಾಯಿತು. ತಾವು ಹೇಳಿದ್ದು ಹಾಗೆಯೇ. ಈಗ ಹಣ ಕಡಮೆಯಾಗಿದ್ದರೂ capital assets ಹೆಚ್ಚಾಗಿದೆ. ತಮ್ಮ ಕಾಲದಲ್ಲಿ ಒಟ್ಟು capital assets 43 ಕೋಟಿ ರೂಪಾಯಿಗಳಿತ್ತು. ಇಂದು ಅದು 67 ಕೋಟಿ ರೂಪಾಯಿಗಳಾಗಿವೆಯೆಂದು ಹೇಳುವಾಗ, ಈ 17 ಕೋಟಿ ರೂಪಾಯಿಗಳನ್ನು ಅದರ ಮೇಲೆ ಹಾಕಿದ್ದೇವೆಂದು ತಿಳಿಯಬೇಕು. ಹೀಗೆ 43 ಕೋಟಿ ರೂಪಾಯಿಗಳ ಜೊತೆಗೆ 17 ಕೋಟಿ ರೂಪಾಯಿಗಳು ಸೇರಿದ್ದಲ್ಲದೆ, ಅದರ ಮೇಲೆ 7 ಕೋಟಿ ರೂಪಾಯಿಗಳೂ ಸೇರಿ, ಇಂದು 67 ಕೋಟಿ ರೂಪಾಯಿಗಳ capital assets ನಮ್ಮಲ್ಲಿವೆ. ಆದ್ದರಿಂದ ತಾವು ಸುಮ್ಮನೆ 17 ಕೋಟಿ ರೂಪಾಯಿಗಳು ಹೊರಟು ಹೋಯಿತು, ನಮ್ಮ ರಿಸರ್ವ್ ನಿಧಿಯೆಲ್ಲಾ ಕರಗಿ ಹೋಯಿತು, ಎಂದು ಹೇಳುವುದರಲ್ಲಿ ಅರ್ಥವಿಲ್ಲ. ನಮ್ಮ investmentನಿಂದ 3% ಆದಾಯ ಬರುತ್ತಿತ್ತು; 27 ಕೋಟಿ ರೂಪಾಯಿಗಳನ್ನು ಹಾಕಿದ್ದಿರಿ. 27 ಕೋಟಿ ರೂಪಾಯಿಗಳಿಂದ ಶೇಕಡ ಮೂರು ರೂಪಾಯಿ ಆದಾಯ ತೆಗೆದುಕೊಳ್ಳುವುದೆಲ್ಲ, 17 ಕೋಟಿ ರೂಪಾಯಿಗಳಿಂದ 300% ಆದಾಯ ಬರುವುದೆಲ್ಲ!! ಅಲ್ಲದೆ ಇಂಥ ವಿಷಯಗಳಲ್ಲಿ ನಾವು ಸರ್ಕಾರಕ್ಕೆ ಬರುವುದನ್ನು ಮಾತ್ರ ಲೆಕ್ಕ ಹಾಕುವುದು ಸರಿಯಲ್ಲ; ಏಕೆಂದರೆ ನಾವು ಕೇವಲ ಲೇವಾದೇವಿ ದೃಷ್ಟಿಯಿಂದ ಕೆಲಸಕಾರ್ಯಗಳನ್ನು ನಡೆಸುತ್ತಿಲ್ಲ. ಸರ್ಕಾರದ ನಿಧಿಗಳು ದೇಶದ ಉದ್ಧಾರಕ್ಕಾಗಿ, ಜನತೆಯ ಏಳಿಗೆಗಾಗಿ, ಒಟ್ಟು ಜನತೆಯ ಆದಾಯವನ್ನು ಹೆಚ್ಚಿಸುವುದಕ್ಕಾಗಿ ವಿನಿಯೋಗವಾಗಬೇಕು. ಆ ದೃಷ್ಟಿಯಿಂದ ನೋಡುವುದಾದರೆ, ಈ 17 ಕೋಟಿ ರೂಪಾಯಿಗಳನ್ನು ಯಾವ ಒಂದು ಕಾರ್ಯಕ್ಕೆ ಹಾಕಿದ್ದೇವೆಯೋ ಆ ಕಾರ್ಯ ಎಷ್ಟರಮಟ್ಟಿಗೆ ಜಯಪ್ರದವಾಗುತ್ತವೆಯೆಂದು ಈ ದಿವಸವೇ ಹೇಳುವುದಕ್ಕಾಗುವುದಿಲ್ಲ. ಮಗು ಇನ್ನೂ 5 ವರ್ಷ ವಯಸ್ಸಿನಲ್ಲಿರುವಾಗ ಏನು ಶಕ್ತಿ ಹೊಂದಿರುತ್ತದೆ? ಮುಂದೆ..... ...

Janab J. MOHAMED IMAM.—Sir, it is my duty to correct my friend. On 1st April 1951, the productive assets are 42 crores and not 60 crores.

ಶ್ರೀ ಎ. ಭೀಮಪ್ಪನಾಯಕರು.—ನಾನು ಹೇಳುತ್ತಿರುವುದು 1951ನೆಯ ಇಸವಿಯದಲ್ಲ. ತಾವು ದಯವಿಟ್ಟು 77ನೆಯ ಪುಟವನ್ನು ತೆಗೆದುನೋಡಿ.

Janab J. MOHAMED IMAM.—What is given here is 42 crores; including all these things, it comes to 67 crores.

4-30 P.M.

ಶ್ರೀ ಎ. ಭೀಮಪ್ಪನಾಯಕರು.—ನಾನು ಹೇಳುತ್ತೇನೆ, ತಾವೂ ತಮ್ಮ ಭಾಷಣದಲ್ಲಿ ಈ ದಿವಸ 67 ಕೋಟಿ ರೂಪಾಯಿಗಳಷ್ಟು productive assets ಇದೆಯೆಂದು ಹೇಳಿದ್ದೀರಿ.

Janab J. MOHAMED IMAM.—I think it is my duty to correct with the permission of the Chair. On 1st April 1952, the productive assets are 42 crores. It is not 62 crores. I said 'entire assets' of the State. I did not say productive assets.

ಶ್ರೀ ಎ. ಭೀಮಪ್ಪನಾಯಕರು.—Entire assets productive assets ಎಂದು ನಾನು ಹೇಳಿದ್ದು. 'ರೈಲ್ವೆಗಳನ್ನು ನೀವು ತೆಗೆದುಹಾಕಿದರೆ ಇನ್ನೂ ಕಡಮೆಯಾಗುತ್ತದೆ, ಏನೂ ಅಸೆಟ್ಸ್ ಇರುವುದಿಲ್ಲ' ಎಂದು ಹೇಳಿದಿರಿ. ರೈಲ್ವೆ ಡಿಪ್ರೀಸಿಯೇಷನ್ 160 ಲಕ್ಷ ರೂಪಾಯಿ ಒಂದುಕಡೆ ಇದೆ. ಇದಕ್ಕೆ ಇನ್ನೂ ಲೆಕ್ಕ ಆಗಿಲ್ಲ. 77ನೆಯ ಪುಟದಲ್ಲಿರುವ ಫುಟ್‌ನೋಟ್ ದಯವಿಟ್ಟು ನೋಡಿ.

Foot-note says :

"The figures for 1951-52 and Budget 1952-53 are not furnished, since adjustment in respect of Federal assets and liabilities have not been effected and the statement has to be compiled under the Revised classification which would be possible in the A. G.'s books in the accounts of 1951-52, onwards."

ಈ ರೆಕ್ಕ ಆಗುವವರೆಗೆ ತಾವು ತಾಳಬೇಕು.

ಶ್ರೀ ಬಿ. ಹುಚ್ಚೇಗೌಡರು.—ಯಾವ ವರ್ಷದ ರೆಕ್ಕ?

Sri A. BHEEMAPPA NAIK.—1-4-1951 based on actuals ಎಂದಿದೆ. That is why I am telling you. There is a foot-note. All these are to be accounted and audited and adjusted a little later.

Sri B. HUTCHE GOWDA.—On a matter of correction Sir... .....

Mr. SPEAKER.—I think Hon'ble Members need not interfere unless the Member makes any incorrect statement.

Sri A. BHEEMAPPA NAIK.—I welcome interjections, not interference or interruptions !! (Laughter).

Central share of Public Debts 470 ಲಕ್ಷ ರೂಪಾಯಿಗಳಿವೆ. ಇವುಗಳು ಯಾವ ಯಾವಾಗ ಮೆಚ್ಯೂರ್ ಆಗುತ್ತದೆಯೋ ಆಗಾಗ ಹಣ ಒರುತ್ತದೆ, adjust ಆಗುತ್ತದೆ. 470 ಲಕ್ಷ ಸೆಂಟ್ರರ್ ಷೇರ್ ಆಫ್ ಡೆಟ್ಸ್ ಬರಬೇಕು. ಇದನ್ನು ನಾವು ರೆಕ್ಕಕ್ಕೆ ತೆಗೆದುಕೊಳ್ಳಬೇಕು. ಇನ್ನು ರೈಲ್ವೆ ಡಿಪ್ರೀಸಿಯೇಷನ್ 160 ಲಕ್ಷ ರೂಪಾಯಿಗಳು. ಇದನ್ನು ಇನ್ನೂ ತೆಗೆದು ಕೊಂಡಿಲ್ಲ.

ಶ್ರೀ ಎಂ. ಶಂಕರಲಿಂಗೇಗೌಡರು.—ಹೋಗಲಿ, ಎಷ್ಟು ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿದ್ದಾರೆ, ಹೇಳಿ. (ನಗು !)

ಶ್ರೀ ಎ. ಭೀಮಪ್ಪನಾಯಕರು.—ಈಗ ಕಡಮೆಯಾಗಿದ್ದರೂ ಕೂಡ, 17 ಕೋಟಿ ರೂಪಾಯಿ productive assetsಗಾಗಿ ಉಪಯೋಗಿಸಲ್ಪಟ್ಟಿದೆಯೆಂದು ನಾನು ಹೇಳಿದ್ದೇನೆ. ಜನಾಬ್ ಇಮಾಂರವರು ಸರ್ಕಾರದಲ್ಲಿರುವಾಗಲೇ ಜೋಗ್ ಹೈಡ್ರೊ ಎಲೆಕ್ಟ್ರಿಕ್ ವರ್ಕ್ಸ್ ಪ್ರಾರಂಭವಾಗಿ, ಹೆಚ್ಚುಕಡಿಮೆ 5 ಕೋಟಿ ರೂಪಾಯಿ ಖರ್ಚಾಗಿ, ಅನೇಕ ಸಾಮಾನುಗಳಿಗೆ ಆರ್ಡರ್ ಕೊಟ್ಟಿದ್ದರು.

ಜನಾಬ್ ಜೆ. ಮಹಮ್ಮದ್ ಇಮಾಂರವರು.—ಅದಕ್ಕೆ ಹಣವನ್ನೂ ಕೊಟ್ಟಿದ್ದೆವು.

ಶ್ರೀ ಎ. ಭೀಮಪ್ಪನಾಯಕರು.—ಸಾಮಾನ್ಯ ವರಮಾನದಿಂದ ಕೊಟ್ಟಿಲ್ಲ.

ಹಾಗೆ ಪ್ರಾರಂಭಮಾಡಿದ್ದರಿಂದ, ಪುನಃ ಇನ್ನೂ ಅದಕ್ಕೆ 5 ಕೋಟಿ ರೂಪಾಯಿ ಹಾಕಬೇಕಾಯಿತು. ಹೀಗೆ ಒಟ್ಟು 10 ಕೋಟಿ ರೂಪಾಯಿಹಾಕಿ, ಆದಾಯ ಬರುವವರೆಗೆ ಕಾಯದೆ, ಆದರಿಂದ ಉತ್ಪತ್ತಿಯಾಗತಕ್ಕ ವಿದ್ಯುಚ್ಛಕ್ತಿಯಿಂದ ಜನರಿಗೆ ಎಷ್ಟು ಅನುಕೂಲವಾಗಿದೆ ಎಂಬುದನ್ನು ಹೇಳದೆ, ನುಮ್ಮನೆ ರಿಜರ್ವ್‌ನಲ್ಲಿದ್ದ ಹಣವೆಲ್ಲ ಕರಗಿಹೋಯಿತು ಎಂದು ಹೇಳುವುದರಲ್ಲಿ ಏನು ಅರ್ಥ?

ಶ್ರೀ ಎಂ. ಶಂಕರಲಿಂಗೇಗೌಡರು.—ಜೋಗ್ ಯೋಜನೆಗೆ ಎಂಟುಕೋಟಿ ರೂಪಾಯಿ ಖರ್ಚು ಮಾಡಿದ್ದರಲ್ಲಿ ಅರ್ಥವಿದೆ, ಒಪ್ಪುತ್ತೇನೆ. ವಿದ್ಯಾಭ್ಯಾಸಕ್ಕೆ, ಅದಕ್ಕೆ, ಇದಕ್ಕೆ ಹಾಕಿ ಕಳೆದರು.

ಶ್ರೀ ಎ. ಭೀಮಪ್ಪನಾಯಕರು.—ತಾವು ಒಪ್ಪಿದ ಹಾಗೆ ಇಮಾಂರವರೂ ಒಪ್ಪಿಕೊಂಡಿದ್ದರೆ ಸಂತೋಷವಾಗುತ್ತಿತ್ತು (ನಗು !)

ಹಿಂದೆ ನನ್ನ ಮಿತ್ರರು ಇಮಾಂರವರು, ಸ್ವಾರ್ಥತೆಯಿಂದ, ಚಿತ್ರದುರ್ಗ ಜಿಲ್ಲೆಯಲ್ಲಿ ಅರು ಕೆರೆಗಳ ಕೆಲಸಗಳನ್ನಾರಂಭಿಸಿದರು. ತುಪ್ಪದಹಳ್ಳಿ, ಸಂಗೇನಹಳ್ಳಿ, ಪರಶುರಾಮಪುರ, ಗಡಿಮಾಕುಂಟೆ ಮುಂತಾದವು. ಅವರ ಸ್ವಾರ್ಥದಿಂದ ನಮಗೂ ಅನುಕೂಲವಾಯಿತು (ನಗು !)

ಜನಾಬ್ ಜೆ. ಮಹಮ್ಮದ್ ಇಮಾಂರವರು.—ಹೀಗೆ ಎಲ್ಲರೂ ನನ್ನಂಥ ಸ್ವಾರ್ಥಪರರಾಗಿರಲ ! (ನಗು !)

ಶ್ರೀ ಎ. ಭೀಮಪ್ಪನಾಯಕರು.—ಹಾಗೆ ಹಿಂದಿನವರು ಖರ್ಚು ಬಾಬುಗಳನ್ನು ಪ್ರಾರಂಭಮಾಡಿಬಿಟ್ಟಿದ್ದರು, ಮಂಜೂರು ಮಾಡಿದ್ದರು.

ಜನಾಬ್ ಜೆ. ಮಹಮ್ಮದ್ ಇಮಾಂರವರು.—ಮಂಜೂರು ಮಾಡಿದ್ದುದೂ ಅಲ್ಲದೆ ಅವಕ್ಕೆ ಬೇಕಾದ ಹಣವನ್ನೂ ಇಟ್ಟುಹೋಗಿದ್ದೆನಾನು.

ಶ್ರೀ ಎ. ಭೀಮಪ್ಪನಾಯಕರು.—ರಿಜರ್ವ್ ಹಣದಲ್ಲಿದ್ದುದನ್ನು 'ನಾನು ಇಟ್ಟಿದ್ದೆ' ಎಂದು ಹೇಳುತ್ತಾರೆ ! ಅವರೇನೂ ಇಟ್ಟಿರಲಿಲ್ಲ. ಬಹಳ ಹಿಂದಿನಿಂದಲೂ, ರಂಗಾಚಾರ್ಯರ ಕಾಲದಿಂದಲೂ ಇಟ್ಟಿದ್ದುದು ಜನರಿಗೆ ಗೊತ್ತಿದೆ. ಹೀಗಿರುವಾಗ 'ನಾನು ಇಟ್ಟಿದ್ದೆ, ನನ್ನದು' ಎಂದು ನೀವು ಹೇಳುವುದಕ್ಕಾಗುವುದಿಲ್ಲ. ಆಗಿನ ಕಾಲದ ಸರ್ಕಾರ ಇಟ್ಟಿತ್ತು.

ಜನಾಬ್ ಜೆ. ಮಹಮ್ಮದ್ ಇಮಾಂರವರು.—ನನ್ನನ್ನುದ್ದೇಶಿಸಿ ವೈಯಕ್ತಿಕವಾಗಿ ಸ್ವಾರ್ಥ ಎಂದು ಹೇಳಿದುದರಿಂದ ನಾನು ಹಾಗೆ ಹೇಳಿದೆ. ಮಂಜೂರು ಮಾಡಿದ್ದೂ ಸರ್ಕಾರ, ಫಂಡಿಟ್ಟಿದ್ದುದೂ ಸರ್ಕಾರವೇ.

ಶ್ರೀ ಎ. ಭೀಮಪ್ಪನಾಯಕರು.—ಈಗ ಅವುಗಳಿಗೆ ಹಾಕಿದ ಹಣ ಪ್ರಯೋಜನವಿಲ್ಲ, ಅವುಗಳಿಂದ ದೇಶಕ್ಕೆ ಪ್ರಯೋಜನವಿಲ್ಲ ಎಂದು ಅವರು ಹೇಳುವುದಾದರೆ, ಅವರು ಈ ಕೆಲಸಗಳನ್ನು ಪ್ರಾರಂಭಮಾಡಿದಾಗ ಇವು ಅಪ್ರಯೋಜಕ, ಇವುಗಳಿಂದೇನೂ ಲಾಭವಿಲ್ಲ ಎಂದು ತಿಳಿದೂ ಪ್ರಾರಂಭಮಾಡಿದರೆ ? ಕೋಲಾರದ ಅನೇಕ ಮಿತ್ರರು ಅಲ್ಲಿ ಕ್ವಾಮಸಿವಾರಣೆ ಮಾಡುವುದಕ್ಕೆ ಖಾಯಂ ಕೆಲಸಗಳನ್ನು ಮಾಡಿಕೊಡಿ ಎಂದು ಹೇಳುತ್ತಾರೆ. ಹಾಗೆಯೇ ಮೈದಾನ ಪ್ರದೇಶವಾದ ಚಿತ್ರದುರ್ಗ ಜಿಲ್ಲೆಯಲ್ಲಿ ಖಾಯಂ ಆಗಿ ಮಾಡಿರುವ ಕೆರೆಕಟ್ಟೆಗಳಿಗಾಗಿ ಈಗಿನ ಸರ್ಕಾರದವರು ಲಕ್ಷಾಂತರ ರೂಪಾಯಿ ಖರ್ಚು ಮಾಡದೇ ಇದ್ದಿದ್ದರೆ ಅಲ್ಲಿನ ಸ್ಥಿತಿ ಏನಾಗುತ್ತಿತ್ತು ಎಂಬುದನ್ನು ಯೋಚನೆ ಮಾಡೋಣ. ಹಿಂದಿನವರು ಅವುಗಳ ಮೇಲೆ ಹಾಕಿದ್ದ ಹತ್ತಾರುಲಕ್ಷ ರೂಪಾಯಿಗಳು ವ್ಯರ್ಥವಾಗಿ ಹಾಳಾಗುತ್ತಿತ್ತು. ಅವುಗಳನ್ನು ಮುಂದುವರಿಸುವುದಕ್ಕೇ ಆಗುತ್ತಿರಲಿಲ್ಲ. ನನ್ನ ಮಿತ್ರರು ಒಂದು ವಿಷಯವನ್ನು ಮರೆಯಬಾರದು. ಕಾಗೆಹಳ್ಳ, ಲಕ್ಕವಳ್ಳಿ ಇವುಗಳನ್ನು ಯಾರು ಪ್ರಾರಂಭಮಾಡಿದರು, ಯಾರು ಮಂಜೂರು ಮಾಡಿದರು ಎಂಬುದನ್ನು ಮರೆಯಬಾರದು. ಹೀಗಿರುವಾಗ ಇದಕ್ಕೆ ಹಣ ಹಾಕುತ್ತಿದ್ದೀರಿ, ಅನ್ಯಾಯ ಮಾಡುತ್ತಿದ್ದೀರಿ ಎಂದು ಹೇಳುವುದು ಯಾವ ನ್ಯಾಯ ! ಇವುಗಳು ದೊಡ್ಡ

(ಶ್ರೀ ಎ. ಭೀಮಪ್ಪನಾಯಕರು)

ಯೋಜನೆಗಳು ; 20 ಕೋಟಿ ರೂಪಾಯಿವರೆಗೆ ಅಂದಾಜಾಗಿದೆ. ಹಿಂದಿನವರು ಪ್ರಾರಂಭಮಾಡಿಬಿಟ್ಟಿದ್ದರು ; ಅವುಗಳನ್ನು ಪೂರ್ಣ ಮಾಡುವುದು ನಮ್ಮ ಕರ್ತವ್ಯ.

ಶ್ರೀ ಬಿ. ಹುಚ್ಚೇಗೌಡರು.—ಇನ್ನು 15 ವರ್ಷಕ್ಕೇ ಪೂರ್ತಿಯಾಗುವುದು.

ಲಕ್ಷವಳ್ಳಿ ಪ್ರಾಜೆಕ್ಟಿಗೆ 20 ಕೋಟಿ ರೂಪಾಯಿಗಳು ಬೇಕಾಗಿದೆ ಎಂದು ಹೇಳಿದರು. 20 ಕೋಟಿಯೇ ಏಕೆ, ಇನ್ನೂ ಜಾಸ್ತಿಯಾದರೂ, ಅದು 33 ಕೋಟಿ ಗಳಾಗಲಿ, ನಾವು ಕೇಂದ್ರದವರೊಡನೆ ಹಗಲೂ ರಾತ್ರಿ ಹೋರಾಡಿ, ಅವರಿಗೆ ಸಮಾಧಾನಪಡಿಸಿ ದುಡ್ಡನ್ನು ತರುತ್ತೇವೆ, ಆ ಕೆಲಸವನ್ನು ಪೂರ್ಣವಾಗಿ ನೆರವೇರಿಸುತ್ತೇವೆ ಎಂದು ನಮ್ಮ ಮಾನ್ಯ ಮುಖ್ಯ ಮಂತ್ರಿಗಳೇ ಹೇಳಿದ್ದಾರೆ. ಈ ಒಂದು ದೊಡ್ಡ ಅನು ಕೂಲಕ್ಕಾಗಿಯೇ ನಾವು ಆ ಆರ್ಥಿಕ ವಿಲೀನೀಕರಣದಲ್ಲಿ ಸೇರಿಕೊಂಡಿದ್ದೇವೆ. ಈ ದಿವಸ ಇರತಕ್ಕ ಆ ಧರ್ಮಾ ವತಿ ಕಾರ್ಖಾನೆಯನ್ನು ಸ್ಥಾಪನೆ ಮಾಡಿ ಇಲ್ಲಿಗೆ ಎಷ್ಟು ವರ್ಷಗಳಾಯಿತು! ಆದರೆ ಅದು ಇಲ್ಲಿಯ ತನಕ ಕೇವಲ ಸಣ್ಣ ಪುಟ್ಟ ಸಾಮಾನುಗಳನ್ನು, ಕೇವಲ ಮಕ್ಕಳಾಡುವ ಆಟದ ಸಾಮಾನುಗಳ ಮಾದರಿಯಲ್ಲಿ ಸಾಮಾನುಗಳನ್ನು, ಉತ್ಪತ್ತಿ ಮಾಡುತ್ತಿದ್ದುದರಿಂದ, ಆ ಕಬ್ಬಿಣದ ಕಾರ್ಖಾನೆಯಿಂದ ರಾಭವು ಒಂದು ವರ್ಷ ವಾದರೂ ಸರಿಯಾಗಿ ಬರುತ್ತಿರಲಿಲ್ಲ. ಆದರ ಪ್ರೊಡಕ್ಷ್ಟ್ ಕ್ಯಪ್ಯಾಸಿಟಿ ಆರು ಯೂನಿಟ್‌ಗಳಿದ್ದುದನ್ನು ಮುಂದೆ ಹೆಚ್ಚಿಸದೆ ಹಾಗೇ ಬಿಟ್ಟುಕೊಂಡು ಬಂದುದರಿಂದ ಅದರ ಉತ್ಪತ್ತಿ ಖರ್ಚಿಗಿಂತ ಕಡಮೆಯಾಗಿತ್ತು. ಹಾಗೆ ಹಿಂದಿನಿಂದ ನೀವು ಮಾಡಿದ ತಪ್ಪಿಗಾಗಿ ಈ ದಿವಸ ಗಳಲ್ಲಿಯೂ ಕೂಡ ಅದು ಅಷ್ಟು ರಾಭದಾಯಕವಾಗಿ ಕೆಲಸ ಮಾಡುತ್ತಿಲ್ಲ. ಈಗಲಾದರೋ ಅಂಥ ಕಾರ್ಖಾನೆ ಯಲ್ಲಿ ಮಿನಿಮಂ ಖರ್ಚಿನಿಂದ ಹೆಚ್ಚು ರಾಭ ಬರುವಂತೆ ಮಾಡಿದ್ದಾರೆ. ಧರ್ಮಾವತಿಯ ಕಾರ್ಖಾನೆಯಿಂದ ಮೊದಲು ಬರುತ್ತಿದ್ದ ಆದಾಯವಾದರೂ ಏನಿತ್ತು? ಈ ದಿವಸ ಅದರಿಂದ ಬರುತ್ತಿರುವ ಆದಾಯವೇನು? ಹಿಂದೆಲ್ಲಾ ಮೈಸೂರು ಸರ್ಕಾರ ಮಾದರಿ ಸರ್ಕಾರ ಎಂದೆನ್ನಿಸಿಕೊಳ್ಳಲು ಎಷ್ಟು ಬೇಕೋ ಅಷ್ಟನ್ನು ಮಾತ್ರ ಮಾಡುತ್ತಿದ್ದರು. ಆದರೆ ಈ ದಿವಸ ಕೆಲಸ ಕಾರ್ಯ ಗಳು ಆ ಮಟ್ಟದಲ್ಲಿ ನಡೆಯುತ್ತಿಲ್ಲ. ಇಂದು ನಿಜವಾದ ದೇಶೋದ್ಧಾರ ಕಾರ್ಯ ನಡೆಯುತ್ತಿದೆ.

ಮತ್ತೊಂದು ವಿಚಾರವೇನೆಂದರೆ, ದೇಶಕ್ಕೆ ಹೆಚ್ಚಿನ ಆದಾಯ ಬರುತ್ತಿದ್ದಂಥ ಶೇಂದಿ ಸಾರಾಯಿ ಬಾಬನ್ನು, ಸರ್ಕಾರದವರು ಕೈಬಿಟ್ಟದ್ದು ತಪ್ಪು ಎಂದು ಹೇಳಿ ದ್ದಾರೆ. ಆದರೆ ಅವರು ಹಿಂದಿನ ಪರಿಸ್ಥಿತಿಯನ್ನು ಸ್ವಲ್ಪ ಜ್ಞಾಪಿಸಿಕೊಳ್ಳಬೇಕು. ಹಿಂದೆ ಅವರು ಆಡಳಿತ ನಡೆಸುತ್ತಿದ್ದ ಕಾಲದಲ್ಲಿ ಈ ಶೇಂದಿ ಕುಡಿತವನ್ನು ತಪ್ಪಿ ಸುತ್ತೇವೆಂದು ಮಾದರಿಗಾಗಿ ಚೆನ್ನಪಟ್ಟಣ ತಾಲ್ಲೂಕಿ ನಲ್ಲಿ ಕಾರ್ಯಾಚರಣೆಯನ್ನು ಕೈಗೊಂಡು ಅಲ್ಲಿ ಪರಿಕ್ಷಾರ್ಥವಾಗಿ ಕೆಲಸ ನಡೆಸಿದರು. ಅಷ್ಟೇ ಏಕೆ, ಅವರೇ ಒಂದು ಸಮಿತಿಯ ಅಧ್ಯಕ್ಷರಾಗಿದ್ದುಕೊಂಡು ಇದನ್ನು ನಿಲ್ಲಿಸಬೇಕೆಂದು ಆ ದಿವಸ ಶಿಫಾರಸನ್ನು ಮಾಡಿದ್ದರು.

ಜನಾಬ್ ಮಹಮದ್ ಇಮಾಂರವರು.—I want to correct him. ನಾನು ಸಮಿತಿ ಮಾಡಿದ್ದುದೇ ಬೇರೆ. ಈಗ ಜಾರೀಲರುವ ಶಿಫಾರಸ್ಸುಗಳು ಆ ನಮ್ಮ ಸಮಿತಿಗೆ ಸೇರಿದವುಗಳಲ್ಲ.

My recommendations are quite different. The recommendations of the Committee over which they presided are quite different from the recommendations.....

Mr. SPEAKER.—It was ultimately for prohibition, is it not? I think it is unnecessary interference.

ಶ್ರೀ ಎ. ಭೀಮಪ್ಪನಾಯಕರು.—ನನ್ನ ಮಿತ್ರರಾದ ಜನಾಬ್ ಇಮಾಂರವರು ಈ ಪಾನ ನಿರೋಧದ ಬಗ್ಗೆ ಮಾಡಿದ್ದ ಶಿಫಾರಸ್ಸುಗಳು ಹೇಗಿದ್ದವೆಂದರೆ—5 ವರ್ಷ ಗಳಲ್ಲಿ ದೇಶವನ್ನು 5 ಭಾಗಗಳಾಗಿ ವಿಂಗಡಿಸಿ ಶೇಂದೀ ಹರಾಜುದಾರರಿಗೆ ರಾಭ ತಪ್ಪದಂತೆ ಒಂದು ಯೋಜನೆ ಹಾಕಿದ್ದರು—ಅದು ಹೇಗಿತ್ತೆಂದರೆ :

"ತೋಳ ತೋಳ, ಕುರಿ ಕಾಯುತ್ತೀಯಾ" ಎಂದರೆ "ಸಂಬಳವಿಲ್ಲದೆ ಕುರಿ ಕಾಯುತ್ತೇನೆ" ಎಂದು ಹೇಳಿದ ಹಾಗಿದೆ.

ಶ್ರೀ ಎಂ. ಶಂಕರಲಿಂಗೇಗೌಡರು.—ಸ್ವಾಮಿ, ಅಧ್ಯಕ್ಷರೇ, ನಾನು 'ಕುರಿ' ಎಂಬ ಶಬ್ದವನ್ನು ಒಂದಾ ವರ್ತಿ ಉಪಯೋಗಿಸುವುದಕ್ಕೇನೇ ತಾವು ಆಕ್ಷೇಪಣೆ ಎತ್ತಿದಿರಿ. ಈಗ ಮಾತನಾಡುತ್ತಿರುವ ಸದಸ್ಯರು 'ಕುರಿ, ಕುರಿ' ಎಂದು ಎರಡಾವರ್ತಿ ಉಪಯೋಗ ಮಾಡಿ ದ್ದಾರಲ್ಲ, ಇದರಲ್ಲೇನೂ ದೋಷವಿಲ್ಲವೋ!

ಶ್ರೀ ಎ. ಭೀಮಪ್ಪನಾಯಕರು.—ಕನ್ನಡ ಭಾಷೆ ಯಲ್ಲಿ ಇದೊಂದು ಹೇರುವಾಸಿಯಾದ ಗಾದೆ. ಇದು ಕನ್ನಡ ಸಾಹಿತ್ಯವನ್ನು ಬೆಳಗುತ್ತಿರುವಂಥ ಗಾದೆ. ಅವಿರಲಿ. ನನ್ನ ಮಿತ್ರರು 5 ವರ್ಷಗಳಲ್ಲಿ.....

Janab J. MOHAMED IMAM.—I think that is a wrong information. My recommendation is nowhere found in the Committee's report. It is absolutely false.

Sri A. BHEEMAPPA NAIK.—My friend used the words 'absolutely false'. If it is so, I wish it is so. Whatever it is.

ಅವರು ಒಂದು ಅಂಶವನ್ನು ಒಪ್ಪಿಕೊಂಡಿದ್ದಾರೆ. ಅವರು 5 ವರ್ಷದಲ್ಲಿ ಶೇಂದಿ, ಪರಾಬುಗಳ ಮಾರಾಟ ವನ್ನು ಸಂಪೂರ್ಣವಾಗಿ ದೇಶವಲ್ಲಿ ನಿಲ್ಲಿಸುವಂಥ ಒಂದು ಯೋಜನೆಯನ್ನು ಹಾಕಿಕೊಂಡಿದ್ದರು. ಆದರೆ ಈ ದಿವಸ ಈ ಬಾಬನ್ನು ಕೈಬಿಟ್ಟದ್ದು ತಪ್ಪೆಂದು ಬುದ್ಧಿ ಹೇಳತಕ್ಕ ಇವರು, ಆ ದಿವಸ ಆ ಒಂದು ಯೋಜ ನೆಯನ್ನು ಹಾಕಿ ಇದನ್ನು ತಪ್ಪಿಸಬೇಕೆಂದು ತೀರ್ಮಾನ ಮಾಡಿದ್ದ ಕಾಲದಲ್ಲಿ 'ಇದರಿಂದ ಬರುತ್ತಿದ್ದ ಆದಾಯ ಪೆರ್ಲಾ ನಿಂತು ಹೋಗುತ್ತದೆ, ಇದನ್ನು ನಿಲ್ಲಿಸ ಬಾರದು' ಎಂದು ಬುದ್ಧಿ ಹೇಳತಕ್ಕ ವಿವೇಚನೆ ಎಲ್ಲ ಹೋಗಿತ್ತು? ಈ ಬುದ್ಧಿ ಇಂದು ಹೇಳುವುದನ್ನು ತಾವು ಆ ದಿವಸವೇ ಹೇಳಿದ್ದರೆ ಚೆನ್ನಾಗಿರುತ್ತಿತ್ತೆಂದು ನಾನು ಹೇಳುತ್ತೇನೆ. ಆದರೆ ಈ ದಿವಸ ನಾವು ಮುಂದಕ್ಕೆ ಇಟ್ಟ ಹೆಜ್ಜೆಯನ್ನು ಹಿಂದಕ್ಕೆ ತೆಗೆದುಕೊಳ್ಳದ ಹಾಗೆ ಧೈರ್ಯದಿಂದ ವರ್ತಿಸುತ್ತಿರುವ ನಾವು ಹೆದರಿದ್ದೇವೋ, ಅಥವಾ ನೀವು ಹೆದರಿ ಕೈಬಿಟ್ಟಿದ್ದಿರೋ ಎಂಬ ಸಂಗತಿ ಗಳು ದೇಶಕ್ಕೇ ಗೊತ್ತಿವೆ

Janab J. MOHAMED IMAM.—I am speaking with reference to the debate on the floor of this House. I am not

concerned with paper reports or with what is said outside.

"ನಮ್ಮ ಮುಖ್ಯ ಮಂತ್ರಿಗಳು ಅಗತ್ಯ ಬಿದ್ದರೆ ಸಾಲ ಮಾಡುತ್ತೇವೆಂದು ಹೇಳಿದ್ದಾರೆ" ಎಂದು ತಿಳಿಸಿದರು. ಆದರೆ ಆ ರೀತಿ ನಮ್ಮ ಮುಂದೇನೂ ಮುಖ್ಯ ಮಂತ್ರಿಗಳು ಹೇಳಲಿಲ್ಲವಲ್ಲಾ! ಯಾವಾಗ ಹೇಳಿದರು ಹಾಗೆ?

ಶ್ರೀ ಎ. ಭೀಮಪ್ಪನಾಯಕರು.—ಬೆಂಗಳೂರಿನ ಪುರ ಪ್ರಮುಖರುಗಳೆಲ್ಲಾ, ಶ್ರೀಮತಿ ನುಬ್ಬರಾಮ ಶೆಟ್ಟರು ಇತ್ಯಾದಿ ದೊಡ್ಡ ಮನುಷ್ಯರೆಲ್ಲರೂ ನಮ್ಮ ಮುಖ್ಯ ಮಂತ್ರಿಗಳಿಗೆ ಒಂದು ಸಂತೋಷ ಕೂಟ ವನ್ನೇರ್ಪಡಿಸಿದ್ದೆಂಥ ಕಾಲದಲ್ಲಿ ನಮ್ಮ ಮುಖ್ಯ ಮಂತ್ರಿಗಳು ಹೇಳಿದ ಮಾತುಗಳಿವು—'ಯಾರೂ ನನಗೆ ಇದರ ವಿಚಾರವಾಗಿ ಏನನ್ನೂ ಹೇಳಬೇಕಾದ ಅಗತ್ಯವಿಲ್ಲ. ಜನರಿಗೆ ಇದರಿಂದ ಒಳ್ಳೆಯದಾಗುತ್ತದೆ, ದೇಶ ಉದ್ಧಾರವಾಗುತ್ತದೆ, ಬಡವರು ಉದ್ಧಾರವಾಗುತ್ತಾರೆ, ಎಂದು ನನಗೆ ತಿಳಿದು ಬಂದರೆ ಸಾಕು. ಬಡವರು ಮುಖ್ಯವಾಗಿ ಉದ್ಧಾರವಾಗುವುದಾದರೆ, ಇದು ಎಷ್ಟು ಅಗತ್ಯವಾದ್ದೆಂಬ ಕಂದು ಬಂದರೆ ಇದನ್ನು ಖಂಡಿತ ನಡೆಸಿಯೇ ತೀರುತ್ತೇನೆ" ಎಂದು ಹೇಳಿದ್ದಾರೆ.

ಇನ್ನು ನನ್ನ ಮಿತ್ರರಾದ ಮಹಮದ್ ಇಮಾಂರವರ ಕಾಲದಲ್ಲಿ ಅವರು ಯಾವ ಅಭಿವೃದ್ಧಿ ಕಾರ್ಯಗಳಿಗೂ ಹೆಚ್ಚಾಗಿ ಹಣವನ್ನು ಹಾಕಿರಲಿಲ್ಲ.- ವಿದ್ಯಾಭ್ಯಾಸವನ್ನೇ ತೆಗೆದುಕೊಳ್ಳಿ ಅಥವಾ ಆ ಒಂದು ಆರೋಗ್ಯ ಬಾಬನ್ನೇ ತೆಗೆದುಕೊಳ್ಳಿ—ಆದರೆ ಇವರ ಕಾಲದಲ್ಲಿ ಇವರೇನೋ ಚಿತ್ರದುರ್ಗ ಜಿಲ್ಲೆಯ ಜಗಳೂರಿಗೆ ಒಂದು ಹೈಸ್ಕೂಲನ್ನು ಕೊಡಲು ಬಹಳ ಪ್ರಯತ್ನ ಪಟ್ಟಿದ್ದರು.

Janab J. MOHAMED IMAM.—I did not want to have cheap and nasty high schools. I wanted to have fully furnished and fully equipped high schools.

ಇದೇನು ಅನುಕೂಲವಾದದ್ದೇ ಅಥವಾ ಪ್ರತಿಕೂಲವಾದದ್ದೇ?

Mr. SPEAKER.—This is not the time to speak about advantages or disadvantages of having high schools. A high school was sanctioned at Jagalur. That is the Hon'ble Member's point.

ಶ್ರೀ ಎ. ಭೀಮಪ್ಪನಾಯಕರು.—ನಾನೂ ಕೂಡ ತಾವು ಕೊಟ್ಟರಿ ಎಂದೇನೂ ಹೇಳಲಿಲ್ಲ. ಪ್ರಯತ್ನ ಮಾಡಿದಿರಿ ಎಂದೇ ಹೇಳಿದ್ದು. ಒಂದೊಂದು ಜಿಲ್ಲೆಗೆ ಅವರ ಕಾಲದಲ್ಲಿ 2-3 ಹೈಸ್ಕೂಲುಗಳು ಮಾತ್ರ ಇದ್ದವು. ಆದರೆ ಈ ದಿವಸ ಅದೇ ಚಿತ್ರದುರ್ಗ ಜಿಲ್ಲೆಯಲ್ಲಿ 23 ಹೈಸ್ಕೂಲುಗಳಿವೆ. ಹಿಂದಿನ ಕಾಲದಲ್ಲಿ ಒಬ್ಬ ಹುಡುಗ ಇಂಟರ್ ತರಗತಿಯಲ್ಲಿ ವ್ಯಾಸಂಗ ಮಾಡಬೇಕಾಗಿದ್ದರೆ, ಅತನಿಗೆ ಬೆಂಗಳೂರು ಒಂದು ಏನಾ ಮತ್ತೆಲ್ಲಿಯೂ ಅವಕಾಶವಿರಲಿಲ್ಲ. ಆದರೆ ಈ ದಿವಸ 9 ಜಿಲ್ಲೆಗಳಲ್ಲೂ 9 ಇಂಟರ್ ಕಾಲೇಜುಗಳನ್ನು ಸ್ಥಾಪಿಸಿದ್ದಾರೆ. ತಾವು ಇದನ್ನು ಮರೆಯಬಾರದು. ಜ್ಞಾನಾರ್ಜನೆಗಾಗಿ ಖರ್ಚು ಮಾಡತಕ್ಕ ಪ್ರತಿಯೊಂದು ಕಾನೂ ಬಹಳ. ಸದ್ವಿನಿಯೋಗಕ್ಕೆಉಪಯೋಗಿಸಿದಂತೆ ಆಯಿತೆಂದು ಅನೇಕ ತಜ್ಞರು ಹೇಳಿದ್ದಾರೆ. ಆದರೆ ಅವರ ಕಾಲದಲ್ಲಿ ಹೈಸ್ಕೂಲು, ಕಾಲೇಜುಗಳ ವ್ಯಾಸಂಗಕ್ಕೆ ಬಹಳ ತೊಂದರೆಯಿತ್ತು.

ಒಬ್ಬರು ಸದಸ್ಯರು.—ನಮಗೆ ಈಗ ಮುಖ್ಯವಾಗಿ ಬೇಕಾದದ್ದು ಹೊದಲು ಅನ್ನ.

ಶ್ರೀ ಎ. ಭೀಮಪ್ಪನಾಯಕರು.—ಹೌದು. ನಿಜ. ಇಂದು ನಾವು ದೇಶದಲ್ಲಿ ವಿದ್ಯಾಭ್ಯಾಸ ಮುಂದುವರಿಯಲಿ ಎಂದು ಹೇಳಿಯೇ ಇದನ್ನೆಲ್ಲಾ ಮಾಡಿದ್ದಾರೆ. ತಲೆಗೆ ಸ್ವಲ್ಪ ಬುದ್ಧಿ, ಹೊಟ್ಟೆಗೆ ಸ್ವಲ್ಪ ಅನ್ನ, ಮೈಗೆ ಸ್ವಲ್ಪ ಬಟ್ಟೆ—ಈ ಮೂರು ಪ್ರತಿಯೊಬ್ಬರಿಗೂ ಅವಶ್ಯಕವಾಗಿ ಬೇಕಾದುವು. ಹಾಗೆ ಹೊಟ್ಟೆಗೆ ಅನ್ನ, ಮೈಗೆ ಬಟ್ಟೆಯಿದ್ದು, ತಲೆಯಲ್ಲಿ ಸ್ವಲ್ಪ ಬುದ್ಧಿಯಿಲ್ಲದಿದ್ದರೆ ಈ ಜನವೇ ವಹಡಿಯಿಂದ, ಮಾರಕತ್ತಿ, ಬುಡಕತ್ತಿದ ಕಾಳಿದಾಸನಂತೆ, ಕೆಳಗೆ ಬಿದ್ದುಬಿಡುತ್ತೇವೆ. ಆದಕಾರಣ ತಲೆಯಲ್ಲಿ ಸ್ವಲ್ಪ ಬುದ್ಧಿ ಇಲ್ಲದಿದ್ದರೆ ಯಾವ ಪ್ರಯತ್ನವೂ ಸಾರ್ಥಕವಾಗುವುದಿಲ್ಲ. ಆದರೆ ಶ್ರೀಮತಿ ಶಂಕರಲಿಂಗೇಗೌಡರಿಗೆ ಅಂಕಿ ಅಂಶಗಳ ಬಗ್ಗೆ ಮತ್ತೂ ಗುಣಾಕಾರ ಹಾಕುವುದರಲ್ಲಿ ಬಹಳ ಆಸಕ್ತಿ.

ಇನ್ನೊಂದು ವಿಚಾರವೇನೆಂದರೆ—ಇಡೀ ಭಾರತದಲ್ಲೇ ನಮ್ಮ ಸಂಸ್ಥಾನದಷ್ಟು ಹಣವನ್ನು ಈ ವಿದ್ಯಕ್ಕಾಗಿ ಖರ್ಚು ಮಾಡಿರುವಂಥ ಪ್ರಾಂತ ಬೇರೆಯಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ತಿರುವಾಂಕೂರಿನಲ್ಲೋ!

ಶ್ರೀ ಎ. ಭೀಮಪ್ಪನಾಯಕರು.—ಅಲ್ಲಿ ವಿದ್ಯಾವಂತರ ಸಂಖ್ಯೆ ಜಾಸ್ತಿ ಇರಬಹುದು. ಆದರೆ ಇಷ್ಟು ದುಡ್ಡನ್ನು ಖರ್ಚು ಮಾಡುತ್ತಿಲ್ಲ. ಆದರೆ ನಾನು ಹೇಳುವುದು ನಮ್ಮದೇ highest ಎಂದು.

Mr. SPEAKER.—Sri Hutche Gowda may give the figure and correct him. Otherwise, that would be unnecessary interference.

Sri B. HUTCHE GOWDA.—I said '324 lakhs.'

Mr. SPEAKER.—What is the percentage?

Sri B. HUTCHE GOWDA.—27 per cent.

Sri A. BHEEMAPPA NAIK.—I do not know on what basis you have said it.

ಶೇಕಡ 37 ಎಂದು ಹೇಳಬಹುದು. ಆದರೆ ಅದು ಆಧಾರವಲ್ಲ. ಹಾಗೆರ್ಲಾ ಹೇಳುವುದರಿಂದ ಪ್ರಯೋಜನವಾಗುವುದಿಲ್ಲ. ಏನಾದರೂ ಆಗಲಿ, ಇನ್ನೊಂದು ದಿವಸ ಅವಕಾಶ ಸಿಕ್ಕಿದಾಗ ಸಭೆಯಲ್ಲಿ ಹೇಳಿ. ಅಲ್ಲಿ ನಮಗಿಂತ ವಿದ್ಯಾಭ್ಯಾಸದ ಶೇಕಡಾವಾರು ಸಂಖ್ಯೆ ಜಾಸ್ತಿ ಮಾಡುತ್ತಾರೆಂದು ಹೇಳಿದಾಗ ಒಪ್ಪೋಣ. ಅದೇನೇ ಇರಲಿ ಅದನ್ನು ಈಗ ಬಿಡೋಣ.

Mr. SPEAKER.—Hon'ble Member will bring the book and point out the figure tomorrow.

Sri B. HUTCHE GOWDA.—It is for him to dispute. I am certain that it is 324 lakhs. I might have been wrong in percentage.

ಶ್ರೀ ಎ. ಭೀಮಪ್ಪನಾಯಕರು.—ಆರೋಗ್ಯ ಸೌಕರ್ಯ, ನೀರು ಸರಬರಾಯಿ ಮುಂತಾದ ಬಾಬುಗಳಿಗೆ ಎಷ್ಟು ಹಣ ಖರ್ಚು ಮಾಡಿ ಏನೇನು ಏರ್ಪಾಡುಗಳನ್ನು ಮಾಡಿದ್ದಾರೆಂಬುದನ್ನು ಪುನಃ ಅಂಕಿ ಅಂಶ ತೋರಿಸಿ ಹೇಳಬೇಕಾಗಿಲ್ಲ. 1948-49ನೆಯ ಸಾಲಿನ

(ಶ್ರೀ ಎ. ಭೀಮಪ್ಪನಾಯಕರು)

ಫೈನಾನ್ಷಿಯರ್ ಮೆಮೊರಾಂಡಂ ತೆಗೆದು ನೋಡಿದರೆ ತಾನೇ ಗೊತ್ತಾಗುತ್ತದೆ. ಅಸೆಟ್ಸ್ ಮತ್ತು ಲಯಬಿಲಿಟೀಸ್ 56ನೆಯ ಪುಟದಲ್ಲಿ ನಮೂದಾಗಿವೆ. ಈಗಿನ ಅಂಕ ಅಂಶ 77ನೆಯ ಪುಟದಲ್ಲಿ ಮೆಮೊರಾಂಡಂನಲ್ಲಿ ನೋಡಬಹುದು, ಅವೆರಡನ್ನೂ ತೆಗೆದು ಕೊಂಡು ಹೋಲಿಸಿದರೆ ಆಗ ನರಿಯಾಗಿ ಗೊತ್ತಾಗುತ್ತದೆ.

ಆ ಮೇರೆ, 10½ ಲಕ್ಷ ರೂಪಾಯಿಗಳನ್ನು ಕೈಗಾರಿಕೆಗಳ ಫಂಡಿನಿಂದ ತೆಗೆದುಕೊಂಡಿದ್ದಾರೆಂದು ಹೇಳಿರುವುದು ನಿಜ. ಆ ಫಂಡು ಸ್ಥಾಪಿಸಲ್ಪಟ್ಟಿರುವುದು ಗೃಹ ಕೈಗಾರಿಕೆಗಳಿಗಾಗಿ. ಸರ್ ಎಂ. ವಿಶ್ವೇಶ್ವರಯ್ಯನವರ ಯೋಜನೆಯನ್ನು ಜಾರಿಗೆ ತಂದು ಯಾವ ಬಾಬುಗಾಗಿ ಈ ನಿಧಿಯನ್ನು ಏರ್ಪಡಿಸಲಾಗಿತ್ತೋ ಅದೇ ಬಾಬುಗೆ ಉಪಯೋಗಿಸಲಾಗಿದೆಯೆಂದು ಹೇಳುತ್ತೇನೆ. ಆ ಮೇಲೆ ಕೇವಲ ಪ್ಲಾನಿಂಗ್ ಕಮಿಷನ್‌ನಿಂದ ಶಿಪಾರ್ಸಾಗಿ ಬಂದು ಅವರು ತೋರಿಸಿರುವ ಮಾರ್ಗಕ್ಕನು ಸಾರವಾಗಿ ಗೃಹಕೈಗಾರಿಕೆಗಳು ಇಡೀ ಭಾರತದಲ್ಲಿ ಅಭಿವೃದ್ಧಿಹೊಂದುತ್ತವೆ: ಪ್ಲಾನಿಂಗ್ ಕಮಿಷನ್ ಎಂಬುದು ಅಧಿಕಾರಯುತವಾದ ಸಂಸ್ಥೆ. ಆ ಕಮಿಷನ್‌ನವರ ಸಲಹೆ ಮೇರೆಗೆ ಹಣ ಉಪಯೋಗಿಸಿದರೆ, ಅವರ ಸಲಹೆ ಅಥವಾ ಯೋಜನೆ ಸರಿಯಾಗಿಲ್ಲವೆಂದು ಹೇಳಿದರೆ, ನನ್ನ ಮಿತ್ರರಿಗೆ ಆ ರೀತಿ ಹೇಳುವುದಕ್ಕೆ ಅಧಿಕಾರವಿಲ್ಲ. ಅದಕ್ಕೆ ಏನಿಯೋಗಿಸಕೂಡದೆಂದು ಹೇಳುವುದು ಸರಿಯಲ್ಲ ಎಂದು ಅತಿ ವಿನಯದಿಂದ ಹೇಳುತ್ತೇನೆ. ಆ ಮೇಲೆ ರೈತರಿಗೆ ಈ ದಿವನ ಆದಾಯದಾಯಕವಾಗಿರುವ ರೀತಿಯಲ್ಲಿ ಹಣವನ್ನು ಏನಿಯೋಗಿಸಬೇಕು, ಉತ್ಪತ್ತಿ ಬರುವ ಬಾಬುಗಳಿಗೆ ಮಾತ್ರ ಹಾಕಬೇಕು ಎಂದು ಹೇಳಿದ್ದಾರೆ. ಅದು ನ್ಯಾಯ. ಇರಿಗೇಷನ್ ಬಾಬು ಒಟ್ಟು ಮನುಷ್ಯನ ಆದಾಯವನ್ನು ಒಂದಕ್ಕೆ ಇಪ್ಪತ್ತರಷ್ಟು ಏರಿಸುವುದು ಎಂಬುದನ್ನು ಒಪ್ಪುತ್ತೇನೆ. ಏಕೆಂದರೆ ಒಂದು ಪಲ್ಲ ಬೆಳೆಯುವ ಭೂಮಿಯಲ್ಲಿ 20 ಪಲ್ಲ ಬೆಳೆಯುವ ಶಕ್ತಿಕೊಡುವ ಕಾರ್ಯವನ್ನು ಮಾಡುವುದರಿಂದ ಇದಕ್ಕಿಂತಲೂ ಇನ್ನಾವ ಕಾರ್ಯವೂ ಉತ್ತಮವಾದುದಲ್ಲ ಎಂದು ಹೇಳಬಹುದು. ನಾವು ಶೇಕಡ ಮೂರರಂತೆ ಬಡ್ಡಿ ಬರುವಂತೆ ಹಣವನ್ನು ಬ್ಯಾಂಕಿನಲ್ಲಿಟ್ಟಿದ್ದೇವೆ. ಆದ್ದರಿಂದ ಶೇಕಡ ಎರಡರಂತೆ ಕೊಟ್ಟಿದ್ದಾರೆ, ಶೇಕಡ 1½ರಂತೆ ಬಡ್ಡಿ ಬರುತ್ತದೆ ಎಂದು ಟೀಕೆಮಾಡಬೇಕಾಗಿಲ್ಲ. ಅದರಿಂದ ರೈತರಿಗೆ ಆದಾಯವೇನು ಬರುತ್ತದೆ ಎಂಬುದನ್ನು ನೋಡಬೇಕು. ಆ ದೃಷ್ಟಿಯಿಂದ ನಾವು ಇರಿಗೇಷನ್ ಕೆಲಸಗಳಿಗೆ ಹಾಕಿರುವ ಹಣಕ್ಕೆ ಶಕ್ತ ಪ್ರತಿಫಲ ಬರುತ್ತದೆಯೆ ಎಂಬುದನ್ನು ಆ ಕೆಲಸಗಳು ಪೂರ್ತಿಯಾದ ನಂತರ ನೋಡಬೇಕು. ಉದಾಹರಣೆಗೆ ಜನಾದ್ ಇಮಾಂರವರಿಗೆ ಗೊತ್ತಿರುವ ಪರಶುರಾಮಪುರದ ಕೆರೆ ಕೆಲಸ ಮೂರು ಹಂತಗಳಲ್ಲಿ ನಡೆಯುತ್ತಿದೆ. ಅದಕ್ಕೆ ಮೊದಲು ಹಾಕಿರುವ ಹತ್ತು ಸಾವಿರ ರೂಪಾಯಿಗಳಿಂದ, ಅದು ಖರ್ಚಾಗಿದ್ದರೂ, ಅನುಕೂಲ ದೊರೆಯುವುದಿಲ್ಲ. ಇನ್ನೂ ಒಂದು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದ್ದೇ ಆದರೆ 50 ಎಕರೆ ನೀರಿಗೆ ಬರುತ್ತದೆ. ಇನ್ನೂ 50,000 ರೂಪಾಯಿಗಳು ಖರ್ಚುಮಾಡಿದರೆ 1,200 ಎಕರೆಗೆ ನೀರು ಸರಬರಾಯಿ ಆಗುತ್ತದೆ. ಆದ್ದರಿಂದ ಮೊದಲನೆಯ ಹಂತದಲ್ಲಿ ಖರ್ಚಾದ ಹಣ ಮೊತ್ತು ತರೀ ಸಾಗುವಳಿಗೆ ಸಾಕಷ್ಟು ಬಾದದೇ ಇರುವುದರಿಂದ ನಷ್ಟವಾಯಿತು ಎಂದು ಹೇಳಿದರೆ ಹೇಗೆ? ಕೈಕೊಂಡಿರುವ ಕೆಲಸ ಪೂರ್ತಿ ಆಗುವವರೆಗೂ ತಡೆದು ನೋಡಿ ಆಮೇರೆ ಆದಾಯವನ್ನು ಲೆಕ್ಕಮಾಡಿ ನಮಗೆ ಪೂರ್ತಿಯಾಗಿ ಪ್ರಯೋಜನವಾಗಿದೆಯೇ ನಿಜವಾಗಿಯೂ ಆದಾಯ ಬರುತ್ತಿದೆಯೆ ಎಂಬುದನ್ನು ತಿಳಿಯುವುದು ಒಳ್ಳೆಯದು. ಇಲ್ಲದಿದ್ದರೆ ನಮಗೆ ಏನೂ ಉಪಯೋಗವಾಗುವುದಿಲ್ಲ. ನಮ್ಮ ಪ್ರೊಡಕ್ಟಿವ್ ಅಸೆಟ್ಸ್ ಆದಾಯ ಈಗ ಏನೂ ಕೊಡುತ್ತಿಲ್ಲ ಎಂದು ಹೇಳುವುದಕ್ಕಿಂತ ಇನ್ನು 10 ವರ್ಷಗಳ ಮೇರೆ ಈ ಯೋಜನೆಗಳು ಪೂರ್ತಿಯಾದಾಗ ಉಚ್ಚುಕಟ್ಟಿನಲ್ಲಿರುವ ಜಮೀನುಗಳು ಸಾಗುವಳಿಯಾಗಿ ಆದರಿಂದ ರೈತರಿಗೆ ಆದಾಯಬರುವವರೆಗೂ ದಯವಿಟ್ಟು ಕಾಯಬೇಕು. ಈಗ ಹುಟ್ಟಿದ ಮಗುವನ್ನು ವೈದ್ಯರಿಗೆ ಬಂದಿದೆ ಎಂದು ಹೇಳುವುದಕ್ಕೆ 21 ವರ್ಷ ವಯಸ್ಸಾಗಬೇಕು. ಹಾಗಿರುವಾಗ ಈ ದಿವನ ಕೈಕೊಂಡಿರುವ ಪ್ರಾಜೆಕ್ಟ್‌ಗಳ ಫಲ ಈಗಲೇ ಗೊತ್ತಾಗುತ್ತದೆಯೆ? ಹಾಗೆಯೇ ವಿದ್ಯುಚ್ಛಕ್ತಿಯನ್ನು ನೀರಾವರಿ ಕೆಲಸಗಳಿಗಾಗಿ ಕೊಟ್ಟಿದ್ದಾರೆ. 30 ಲಕ್ಷ ರೂಪಾಯಿಗಳನ್ನು ಚಳ್ಳಕೆರೆ, ಮೊಳಕಾಲ್ಮೂರು ತಾಲ್ಲೂಕುಗಳಿಗೆ ಚಿತ್ರದುರ್ಗ ಜಿಲ್ಲೆಯಲ್ಲಿ ಹಾಕಿದ್ದಾರೆಂದು ಮಾನ್ಯ ಮಿತ್ರರೊಬ್ಬರು ಹೇಳಿದರು. ಆದರೆ ಅದೇ ರೀತಿಯಲ್ಲಿ ಮೈಸೂರು ದೇಶದ ಅನೇಕ ಭಾಗಗಳಿಗೆ ನೀರಾವರಿ ಯೋಜನೆಗಳಿಗಾಗಿ ಮತ್ತು ಬಾವಿಗಳಿಂದ ನೀರನ್ನೆತ್ತುವುದಕ್ಕಾಗಿ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದಾರೆ. ಅದೇ ನನ್ನ ಮಿತ್ರರ ಕಾಲದಲ್ಲಲ್ಲ, ಅಂದರೆ ಜವಾಬ್ದಾರೀ ಸರ್ಕಾರ ಬರುವುದಕ್ಕೆ ಮುಂಚೆ, ವಿದ್ಯುಚ್ಛಕ್ತಿಯನ್ನು ಬರೀ ಮನೆ ಬೆಳಕುಮಾಡುವುದಕ್ಕಾಗಿ ಉಪಯೋಗಿಸುತ್ತಿದ್ದರೇ ಹೊರತು ಹೊಟ್ಟೆತುಂಬಿಸುವುದಕ್ಕಾಗಿ ಉಪಯೋಗಿಸುತ್ತಿರಲಿಲ್ಲ. ಒಂದು ವೇಳೆ ಉಪಯೋಗಿಸಿದ್ದರೂ ಅದು ಬಹಳ ಕಡಮೆಯಾಗಿತ್ತು. ಈ ದಿವನ ಕಾಂಗ್ರೆಸ್ ಸರ್ಕಾರ ಬಂದ ಮೇರೆ ಥಳಕು ಬೆಳಕಿಗಿಂತ ಹೊಟ್ಟೆಗೆ ಅನುಕೂಲವಾಗಬೇಕು, ರೈತರ ಹೊಟ್ಟೆ ತುಂಬುವುದಕ್ಕೆ ಸಾಕಷ್ಟು ಸಹಾಯವಾಗಬೇಕು, ಎಂದು ಆಕಡೆಗೆ ಹೆಚ್ಚಾಗಿ ಗಮನಕೊಡಿದೆ.

ಹತೋಟಿ ಹೋಗಬೇಕು ಎಂದು ಹೇಳುವವರಲ್ಲಿ ನಾನೂ ಒಬ್ಬ. ಆದರೆ "Where angels fear to tread, fools rush in" ಎಂದು ಹೇಳುವ ಹಾಗೆ ಆಗಬಾರದು. ನಮ್ಮ ಸ್ನೇಹಿತರು 1948-49 ನೆಯ ಇಸವಿಯಲ್ಲಿ ಅಷ್ಟು ಅಭಿವೃದ್ಧಿ ಕಾರ್ಯಗಳು ನಡೆದಿದೆ ಎಂಬುದನ್ನು ನೆನವುಮಾಡಿಕೊಳ್ಳಬೇಕು. ಈಗ ಏಕಾ ಏಕಿ ಹತೋಟಿ ತೆಗೆದು ಮುಂದಾರೋಚನೆಯಿಲ್ಲದೆ ತೊಂದರೆಪಡುವುದಕ್ಕಿಂತ ಸಾಕಾದಷ್ಟು ಧಾನ್ಯ ದಾಸ್ತಾನಿಟ್ಟುಕೊಂಡು ನಮಗೆ ಕಷ್ಟಬಂದರೆ ಉಪಯೋಗಿಸುವುದಕ್ಕೆ ಅವಕಾಶಮಾಡಿಕೊಂಡು ಆದರ ಜೊತೆಗೆ ವಾರಾಹಿಯ ಬೆರೆ ಜಾಸ್ತಿಯಾಗುವ ಸಂಭವ ವಿದೆಯೆ, ಬೆಳೆ ಯಾವ ರೀತಿ ಇದೆ, ಎಂಬುದನ್ನೆಲ್ಲಾ ಲೆಕ್ಕಹಾಕಿ ಯೋಚನೆಮಾಡಿ ಆದಾದ ಮೇರೆ ಒಂದು ವ್ಯವಸ್ಥೆಮಾಡಬೇಕು. ಈಗ ಆರಿದ್ರ ಮಳೆ ಬರಬೇಕಾಗಿದೆ. ಆರಿದ್ರ, ಪುನರ್ವಸು, ಪುಷ್ಯ ಈ ಮಳೆಗಳು ವ್ಯವಸಾಯಕ್ಕೆ ಅದರಲ್ಲೂ ಬತ್ತನೆಗೆ ಸಹಕಾರಿಯಾಗಿವೆ. ಇದುವರೆಗೆ ಮೃಗಶಿರ ಮಳೆ ಬರಲಿಲ್ಲ. ಭೂಮಿಯೇನೋ ಹಸನಾಗಿರಬಹುದು. ಮಳೆಯಿಲ್ಲದೆ ಬತ್ತನೆ ಆಗಿಲ್ಲ. ಬತ್ತನೆ ಆಗಿ ಅನುಕೂಲವಾಗಿದ್ದರೂ danger months ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್ ಎಂಬುದನ್ನು ಮರೆಯುವಾರದು. ಆ ತಿಂಗಳುಗಳಲ್ಲೇ ಜನರಿಗೆ ಅನ್ನದ ಅಭಾವ ಬರುವುದು. ಈ ದಿವನ ಪುಗ್ಗಿಯು ಮುಗಿದು 2-3 ತಿಂಗಳುಗಳಾಗಿವೆ. ಎಲ್ಲಾ ಸೇವಾಸಾಗಿ ಸಿಕ್ಕುತ್ತಿದೆ, ಈಗ ರೈತರು ಸೇವಾದೃಷ್ಟಿಯಿಂದ "ಕಮರ್ಷಿಯರ್ ಕ್ರಾಪ್ಸ್" ಬೆಳೆಯದೆ ರಾಗಿ

ಜೋಳ ಮುಂತಾದುವನ್ನೇ ಅವು ಮುಖ್ಯವಾದ ಆಹಾರ ಪದಾರ್ಥಗಳಾದುದರಿಂದ ಬೆಳೆಯುತ್ತಿದ್ದಾರೆ.

ಅಂಥ ಸಂದರ್ಭದಲ್ಲಿ ನಾಳೆ ದಿನ ಸೆಪ್ಟಂಬರ್, ಅಕ್ಟೋಬರ್, ನವೆಂಬರ್ ತಿಂಗಳುಗಳಲ್ಲಿ ಪರಿಣಾಮ ಏನಾದೀತು ಎಂಬುದನ್ನು ಸರ್ಕಾರದವರು ಯೋಚನೆ ಮಾಡುತ್ತಾ ಇದ್ದಾರೆ. ಅವರು ಧೈರ್ಯದಿಂದ ಕೆಲಸ ಮಾಡಬಲ್ಲರು ಎಂಬುದಕ್ಕೆ ಒಂದು ಉದಾಹರಣೆ ತೋರಿಸಿದ್ದಾರೆ. ಅಧಿಕಾರ ವಹಿಸಿಕೊಂಡ ಪ್ರಾರಂಭದಲ್ಲೇ ಅದನ್ನು ಮಾಡಿದ್ದಾರೆ. ಒಬ್ಬ ಮಿತ್ರರು ಸರ್ವಾಧಿಕಾರ ಮನೋಭಾವ ಎಂದು ಹೇಳಿದರು. ಅದಕ್ಕೆ ಜವಾಬುಕೊಡದೇ ವಿಧಿ ಇಲ್ಲ. ಏಕೆಂದರೆ ಯಾವ ಸರ್ಕಾರವೇ ಆಗಲಿ ಒಂದು ಆಜ್ಞೆ ಮಾಡುವಾಗ ರೆಸಿಸ್ಟೆನ್ಸ್ ಪವರ್ಸ್ ತೆಗೆದುಕೊಳ್ಳುವುದಕ್ಕೆ ಅನುಮತಿ ಕರೆಯಬೇಕಾಗುತ್ತದೆ. ಅದಕ್ಕೆ ಒಂದು ಮಾತು ಹೇಳುತ್ತೇನೆ. ಆ ದಿವಸ ಅದೇ ಪರಿಸ್ಥಿತಿ ಮುಂದುವರಿಯುವುದಕ್ಕೆ ಬಿಟ್ಟಿದ್ದರೆ ಒಂದು ದಿವಸಕ್ಕೆ ಒಂದು ಲಕ್ಷ ರೂಪಾಯಿ ಲುಕ್ಸಾನಾಗುತ್ತಾ ಇತ್ತು. ಅದನ್ನು ಸರ್ಕಾರದವರು ಹೇಳಿದ್ದಾರೆ. ಒಂದು ವೇಳೆ ರೂ ಗೆ ¾ ಸೇರು ಮಾಡಬೇಕಾದ ಸಂದರ್ಭ ಬಂದರೆ ಮಾಡಬೇಕಾಗುತ್ತದೆ. ಆ ಪರಿಸ್ಥಿತಿ ಇದಗಿಲ್ಲ. ಎಲ್ಲಾ ಅಂಶವನ್ನೂ ಪರಿಶೀಲನೆಮಾಡಿ ರೂಪಾಯಿಗೆ 1½ ಸೇರು ಮಾಡಿದ್ದಾರೆ. ಅವೇನಾದರೂ ಇರಲಿ, ಸೋಷಿಯಲಿಸ್ಟರು ಸತ್ಯಾಗ್ರಹಮಾಡುತ್ತಾ ಇದ್ದಾರೆ. ಈ ಅಸೆಂಬ್ಲಿ ಕರೆಯಬೇಕಾಗಿದ್ದರೆ 15 ದಿವಸ ನೋಟೀಸ್ ಕೊಡಬೇಕಾಗುತ್ತದೆ. ಆ 15 ದಿವಸದೊಳಗೆ 15 ಲಕ್ಷ ರೂಪಾಯಿ ದಿವಸಕ್ಕೆ ಒಂದೊಂದು ಲಕ್ಷ ರೂಪಾಯಿ ನಂತೆ ಲುಕ್ಸಾನಾಗಿದ್ದಿದ್ದರೆ ಇಮಾಂ ಸಾಹೇಬರವರೇ ಎದುರು ಪಕ್ಷದಲ್ಲಿ ನಿಂತುಕೊಂಡು ದೇಶಕ್ಕೆ ಅನ್ಯಾಯವಾಗಿ ಲುಕ್ಸಾನುಮಾಡಿದ್ದೀರಿ, ಪೈಯಕ್ಕಿಕವಾಗಿ ತಾವೇ 15 ಲಕ್ಷ ರೂಪಾಯಿ ಭರ್ತಿಮಾಡಿಕೊಡಿ, ಎಂದು ಮುಖ್ಯ ಮಂತ್ರಿಗಳಿಗೆ ಹೇಳಿದ್ದಾಗ ಜವಾಬು ಕೊಡುವುದಕ್ಕೆ ಕಷ್ಟವಾಗುತ್ತಾ ಇತ್ತು. ಅದಕ್ಕೆ ಬದಲಾಗಿ ಈಗಾಗಲೇ ಆ ಕೆಲಸ ಮಾಡಿದ್ದಾರೆ, ರಾಜ್ಯ ಸಂಪಾದಿಸಿದ್ದಾರೆ. ಅದ್ದರಿಂದ ಈಗ ಏನಾದರೂ ಹೇಳೋಣ. ಡೀ ಕಂಟ್ರೋಲ್ ಮಾಡಿದರೂ ಬೆಲೆ ನಿರ್ದರಮಾದುವಾಗ ಒಂದು ಬೇರೆ ಪರಿಸ್ಥಿತಿ ಒದಗುತ್ತಾ ಇತ್ತು. ಅದನ್ನು ತಾವೂ ಹೇಳಿದ್ದೀರಿ, ಒಪ್ಪಿಕೊಂಡಿದ್ದೀರಿ.

Mr. SPEAKER.—Has the Hon'ble Member any other point?

Sri A. BHEEMAPPA NAIK.—I am sorry. I am concluding.

Janab J. MOHAMED IMAM.—Is he answering for the Government?

ಶ್ರೀ ಎ. ಭೀಮಪ್ಪನಾಯಕರು.—ತಮಗೆ ಜವಾಬು ಕೊಡುವುದರಲ್ಲಿ ನಾನು ಹೇಳಬೇಕಾದ್ದನ್ನು ಹೇಳದೆ ಇರತಕ್ಕ ಅವಕಾಶವನ್ನು ಕಳೆದುಕೊಂಡೆ. ನಾನು ಅನೇಕ ಹೊಸ ಅಂಶಗಳನ್ನು ಸರ್ಕಾರದವರ ಗಮನಕ್ಕೆ ತರಬೇಕೆಂದಿದ್ದೆ.

Mr. SPEAKER.—The Hon'ble Member may continue.

ಶ್ರೀ ಎ. ಭೀಮಪ್ಪನಾಯಕರು.—ಆದ್ದರಿಂದ ಆ ಒಂದು ಸರ್ವಾಧಿಕಾರ ಮನೋಭಾವ ಇದರಲ್ಲಿ ಇಲ್ಲ. ಒಂದು ಆಜ್ಞೆಯನ್ನು ಹೊರಡಿಸುವಾಗ ದೇಶದ ಹಿತ ದೃಷ್ಟಿಯಿಂದ ಅಂಥ ಆಜ್ಞೆ ಅಗತ್ಯವೆಂದು ಕಂಡುಬಂದರೆ ಆ ರೀತಿ ಹೊರಡಿಸಿದ ಒಂದು ಆಜ್ಞೆಯನ್ನು ಯಾವ ಜವಾಬ್ದಾರಿಯುತವಾದ ಜನವೇ ಆಗಲಿ, ಸಂಸ್ಥೆಯೇ ಆಗಲಿ ಆಕ್ಷೇಪಿಸಬಾರದು. ಆಕ್ಷೇಪಿಸುವುದು ನನಗಂತೂ ಸರಿಕಾಣುವುದಿಲ್ಲ. ಇಷ್ಟು ಮಾತ್ರ ಹೇಳುತ್ತೇನೆ. ಇದರಲ್ಲಿ ಸರ್ವಾಧಿಕಾರ ಮನೋಭಾವವಿಲ್ಲ. ದೇಶದ ಹಿತ ದೃಷ್ಟಿಯಿಂದ ಈ ಒಂದು ಆಯವ್ಯಯ ತಖ್ತೆಯನ್ನು ಖೋತಾ ಆಗದಂತೆ ನೋಡಿಕೊಂಡು ದೇಶದ ಆದಾಯ ಸರಿದೂಗಿಸುವುದಕ್ಕೆ ಪ್ರಯತ್ನಮಾಡಿದ್ದಾರೆ.

ಇನ್ನೊಂದು ವಿಚಾರ. ನಮ್ಮ ಭಾರತದೇಶದ ಆರ್ಥಿಕ ವ್ಯವಸ್ಥೆ, ನಮ್ಮಿಶ್ರಿತ ವ್ಯವಸ್ಥೆ (mixed economy) ಯಿಂದ ನಡೆಯಬೇಕೆಂದು ಸಿ. ಡಿ. ದೇಶಮುಖ್‌ರವರು ಕೆಲವು ದಿನಗಳ ಹಿಂದೆ ಹೇಳಿದ್ದಾರೆ. ಅದನ್ನು ಅವರು ತಿಳಿದ ಕೊಳ್ಳಬೇಕು. ಮಿಕ್ಸೆಡ್ ಎಕಾನಮಿ ಪ್ರಕಾರ ಈಗ ನಮ್ಮ ದೇಶದಲ್ಲಿ ಹೊಸದಾಗಿ ಜಾರಿಗೆ ಬಂದಿರತಕ್ಕ ಪದ್ಧತಿ ಏನಿದೆ ಅದರಲ್ಲಿ ಖೋತಾ ಮಾಡತಕ್ಕ ಖರ್ಚುಗಳನ್ನು ಖೋತಾಮಾಡಿ, 30 ಲಕ್ಷ ರೂಪಾಯಿಗಳವರೆಗೂ ಉಳಿತಾಯಮಾಡಿದ್ದೇವೆ. ಆದರೂ 'ನೀವು ರಸೀಟ್ಸ್‌ನಲ್ಲಿ ಏಕೆ ಖೋತಾ ಮಾಡಲಿಲ್ಲ' ಎಂದು ಕೇಳಿದ್ದಾರೆ...

Janab J. MOHAMED IMAM.—Again wrong information.

ಶ್ರೀ ಎ. ಭೀಮಪ್ಪನಾಯಕರು.—ಎಷ್ಟೋ ಖರ್ಚು ಆಗಿದೆ. ಖರ್ಚು ಅದೇ ರೀತಿ ತೆಗೆದುಕೊಂಡು ಹೋಗಿ, ಆದಾಯವನ್ನೂ ಅದೇ ರೀತಿ ತೆಗೆದುಕೊಂಡು ಹೋಗಿ ಒಂದೆರಡು ಬಾಬಿನಲ್ಲಿ ಖೋತಾ ತೋರಿಸಿದರೆ ಏನು ಪ್ರಯೋಜನ, ರಿಜ್ರೆಂಚ್‌ಮೆಂಟ್ ಒಂದರಲ್ಲಿ ತೋರಿಸಿದರೆ ಏನಾಯಿತು, ಎಂದು ಹೇಳಿದರು. ಖರ್ಚು ಹೆಚ್ಚಿರತಕ್ಕ ಸಿಬ್ಬಂದಿಯಲ್ಲಿ ಖೋತಾ ತೋರಿಸದೆ ಇನ್ನಾವ ವಿಧದಲ್ಲಿ ಖೋತಾ ತೋರಿಸಬೇಕಾಗಿತ್ತು? ಆದಾಯ ಹೆಚ್ಚುಮಾಡಬೇಕಾದರೆ ಪ್ರತ್ಯಕ್ಷವಾಗಿ ಆಗಲಿ, ಅಪ್ರತ್ಯಕ್ಷವಾಗಿ ಆಗಲಿ ತೆರಿಗೆ ಹಾಕಬೇಕಾಗಿತ್ತು. ಅದನ್ನು ಈ ಸಂದರ್ಭದಲ್ಲಿ ದೇಶ ತಡೆಗಟ್ಟುವುದಕ್ಕೆ ಸಾಧ್ಯವಿಲ್ಲ. ಅದು ಅಗತ್ಯವಾದದ್ದು. ಧೈರ್ಯದಿಂದ ಮಾಡಬೇಕಾಗಿತ್ತು. ಅದಕ್ಕೆ ಬೇರೆ ಆಲೋಚನೆ ಮಾಡಬೇಕಾಗಿಲ್ಲ. ಆದರೆ ಈಗಿನ ಪರಿಸ್ಥಿತಿಯಲ್ಲಿ ದೇಶದ ಒಂದು ಆರ್ಥಿಕ ವ್ಯವಸ್ಥೆ ಉತ್ಪತ್ತಿಗೊಳ್ಳದ ಹೊರತು, ಕಂದಾಯ ಕೊಡತಕ್ಕ ರೈತನ ಆರ್ಥಿಕ ಮಟ್ಟ ಹೆಚ್ಚದ ಹೊರತು ಆ ಕಂದಾಯವನ್ನು ಹಾಕಬಾರದು ಎಂಬ ದೃಷ್ಟಿಯಿಂದ ಅದನ್ನು ತಂದಿಲ್ಲ. ಮನುಷ್ಯನ ಆದಾಯ್ಕ, ಮನುಷ್ಯನ ಸಂಪಾದನಾಶಕ್ತಿ ಹೆಚ್ಚಿದಂತೆಲ್ಲಾ ಖರ್ಚು ಹೆಚ್ಚುಮಾಡಬೇಕಾಗುತ್ತದೆ. ಅದನ್ನು ತಾವು ಆಲೋಚನೆಮಾಡಬೇಕಾಗಿಲ್ಲ, ಮಾಡೇಮಾಡುತ್ತೇವೆ.

ನನಗೆ ಸಂಬಂಧಪಟ್ಟಂತೆ ಎರಡು ಮಾತುಗಳನ್ನು ಮಾತ್ರ ಹೇಳುತ್ತೇನೆ. ಕಟ್ಟಡಗಳಿಗೆ ಸಾರ್ವಜನಿಕರು ದುಡ್ಡು ಕೊಟ್ಟಿದ್ದಾರೆ. ಧರ್ಮಾತ್ಮರು ದುಡ್ಡು ಕೊಟ್ಟಿದ್ದಾರೆ. ಅವರು ಒಂದೇ ಒಂದು ಮಾತನ್ನು ಹೇಳುತ್ತಾ ಇರುವುದು ಏನೆಂದರೆ: ನಾನು ಒಬ್ಬರಲ್ಲಿ ಹೋಗಿ ಚಿತ್ರದುರ್ಗದ ಕಾರೇಜು ಕಟ್ಟಡಕ್ಕೆ 2,000 ರೂಪಾಯಿ ಕೊಡಿ ಎಂದು ಕೇಳಿದ್ದಕ್ಕೆ ಅವರು 'ಸ್ವಾಮಿ, ಕೊಡೋಣ, ಕೊಡುತ್ತೇವೆ; ಆದರೆ ಒಂದು ಮಾತು ಹೇಳಬೇಕಾಗಿದೆ' ಎಂದರು. ಅದೇನು ಎಂದಿದ್ದಕ್ಕೆ 'ಸಾಮಾನ್ಯವಾಗಿ ಧರ್ಮಮಾಡಬೇಕೆಂದು ಬುದ್ಧಿ ಬರುವುದು ಅಪಾರ ವಯಸ್ಸಾದಾಗ; ಕೊಟ್ಟ ಮೇರೆ ನಾವು ಕೊಟ್ಟ ಧರ್ಮ ನಾವು ಇದ್ದಂತೆಯೇ ನೋಡಬೇಕೆಂಬ ಬುದ್ಧಿ, ಮನೋಭಾವ ಇರುತ್ತದೆ. ನಾವು ಕೊಟ್ಟ ಧರ್ಮದಿಂದ ಆ ಕಟ್ಟಡ ಆಗದೇ ಅಷ್ಟರಲ್ಲೇ ಹೋಗಿಬಿಟ್ಟರೆ ಪುನರ್ಜನ್ಮ ಪಡೆದು ಬರಬೇಕಾಗುತ್ತದೆ. ಆ ರೀತಿ ಆಗದಂತೆ ನಾವು ಇದ್ದಂತೆಯೇ ಏರ್ಪಡಿಸುವುದಕ್ಕೆ ಪ್ರಯತ್ನ

(ಶ್ರೀ ಎ. ಭೀಮಪ್ಪನಾಯಕರು)

ಮಾಡಿ' ಎಂದು ಹೇಳಿದರು. ಅದು ಬಹಳ ಸೂಕ್ಷ್ಮವಾದ ಸಲಹೆ. ಆ ದೃಷ್ಟಿಯಿಂದ ನಾನು ಹೇಳುವುದೇನೆಂದರೆ ಅನೇಕರು ಆಸ್ಪತ್ರೆಗಳಿಗೆ, ಸ್ಕೂಲುಗಳಿಗೆ ದುಡ್ಡು ಕೊಟ್ಟಿದ್ದಾರೆ. ಕೆಲವು ಭಾಗ ಹಣವನ್ನು ಸರ್ಕಾರದವರೂ ಹಾಕಬೇಕೆಂದು ಒಪ್ಪಿಕೊಂಡಿದ್ದಾರೆ. ಈಗಿನ ಪರಿಸ್ಥಿತಿಯಲ್ಲಿ ಚೈಜರಿ ಸೇವಿಂಗ್ಸ್ ಬ್ಯಾಂಕ್‌ನಲ್ಲಿ ಅನೇಕರು ಕೊಟ್ಟ ಹಣ ಇದೆ. ಅವನ್ನು ಉಪಯೋಗಿಸಿ ಎಷ್ಟು ಸಾಧ್ಯವೋ ಅಷ್ಟುಮಟ್ಟಿಗಾದರೂ ಕಟ್ಟಡ ಕಟ್ಟಿಸುವುದಕ್ಕೆ ಪ್ರಯತ್ನಮಾಡಬೇಕೆಂದು ಸಲಹೆ ಕೊಡುತ್ತೇವೆ.

ಒಬ್ಬರು ಸದಸ್ಯರು.—ಹಣ ಇಲ್ಲ. ಅದೆಲ್ಲಾ ಖರ್ಚಾಗಿ ಹೋಗಿದೆ.

ಶ್ರೀ ಎ. ಭೀಮಪ್ಪನಾಯಕರು.—ಆ ದುಡ್ಡು ಬಳಸಿಲ್ಲ; ದುಡ್ಡು ಇದೆ. ಬಡ್ಜೆಟ್‌ನ 2ನೇ ಹೇಡಿನ ಮೇರ್ ಭಾಗದಲ್ಲಿ ಕ್ಲೋಸಿಂಗ್ ಬ್ಯಾಲೆನ್ಸ್ ಏನಿದೆ ಎಂಬುದನ್ನು ತೋರಿಸಿದ್ದಾರೆ. ಹಣಕಾಸಿನ ಪರಿಸ್ಥಿತಿ ಬಹಳ ಉತ್ತಮವಾಗಿದೆ.

ಇನ್ನೊಂದು ಮಾತು ಹೇಳಿದರು, ಕೋಲಾರದ ಚಿನ್ನದಗಣಿ ವಿಚಾರದಲ್ಲಿ ಶ್ರೀಮಾನ್ ಶ್ರೀನಿವಾಸ ಐಯ್ಯಂಗಾರ್ಯರು ಭಾಷಣಮಾಡಿದ್ದಾರೆ. ಅದು 26ನೇ ಜೂನ್ 1952ರ ಜನವಾಣಿ ಪತ್ರಿಕೆಯಲ್ಲಿ ಬಂದಿದೆ. ಅದನ್ನು ನಭೆಯ ಗಮನಕ್ಕೆ ತರುತ್ತೇನೆ.

Janab J. MOHAMED IMAM.—On a point of order. He is quoting a statement of a certain person who is not a Member of this House. There is a definite ruling that paper reports should not be made use of for purposes of illustration. My friend is quoting from the paper. We may believe it or we may not believe it.

Mr. SPEAKER.—Take it for what it is worth.

ಶ್ರೀ ಎ. ಭೀಮಪ್ಪನಾಯಕರು.—ನನ್ನ ಮಾನ್ಯ ಮಿತ್ರರಿಗೆ ತಿಳಿಸುತ್ತೇನೆ ಅಷ್ಟೆ. ಜನಾಬ್ ಇಮಾಮ್ ರವರು ಆ ಕಂಪೆನಿಯ ಹಿತದೃಷ್ಟಿಯಿಂದ ಮಾಡಿದರು ಎಂದು ಹೇಳಿದ್ದಾರೆ.

Janab J. MOHAMED IMAM.—On a point of order. I have not said so. He is misquoting me.

Mr. SPEAKER.—Never mind. You have not said so.

ಶ್ರೀ ಎ. ಭೀಮಪ್ಪನಾಯಕರು.—ಈಗ ಕೋಲಾರದ ಭಂಗಾರದ ಗಣಿಯಲ್ಲಿ ಮೊದಲಿಗಿಂತಲೂ ಹೆಚ್ಚು ಭಂಗಾರ ಉತ್ಪನ್ನವಾಗುತ್ತಾ ಇದೆ ಎಂಬುದನ್ನು ನಾನು ಅಧಿಕಾರಯುತವಾಗಿ ಹೇಳುತ್ತೇನೆ.

5 P.M.

ಆದರೆ ಭಂಗಾರದ ಬೆಲೆ ನಿಕೃಷ್ಟ ಸ್ಥಿತಿಗೆ ಬಂದು ಬಹಳವಾಗಿ ಬಿದ್ದುಹೋಗಿರುವುದರಿಂದ ನಮಗೆ ಅದರ ಮೇಲೆ ಬರಬೇಕಾದ ಡ್ಯೂಟಿ, ಆದಾಯ ಬರುತ್ತಿಲ್ಲ. ಅವರಿಗೇ ಗೊತ್ತಿರುವಂತೆ, ಕಂಪೆನಿಯವರು, poorer ore ಅಂದರೆ ಕಡಮೆಭಾಗ ಚಿನ್ನವಿರುವ ಅದಿರನ್ನು ಉಪಯೋಗಿಸಿ ಭಂಗಾರವನ್ನು ತೆಗೆಯುತ್ತೇವೆಂದು ಹೇಳಿದ್ದರು. ಅದರಂತೆ ಅವರು ಮಾಡುತ್ತಿರುವುದರಿಂದ ನಮಗೀಗ ಆದಾಯ ಬಂದಿಲ್ಲ. ಇತ್ತೀಚೆಗೆ ತಿಳಿದುಬಂದಿರುವಂತೆ ಅಲ್ಲೇ ಇನ್ನೊಂದು ಗಣಿಯಲ್ಲಿ ಹೆಚ್ಚು ಭಂಗಾರವಿರತಕ್ಕ ಗಣಿಯೊಂದು ಸಿಕ್ಕಿದೆ. ಅದನ್ನು ತೆಗೆಯಲು ಪ್ರಾರಂಭಿಸಿದರೆ ಹೆಚ್ಚಿಗೆ ಭಂಗಾರ ತಯಾರಾಗಿ ನಮ್ಮ ಆದಾಯ ಹೆಚ್ಚುತ್ತದೆಂದು ಹೇಳಬಹುದು. ಆದ್ದರಿಂದ ಈ ಕರಾರನ್ನು ಮಾಡಿಕೊಂಡಿದ್ದು ಒಂದು ದುರುದ್ದೇಶದಿಂದ ಮಾಡಿದ್ದೆಂದಾಗಲಿ, ಅವರ ಉದ್ದೇಶ ದೇಶಕ್ಕೆ ಧಕ್ಕೆ ತರಬೇಕೆಂದಿತ್ತೆಂದಾಗಲೀ ಹೇಳುವುದು ನ್ಯಾಯವಲ್ಲ. ಈ ಕರಾರನ್ನು ಮಾಡಿಕೊಳ್ಳುವುದರಲ್ಲಿ ದಾಸಪ್ಪನವರು ಭಾಗವಹಿಸಿದ ಮಾತ್ರಕ್ಕೇ, ಅವರಿದಕ್ಕೆ ವೋಟುಮಾಡಿದ ಮಾತ್ರಕ್ಕೇ, ಸಭೆಯವರೆಲ್ಲರಿಗೂ ವೋನಮಾಡಿ ಒಪ್ಪಿಸಿದರೆಂದು ಹೇಳುವುದು ನ್ಯಾಯವಲ್ಲ.

Janab J. MOHAMED IMAM.—That is all very bad, Sir. I have not said it and I think the Chair.....

Mr. SPEAKER.—You have not said it. The Hon'ble member should be careful in quoting others.

ಶ್ರೀ ಎ. ಭೀಮಪ್ಪನಾಯಕರು.—ನೀವು ಹಾಗೆಯೇ ಹೇಳಿರಬಹುದು. ಆದರೂ, ನನ್ನ ಮಿತ್ರರು ಹೇಳಿದ ಘೋರಣಿ, ಲಂಡನ್ನಿನಲ್ಲಿ ಜಾಕ್‌ಚೇಲರ್ ಕಂಪೆನಿಯವರು, ರಾಮಸ್ವಾಮಿ ಮೊದಲಿಯಾರ್‌ರವರು, ದಾಸಪ್ಪನವರು ಎಲ್ಲರೂ ಸೇರಿಕೊಂಡು ಯಾರೂ ಕಾಣದ ಹಾಗೆ ಒಂದು ಒಪ್ಪಂದಕ್ಕೆ ಬಂದರು ಎಂದು ಹೇಳುವುದರಲ್ಲಿ ಜನತೆಯ ಮೇರೆ ಯಾವ ಪರಿಣಾಮವನ್ನುಂಟುಮಾಡುವಂತಿದೆ, ಜನತೆಯಲ್ಲಿ ಯಾವ ಭಾವನೆಯನ್ನುಂಟುಮಾಡಿತು! ಏನೋ ಆಗಬಾರದ್ದಾಗಿ ಹೋಗಿದೆಯೆಂಬ ಭಾವನೆಯನ್ನು ಹುಟ್ಟಿಸಿದ್ದಾರೆಂಬುದನ್ನು ಎಲ್ಲರೂ ಒಪ್ಪಬೇಕು. ಅದು ಸರಿಯಾದ್ದಲ್ಲ. ನಾವು ಅದರ ಫಲವನ್ನು ಕಾಣಬೇಕಾದರೆ, ಅದರ ಬೆಳವಣಿಗೆಯನ್ನು ಕಾಣಬೇಕಾದರೆ ಇನ್ನೂ ಕೆಲವು ದಿವಸ ಕಾದು ನೋಡಬೇಕಾದ್ದು ನ್ಯಾಯ. ಹಾಗಿಲ್ಲದೆ ಈಗಲೇ ಈ ರೀತಿ ಟೀಕೆ ಮಾಡುವುದಕ್ಕೆ ಹೊರಡುವುದು ಸಮಂಜಸವಲ್ಲವೆಂದು ಹೇಳುತ್ತೇನೆ.

ಜನಾಬ್ ಜೆ. ಮಹಮದ್ ಇಮಾಂರವರು.—ಆಗಲೇ ಮೂರು ವರ್ಷವಾಯಿತು!

ಶ್ರೀ ಎ. ಭೀಮಪ್ಪನಾಯಕರು.—ಮೂರು ವರ್ಷವಲ್ಲ, ಮೂವತ್ತು ವರ್ಷವಾಗಬಹುದು. ತಾವು ಲಕ್ಕವಳ್ಳಿ ರಿನರ್ವಾಯರ್ ವಿಷಯದಲ್ಲಿಯೂ ಹೀಗೆಯೇ 150 ವರ್ಷಗಳು ಬೇಕಾಗುತ್ತವೆಂದು ಹೇಳುತ್ತಿದ್ದಿರಿ. ಆದರೆ ತಾವೇ ಕಂಡಹಾಗೆ, ಹೀಗೆಯೇ ಗಟ್ಟಿಮುಟ್ಟಾಗಿ ಚೆನ್ನಾಗಿದ್ದು, ಇನ್ನೊಂದು ಸಲ ಜುನಾವಣಿಯಲ್ಲಿ ಜಯಶೀಲರಾಗಿ ಈ ಸಭೆಗೆ ಬರುವ ಹೊತ್ತಿಗೆ ಅದು ಆಗಿರುತ್ತದೆಂದು ಹೇಳಬಹುದಾಗಿದೆ.

ಅದೇನೇ ಇರಲಿ, ಈವತ್ತಿನ ದೇಶದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಈ ಆದಾಯ ವ್ಯಯದ ಅಂದಾಜುಗಳನ್ನು ಬಹಳ ಚೆನ್ನಾಗಿ ತಯಾರು ಮಾಡಿದ್ದಾರೆಂದು ಹೇಳಬೇಕು. ಶ್ರೀಮಾನ್ ಪಟ್ವಾಭಿರಾಮಾರವರು ಇದನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. "ನೀವು ಏನನ್ನೇ ಮಾಡಿರಿ, ಯಾವುದನ್ನೇ ಮಾಡಿರಿ, ದೇಶದ ಆದಾಯವನ್ನು ಹೆಚ್ಚು ಮಾಡಿ, ಖರ್ಚನ್ನು ಕಡಮೆಮಾಡಿ, ಅಭಿವೃದ್ಧಿ ಕೆಲಸಗಳನ್ನು ಹೆಚ್ಚು ಹೆಚ್ಚಾಗಿ ಕೈಕೊಂಡು, ಕೆಲಸದಲ್ಲಿ ಹೆಜ್ಜೆಯಿಡುವುದರಲ್ಲಿ ಹುಷಾರಾಗಿ ಹೋಗಿರಿ" ಎಂದು ಹೇಳಿದರು. ಇದನ್ನು ನಾನು ಖಂಡಿತವಾಗಿ ಒಪ್ಪುತ್ತೇನೆ. ನಮ್ಮ ಎದುರು ಪಕ್ಷದ ಮುಖಂಡರು ಇದನ್ನು ಹೇಳಿದ್ದರೆ ಎಷ್ಟು ಚೆನ್ನಾಗಿತ್ತು!

ಬೇರೆ ಏನೇನೋ ವಿಷಯಗಳನ್ನು ಹೇಳಿದರೇ ಹೊರತು, ಇದನ್ನೇಕೋ ಹೇಳಲಿಲ್ಲ. ಈ ಮಾತುಗಳನ್ನು ಹೇಳಿದ ಶ್ರೀಮಾನ್ ಪಟ್ಟಾಭಿರಾಮರೆಡ್ಡರವರಿಗೆ ನನ್ನ ವಂದನೆಗಳು.

ಆಮೇಲೆ, ಇಮ್ಮೊಂದು ಮಾತು ಅವರು ಹೇಳಿದರು

.....

Janab J. MOHAMED IMAM.—For how long we are going to continue; Sir, I want to know.

ಶ್ರೀ ಎ. ಭೀಮ್ಷಪ್ಪನಾಯಕರು.— I shall finish in two minutes. ಮುನಿಸಿಪಾಲಿಟಿಗೆ ಮತ್ತು ವಿಲೇಜ್ ಪಂಚಾಯ್ತಿಗಳಿಗೆ ಜ್ಯುಡಿಷಿಯರಿ ಅಧಿಕಾರಗಳನ್ನು, ನ್ಯಾಯವಿಮರ್ಶೆ ಮಾಡತಕ್ಕ ಅಧಿಕಾರಗಳನ್ನು ಕೊಡುವುದು ಒಳ್ಳೆಯದು; ತನ್ಮೂಲಕ ಜಿರ್ಡನ್ನು ಕತಮೆ ಮಾಡಿದಂತಾಗುತ್ತದೆಂದು ಹೇಳಿದರು. ನಾನೂ ಕೂಡ ಒಂದಾನೊಂದು ಸಂದರ್ಭದಲ್ಲಿ ಅದೇ ಅಂಶವನ್ನು ಒತ್ತಾಯಪಡಿಸಿದ್ದೆ; ಆ ಕಮಿಟಿಯ ವರದಿಯಲ್ಲೂ ನಾನು ಅದೇ ಸಲಹೆ ಮಾಡಿದ್ದೇನೆ. ಈವತ್ತಿನ ಪರಿಸ್ಥಿತಿಯಲ್ಲಿ ಇನ್ನೂ ಆ ಹೊರೆಯನ್ನು ಹೊರುವುದಕ್ಕೆ ಅವುಗಳಿಗೆ ಶಕ್ತಿಯಿದೆಯೇ ಎಂಬ ಭಯ ನಮಗಿರಬೇಕಾಗಿಲ್ಲ. ಏಕೆಂದರೆ ಈಗಾಗಲೇ ಬೇಕಾದಷ್ಟು ಅಧಿಕಾರಗಳನ್ನು ಅವರಿಗೆ ಕೊಡುತ್ತಿದ್ದೇವೆ. ಆ ಅಧಿಕಾರಗಳನ್ನಾವುದನ್ನೂ ಅವು ಇನ್ನೂ ದುರುಪಯೋಗಪಡಿಸಿಕೊಂಡಿಲ್ಲ. ಪರೀಕ್ಷೆಯಂತೂ ಇನ್ನೂ ಸ್ವಲ್ಪ ಕಾಲ ಮಾಡೋಣ. ಈ ಹೊಸ ಅಧಿಕಾರಗಳನ್ನು ಎಷ್ಟರಮಟ್ಟಿಗೆ ಉಪಯೋಗಿಸುತ್ತಾರೆಂಬುವನ್ನು ನೋಡಿಕೊಂಡು ಕ್ರಮೇಣ ಈ ಅಧಿಕಾರವನ್ನೂ ಅವರಿಗೆ ಕೊಡಬೇಕೆಂದು ಹೇಳಿ ಈ ವಿಚಾರದಲ್ಲಿ ನಾನು ಶ್ರೀಮಾನ್ ಪಟ್ಟಾಭಿರಾಮರೆಡ್ಡರವರ ಸಲಹೆಯನ್ನು ಒಪ್ಪುತ್ತೇನೆ.

ಕೊನೆಯದಾಗಿ, ಎಲ್ಲರಿಗಿಂತ ಹೆಚ್ಚಿನ ಕಾಲಾವಕಾಶವನ್ನು ಮಾನ್ಯ ಅಧ್ಯಕ್ಷರು ನನಗೆ ದಯಪಾಲಿಸಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ವಂದನೆಗಳು.

Mr. SPEAKER.—I have the Budget Memorandum of Travancore-Cochin for 1951-52. Out of a total revenue of 14 crores and 87 lakhs and odd, grant for Education is 2 crores and 88 lakhs and odd. It comes to nearly 20 per cent of the revenues.

The House will now stand adjourned and will meet tomorrow at 8-30 A.M.

The Assembly adjourned at Twenty Minutes past Five of the Clock to meet again at Thirty Minutes past Eight of the Clock on Saturday, 28th June 1952.

WD 2302—GPB—500—16-8-52